**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಕರ್ನಾಟಕ ವಿಧಾನ ಪರಿಷತ್ತು**

**ದಿನಾಂಕ: 06ನೇ ಜುಲೈ 2018**
**ಶುಕ್ರವಾರ**

**ವಿಷಯಾನುಕ್ರಮಣಿಕೆ**

1. **ಸಭಾಪತಿಯವರ ಮತ್ತು ಉಪ ಸಭಾಪತಿಯವರ ಚುನಾವಣೆ ಬಗ್ಗೆ**
   - ಆಯನೂರು ಮಂಜುನಾಥ್
   - ಶ್ರೀ ಕೆ.ಬಿ.ಶಾಣಪ್ಪ
   - ಶ್ರೀ ಐವನ್ ಡಿ'ಸೋಜಾ
   - ಶ್ರೀ ಶರಣಪ್ಪ ಮಟ್ಟೂರ
   - ಡಾ:ಜಿ.ಪರಮೇಶ್ವರ್ (ಉಪ ಮುಖ್ಯಮಂತ್ರಿ)
   - ಶ್ರೀ ಕೆ.ಟಿ.ಶ್ರೀಕಂಠೇಗೌಡ
   - ಡಾ:ತೇಜಸ್ವಿನಿ ಗೌಡ
   - ಶ್ರೀ ವಿ.ಎಸ್.ಉಗ್ರಪ್ಪ
   - ಸಭಾಪತಿಯವರು
   - ಶ್ರೀ ಕೃಷ್ಣ ಬೈರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
   - ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)
   - ಶ್ರೀ ಭೋಜೇಗೌಡ
   - ಶ್ರೀ ಲಹರ್ ಸಿಂಗ್ ಸಿರೋಯಾ

2. **ನಿಯಮ 330ಎ ಮೇರೆಗೆ ವಿಶೇಷ ಪ್ರಸ್ತಾವನೆಗಳು**

**ಅ) ಚನ್ನಪಟ್ಟಣ ತಾಲ್ಲೂಕಿನ ಕಣ್ವ ಯೋಜನೆಯಲ್ಲಿ ದಶವಾರ ಮಾರ್ಗವಾಗಿ ಹಾದು ಹೋಗುವ ಗ್ರಾಮಗಳ ನೀರಾವರಿ ಕಾಲುವೆ ವ್ಯವಸ್ಥಿತವಾಗಿ ನಿರ್ಮಾಣ ಮಾಡದೇ ಇರುವ ಬಗ್ಗೆ**
   - ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ
   - ಶ್ರೀ ಸಿ.ಎಸ್.ಪುಟ್ಟರಾಜು (ಸಣ್ಣ ನೀರಾವರಿ ಸಚಿವರು)

**ಆ) ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಆನ್‌ಲೈನ್ ನಲ್ಲಿ ಆಸ್ತಿ ನೋಂದಣಿ ಪ್ರಕ್ರಿಯೆ ಬಗ್ಗೆ.**
   - ಶ್ರೀ ಎನ್.ರವಿಕುಮಾರ್
   - ಡಾ:ಜಯಮಾಲ ರಾಮಚಂದ್ರ(ಸಭಾನಾಯಕರು)

**ಇ) ರಾಜ್ಯದ 27 ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳ ಸಮವಸ್ತ್ರ ವಿತರಣೆ ಬಗ್ಗೆ.**
   - ಶ್ರೀ ಸುನೀಲ್ ಸುಬ್ರಮಣಿ
   - ಶ್ರೀ ಎಸ್.ಮಹೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

**ಈ) ಶ್ರೀ ಕೃಷ್ಣೇಗೌಡ ಇಲಿಯಾಜ್ ನಗರ, ಬೆಂಗಳೂರು ಶಾಶ್ವತವಾಗಿ ಅಂಗವಿಕಲನಾಗಿರುವುದರಿಂದ ಜೀವನೋಪಯೋಗಕ್ಕೆ ಬನಶಂಕರಿ 2ನೇ ಹಂತದಲ್ಲಿರುವ ಬಿಡಿಎ ಸಂಕೀರ್ಣದಲ್ಲಿ ಅಂಗಡಿ ಮಳಿಗೆ ಹಂಚಿಕೆ ಮಾಡುವ ಬಗ್ಗೆ.**
   - ಶ್ರೀಮತಿ ತಾರಾಅನೂರಾಧ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

– ಡಾ: ಜಯಮಾಲ ರಾಮಚಂದ್ರ(ಸಭಾನಾಯಕರು)

**3. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

**4. ವರದಿಯನ್ನೊಪ್ಪಿಸುವುದು**

**5. ಚುನಾವಣಾ ಪ್ರಸ್ತಾವಗಳು**

**6. ಗಮನ ಸೆಳೆಯುವ ಸೂಚನೆಗಳು**

**ಅ) ರಾಜ್ಯ ಸರ್ಕಾರವು ಹಿಂದುಳಿದ ವರ್ಗಗಳ ಇಲಾಖೆಗಳ ಮೂಲಕ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡಿ ಜಾತಿ ಜನಗಣತಿ ನಡೆಸಿ ವರದಿಯನ್ನು ತಯಾರಿಸಿದ್ದು, ಸದರಿ ವರದಿಯನ್ನು ಬಿಡುಗಡೆ ಮಾಡಲು ವಿಳಂಬ ಮಾಡುತ್ತಿರುವ ಬಗ್ಗೆ.**

- ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ
- ಶ್ರೀ ಸಿ.ಪುಟ್ಟರಂಗಶೆಟ್ಟಿ(ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)
- ಶ್ರೀ ಕೆ.ಸಿ.ಕೊಂಡಯ್ಯ
- ಶ್ರೀ ವಿ.ಎಸ್.ಉಗ್ರಪ್ಪ
- ಶ್ರೀ ಹೆಚ್.ಎಂ.ರೇವಣ್ಣ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)
- ಶ್ರೀ ಎನ್.ರವಿಕುಮಾರ್
- ಶ್ರೀ ಪಿ.ಆರ್.ರಮೇಶ್

**ಆ) ದಿನಾಂಕ:29.06.2017ರಂದು ಹೊರಡಿಸಿರುವ ಆದೇಶದಲ್ಲಿ ವಿಧಿಸಿರುವ ಷರತ್ತುಗಳಲ್ಲಿ “ಅನುದಾನಿತ ಶಾಲೆಯ ಫಲಿತಾಂಶವು ಕಳೆದ 5 ಶೈಕ್ಷಣಿಕ ವರ್ಷಗಳ ಸರಾಸರಿ ಫಲಿತಾಂಶಕ್ಕಿಂತ ಉತ್ತಮವಾಗಿರಬೇಕು” ಎಂಬ ಷರತ್ತನ್ನು ತೆಗೆದು ಹಾಕಬೇಕೆಂಬ ವಿಷಯದ ಬಗ್ಗೆ.**

- ಶ್ರೀ ಎಸ್.ವ್ವಿ.ಸಂಕನೂರ
- ಶ್ರೀ ಎಸ್.ಮಹೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)
- ಶ್ರೀ ಭೋಜೇಗೌಡ
- ಶ್ರೀ ವೈ.ಎ.ನಾರಾಯಣಸ್ವಾಮಿ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಶರಣಪ್ಪ ಮಟ್ಟೂರ
- ಶ್ರೀ ಐವನ್ ಡಿ’ಸೋಜಾ

– – – –

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(092) 06.07.2018 10.30 ವೈಎಲ್-ಜಿಆರ್**

**ಕರ್ನಾಟಕ ವಿಧಾನ ಪರಿಷತ್ತು**

***ಶುಕ್ರವಾರ, 6ನೇ ಜುಲೈ 2018***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಗ್ಗೆ 11 ಗಂಟೆ 39 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಯವರು**

**ಪೀಠದಲ್ಲಿ ಉಪಸ್ಥಿತರಿದ್ದರು.**

(093)/06.07.2018/10.40/ಎಸ್‌ಕೆ-ಜಿಆರ್

**ಸಭಾಪತಿಯವರು**:- ಮೊದಲಿಗೆ ನಿಯಮ 330 ತೆಗೆದುಕೊಳ್ಳೋಣ.

**1. ಸಭಾಪತಿಯವರ ಮತ್ತು ಉಪ ಸಭಾಪತಿಯವರ ಚುನಾವಣೆ ಬಗ್ಗೆ**

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ಅದಕ್ಕಿಂತ ಮುಂಚೆ ಬಹಳ ಪ್ರಮುಖವಾದ ಸಂಗತಿ ಇದೆ. ನನಗೆ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡಿ. ಇವತ್ತು ಮಾಧ್ಯಮಗಳಲ್ಲಿ ಕೂಡ ಚರ್ಚೆಯಾಗುತ್ತಿದೆ. ಈ ಸದನದ ಸದಸ್ಯರಾದ ನಾವುಗಳು ಮತ್ತು ಈ ಪೀಠದ ಬಗ್ಗೆ ಅತ್ಯಂತ ಗೌರವಪೂರ್ಣವಾದಂತಹ ಭಾವನೆಯನ್ನು ಹೊಂದಿದ್ದೇವೆ. ಈ ಸದನದ ಪೀಠದ ಬಗ್ಗೆ ಎತ್ತಿರತಕ್ಕಂಥ ಪ್ರಶ್ನೆಗೆ ಮತ್ತು ನಮ್ಮ academic interest improve ಆಗುವ ದೃಷ್ಟಿಯಿಂದ, ಸಮಂಜಸವಾದ ಮಾಹಿತಿಯನ್ನು ನೀಡಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ, ಯಾವುದೇ ಟೀಕೆ-ಟಿಪ್ಪಣೆಗೋಸ್ಕರವಲ್ಲ. ನಮ್ಮ academic interest ನಿಂದ ನಾನು ಈ ಸದನದಲ್ಲಿ ಪ್ರಸ್ತಾಪವನ್ನು ಮಾಡುತ್ತಿದ್ದೇನೆ. ಚರ್ಚೆಗೆ ಬಂದಿರುವಂತಹ ವಿಷಯವೇನೆಂದರೆ, ಮಾನ್ಯ ಹಂಗಾಮಿ ಸಭಾಪತಿಯವರ ಕಾರ್ಯವ್ಯಾಪ್ತಿಯ ಬಗ್ಗೆ ಚರ್ಚೆ ಪ್ರಾರಂಭವಾಗಿದೆ. Protem Chairman ರವರು ಪ್ರಮಾಣ ವಚನವನ್ನು ಕೊಡುವುದಕ್ಕಷ್ಟೇ ಸಿಮೀತರಾಗಿದ್ದಾರೋ ಅಥವಾ ವಿಧಾನ ಪರಿಷತ್ತಿನ ಮುಂದಿನ ಕಾರ್ಯಭಾರವನ್ನು ಸಭಾಪತಿಯವರು ನಡೆಸಬಹುದೇ? ಕಳೆದ ಸುಮಾರು 50-60 ವರ್ಷಗಳಿಂದ ಇಲ್ಲಿ ಒಂದು ರೀತಿಯ ಸಂಪ್ರದಾಯ ನಡೆದುಕೊಂಡು ಬಂದಿದೆ. ಅಕಸ್ಮಾತ್ ಮಾನ್ಯ ಹಂಗಾಮಿ ಸಭಾಪತಿಯವರು ಸಭಾ ನಡುವಳಿಕೆಯನ್ನು ನಡೆಸುವಂಥದ್ದಲ್ಲ ಎಂಬ ಪ್ರಶ್ನೆ ಬಂದರೆ, ಸರ್ಕಾರ ನಡೆಸುತ್ತಿರುವಂತಹ ಈ ಎಲ್ಲಾ ನಡವಳಿಕೆಗಳ ಸ್ಥಿತಿಗತಿಗಳೇನು ಎಂಬ ಬಹಳ ದೊಡ್ಡ ಅಂಶಗಳು ಚರ್ಚೆಗೆ ಒಳಗಾಗುತ್ತಿವೆ. ಗೌರವಾನ್ವಿತ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ಚರ್ಚೆಯನ್ನು ನಾವು ಮುಗಿಸಿದ್ದೇವೆ. ಮತ್ತು ವಂದನಾ ನಿರ್ಣಯವನ್ನು ನಾವು ಅನುಮೋದಿಸಿದ್ದೇವೆ. ಬಹಳ ದೊಡ್ಡ ಪ್ರಮುಖ ಸಂಗತಿ ಎಂದರೆ, ಈ ರಾಜ್ಯದ ಬಜೆಟ್ ಮಂಡನೆಯಾಗಿದೆ. ಬಜೆಟ್ ಮಂಡನೆಯಾಗಿರುವಾಗ ಮತ್ತು ಇದರ ಮೇಲೆ ನಾವು ಅನುಮತಿಯನ್ನು ಕೊಡುವಾಗ ಅಕಸ್ಮಾತ್ ಅಂದರೆ, ನಾನು ಪ್ರಾರಂಭದಲ್ಲಿ ಹೇಳಿದ್ದೇನೆ. ನನ್ನ ಅಕಾಡೆಮಿಕ್ ಮತ್ತು ನಾಲೆಡ್ಜ್ ದೃಷ್ಟಿಯಿಂದ ಮಾನ್ಯ ಹಂಗಾಮಿ ಸಭಾಪತಿಯವರು ಈ ತರಹ ನಡವಳಿಕೆ ನಡೆಸುವುದಕ್ಕೆ ಬರುವುದಿಲ್ಲವಾದಂತಹ ಪಕ್ಷದಲ್ಲಿ ನಾವು ಪಾಸು ಮಾಡುವಂತಹ ಬಜೆಟ್‌ಗೆ sanctity ಮಾನ್ಯತೆ ದೊರೆಯುತ್ತದೆಯೋ? ಅಥವಾ ಮೊನ್ನೆಗೆ ಗೌರವಾನ್ವಿತ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ನಾವು ಸ್ವೀಕಾರ ಮಾಡಿದ್ದೇವೆಯಲ್ಲಾ, ಅದರ ಬಗ್ಗೆ ಮಾನ್ಯತೆ ಸಿಗುತ್ತಾ? ಇದರ ಬಗ್ಗೆ ಸರ್ಕಾರ ಏಕೆ ಗಂಭೀರವಾಗಿ ಇನ್ನೂ ಆಲೋಚನೆಯನ್ನು ಮಾಡಿಲ್ಲ.

ಮಾನ್ಯ ಸಭಾಪತಿಯವರೇ, ಮುಂದಿನ ಅಧಿವೇಶನ ಎಂದು ಹೇಳಿದ್ದಾರೆ. ಆದರೆ, ರಾಜ್ಯಪಾಲರ ಭಾಷಣ ಮುಗಿದ ನಂತರ ಮುಂದಿನ ಅಧಿವೇಶನ ಪ್ರಾರಂಭವಾಗಿ ಬಿಟ್ಟಿತು. ವ್ಯಕ್ತಿಗತವಾಗಿ ನನಗೆ ಅನಿಸುತ್ತದೆ, ಮೊದಲನೇ ಪ್ರಕ್ರಿಯೆ ನಡೆಯಬೇಕಾಗಿದ್ದು, ಮಾನ್ಯ ಸಭಾಪತಿಗಳ ಚುನಾವಣೆ, ಇದು ಆಗಿಲ್ಲ. ದುರಾದೃಷ್ಟವಷಾತ್ ಉಪ ಸಭಾಪತಿಗಳು ಕೂಡ ಇಲ್ಲ. ಅವರು ಮತ್ತೊಮ್ಮೆ ಆಯ್ಕೆಯಾಗಿ ಮಾನ್ಯ ಸದಸ್ಯರಾಗಿ ಬಂದಿದ್ದಾರೆ. ಹಾಗಾಗಿ, ಒಂದು ಅರ್ಥದಲ್ಲಿ ಹೇಳಬೇಕಾದರೆ, ಬೇರೆ ಹೊರಗಿನ ಚರ್ಚೆಯ ಆಧಾರದ ಮೇಲೆ ಸಭಾಪತಿಯ ಪೀಠವು ಖಾಲಿಯಾಗಿದೆಯೋ ಅಥವಾ ಭರ್ತಿಯಾಗಿದೆಯೋ ಎನ್ನುವಂತಹ ಪ್ರಶ್ನೆಯ ಜಿಜ್ಞಾಸೆ ನಾನೊಬ್ಬ ಈ ಸದನದ ಸದಸ್ಯನಾಗಿ ನನ್ನ ಮನಸ್ಸಿನಲ್ಲಿ ಬಂದಿದೆ. ಏಕೆಂದರೆ ನಾಳೆ ದಿವಸ ಇಲ್ಲಿ ಮಾಡತಕ್ಕಂಥ ಎಲ್ಲಾ proceedings

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದಾದರೂ ಭಾಗದೊಳಗೆ ಯಾರಾದರೂ ಮಾನ್ಯ ನ್ಯಾಯಾಲಯಗಳಲ್ಲಿ ಅಥವಾ ಇನ್ನೊಂದರಲ್ಲಿ ಪ್ರಶ್ನೆ ಮಾಡಿದಾಗ ಇದು ಕಾನೂನುಬಾಹಿರ ಎಂದು ಆಗಿಬಿಟ್ಟರೆ, ನಮ್ಮ ಸದನ ಇತಿಹಾಸದಲ್ಲಿ ಬಹಳ ದೊಡ್ಡ 'ಕಪ್ಪು ಚುಕ್ಕೆ' ಆಗಿ ಬಿಡುತ್ತದೆ. ಆ ದೃಷ್ಟಿಯಿಂದ ನಾವು ಯಾವುದೇ proceedings ಅನ್ನು ಪ್ರಾರಂಭ ಮಾಡುವ ಮೊದಲು ಇದಕ್ಕೊಂದು ಸ್ಪಷ್ಟವಾದ ನಿಲುವುನ್ನು ಪೀಠ ಅಥವಾ ಸರ್ಕಾರದ ಕಡೆಯಿಂದ ಇದರ ಬಗ್ಗೆ ಕಾನೂನಿನ ಮಾಹಿತಿ ಇರತಕ್ಕಂಥಹವರು ಸಲಹೆ ಕೊಟ್ಟರೆ, ಹೊಸ ಸದಸ್ಯರಾಗಿ ಬಂದಿರುವಂತಹ ನಮಗೆ ಬಹಳ ದೊಡ್ಡ ಉಪಕಾರವಾಗುತ್ತದೆ ಎನ್ನುವ ಹಿನ್ನೆಲೆಯಲ್ಲಿ, ತಮ್ಮನ್ನು ನಿವೇದಿಸಿಕೊಳ್ಳುತ್ತಿದ್ದೇನೆ. ಇದರಲ್ಲಿ ಯಾವುದೇ ವ್ಯಕ್ತಿಗತವಾದ ಪ್ರಶ್ನೆಯಿಲ್ಲ. ನಿಯಮಾವಳಿಯ ಪ್ರಶ್ನೆಯನ್ನು ಮಾತ್ರ ತಮ್ಮ ಮುಂದೆ ಇಟ್ಟಿದ್ದೇನೆ. ತಾವು ಅತ್ಯಂತ ಹಿರಿಯ ಸದಸ್ಯರು. ತಾವು ಕೂಡ ಉತ್ತರಿಸುವುದಕ್ಕೆ ಸಮರ್ಥರಿದ್ದೀರಿ. ಆದರೆ ಪೀಠದ ಬಗ್ಗೆ ನಾನು ತಮ್ಮನ್ನು ಕೇಳುತ್ತಿದ್ದೇನೆ. ಆದರೆ, ವ್ಯಕ್ತಿಗತವಾಗಿ ಅಲ್ಲ. ಹಾಗಾಗಿ, ಇದರ ಬಗ್ಗೆ ಒಮ್ಮೆ ಪರಿಹಾರವಾದ ನಂತರ ಸಭಾ ನಡವಳಿಕೆಗಳನ್ನು ಮುಂದುವರೆಸುವುದು ಸೂಕ್ತವೆಂದು ನಾನು ವ್ಯಕ್ತಿಗತವಾಗಿ ಭಾವಿಸುತ್ತೇನೆ. ನಾನು ಇಷ್ಟು ಮಾತುಗಳನ್ನು ಹೇಳುತ್ತಾ, ತಮಗೆ ಮತ್ತು ಈ ಸದನಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಕೆ.ಬಿ. ಶಾಣಪ್ಪನವರು.

**ಶ್ರೀ ಕೆ.ಬಿ. ಶಾಣಪ್ಪ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ತಾವು ಈ ಮನೆಯ ಅತಿ ಹಿರಿಯ ಸದಸ್ಯರು. ಈ ಸದಸ್ಯರಲ್ಲದೇ, ಇಡೀ ರಾಜ್ಯದ ಜನತೆ ತಮ್ಮ ಬಗ್ಗೆ ಗೌರವದಿಂದ ನೋಡುತ್ತಿದ್ದಾರೆ. ತಾವು ಆ ಪೀಠದಲ್ಲಿ ಕುಳಿತಿದ್ದೀರಿ. ತಾವಾಗಿಯೇ ಪೀಠದಲ್ಲಿ ಕುಳಿತಿಲ್ಲ. ಈ ಸರ್ಕಾರ ಗೌರ್ನರ್ ಅಂತಾ ತಮ್ಮನ್ನು ಒಂದು purposeಗಾಗಿ Protem Chairman ಎಂದು ನೋಟಿಫಿಕೇಷನ್ ಮಾಡಿದೆ. Practice and Procedure of Parliament, written by Sri M.N.Kaul and S.L.Shakdher ಅನ್ನು ಕೂಡ ನಾವು ರೆಫರ್ ಮಾಡಿದ್ದೇವೆ. ಅದರಲ್ಲಿ ಎಲ್ಲೂ ಇವರನ್ನು regular session ನಡೆಸಬೇಕೆಂಬಂತಹ ವಿಷಯದ ಬಗ್ಗೆ ಅವರು ಚರ್ಚೆಯನ್ನು ಮಾಡಿಲ್ಲ. ಒಂದು ವೇಳೆ, ಅಂತಹ ಪರಿಸ್ಥಿತಿ ಬಂದರೆ that is illegal ಎಂಬಂತಹ ಒಂದು ನಿರ್ಣಯ ಕೂಡ ಅದರಲ್ಲಿ ರೆಫರ್ ಮಾಡಿದ್ದಾರೆ. ಪುಟ ಸಂಖ್ಯೆ. 440 ರಲ್ಲಿ ಅದು ಇದೆ. ಅದಕ್ಕಾಗಿ ನಮ್ಮ ಕಳಕಳಿ ಏನೆಂದರೆ, ತಮ್ಮ ಇಡೀ ನಲವತ್ತು ವರ್ಷದ ರಾಜಕೀಯದಲ್ಲಿ ತಮಗೆ ಯಾವುದೇ ಕಪ್ಪುಚುಕ್ಕೆ ಇಲ್ಲ. ಅಲ್ಲಿ ತಮಗೆ ಯಾವುದಾದರೂಂದು ನಿರ್ಣಯ ಅಥವಾ ತಾವು ಅಲ್ಲಿ ಕುಳಿತುಕೊಂಡು ಏನಾದರೂ ಒಂದು ಸಂದೇಶ ಕೊಟ್ಟರೆ, ಅವೆಲ್ಲಾ ಕಾನೂನುಬಾಹಿರ ಆಗಬಹುದು ಎನ್ನುವಂತಹ ಸಂಶಯ ನಮ್ಮ ಬಳಿ ಇದೆ. ಸಂಸದೀಯ ವ್ಯವಹಾರಗಳ ಮಂತ್ರಿಗಳು, ಸರ್ಕಾರದವರು

ಮಾಡಬೇಕಾದಂತಹ ಕೆಲಸ ತಮ್ಮದು. Protem Chairman ಕೆಲಸ ಮುಗಿದ ಕೂಡಲೇ ಹೊಸ ಸಭಾಪತಿಯವರನ್ನು ಆಯ್ಕೆ ಮಾಡುವುದು. ಉಪ ಸಭಾಪತಿಯವರನ್ನು ಆಯ್ಕೆ ಮಾಡುವಂತಹ ಕೆಲಸದಲ್ಲಿ ಅವರು failure ಆಗಿದ್ದಾರೆ ಎಂದು ನಾನು ಅವರ ಮೇಲೆ direct attack ಮಾಡುತ್ತಿದ್ದೇನೆ. The Government has failed themselves. They never thought about your Chair. This is an insult to the Karnataka Legislative Council. ಅದಕ್ಕಾಗಿ, ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡುತ್ತೇನೆ. ಇದರ ಬಗ್ಗೆ ಒಂದು ಇತ್ಯರ್ಥವಾಗಲಿ. ತಾವು ಆ ಪೀಠದಲ್ಲಿ ಕುಳಿತು ಅನೇಕ ಬಿಲ್‌ಗಳನ್ನು ಪಾಸ್ ಮಾಡುತ್ತೀರಿ. ನಮ್ಮ ಸ್ನೇಹಿತರು ಹೇಳಿದಂತೆ ಫೈನಾನ್ಸ್ ಬಿಲ್‌ಗಳನ್ನು ಪಾಸ್ ಮಾಡಬೇಕಾದರೆ, ಅದು ಬಹಳ ಗೊಂದಲದ ಕೆಲಸ. ಅದಕ್ಕಾಗಿ ತಾವು ದಯಮಾಡಿ, ಇದರ ಬಗ್ಗೆ ಏನು ನಿರ್ಣಯ ಕೊಡುತ್ತೀರಿ ಅದು ತಮಗೆ ಮತ್ತು ಸರ್ಕಾರಕ್ಕೆ ಬಿಟ್ಟಿದ್ದು. ನಮ್ಮ ಅನಿಸಿಕೆ ಮತ್ತು ಜನರು ಮಾತನಾಡುವುದನ್ನು ತಮ್ಮ ಗಮನಕ್ಕೆ ತಂದಿದ್ದೇನೆ.

**ಸಭಾಪತಿಯವರು**:- ಮಾನ್ಯ ಐವನ್ ಡಿ'ಸೋಜಾರವರೇ, ತಾವು ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನ ಹೊಂದಿದವರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀ ಕೆ.ಬಿ.ಶಾಣಪ್ಪನವರು ಮತ್ತು ಮಾನ್ಯ ಶ್ರೀ ಆಯನೂರು ಮಂಜುನಾಥ್‌ರವರು ಈ ವಿಚಾರದ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದಾರೆ. ಇವತ್ತು ಇದರ ಬಗ್ಗೆ ಕೆಲವು ಪತ್ರಿಕೆಗಳಲ್ಲಿ ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿಯೂ ಕೂಡ ಚರ್ಚೆಯಾಗುತ್ತಿದೆ. ಸದನದ ಒಂದು ನಿಯಮದಡಿಯಲ್ಲಿ ನಾವು ಕಾರ್ಯನಿರ್ವಹಣೆ ಮಾಡಬೇಕಾದ ಅವಶ್ಯಕತೆ ಇದೆ. ಈ ವಿಚಾರದ ಬಗ್ಗೆ ನಾನು ಕೂಡ ಇತರರೊಡನೆ ಚರ್ಚೆ ಮಾಡುತ್ತಿದ್ದೇನೆ. ಇವತ್ತು ನಮ್ಮ ಭಾರತದ ಸಂವಿಧಾನದ Article 184ರ ಪ್ರಕಾರ "ಮಾನ್ಯ ಸಭಾಪತಿಯಾಗಿ ಕಾರ್ಯನಿರ್ವಹಿಸಲು ಅಥವಾ ಸಭಾಪತಿ ಪದದ ಸ್ಥಾನದಲ್ಲಿ ಕರ್ತವ್ಯವನ್ನು ನೇರವೇರಿಸಲು ಉಪಸಭಾಪತಿ ಅಥವಾ ಇತರ ವ್ಯಕ್ತಿಗಳ ಅಧಿಕಾರ. ಮಾನ್ಯ ಸಭಾಪತಿಯವರ ಪದವು ಖಾಲಿಯಾಗಿರುವಾಗ ಆ ಪದದ ಕರ್ತವ್ಯಗಳನ್ನು ಉಪಸಭಾಪತಿ ನೇರವೇರಿಸತಕ್ಕದ್ದು. In our case, ಉಪಸಭಾಪತಿಗಳು ಕೂಡ ಇಲ್ಲ ಕಾರ್ಯ ನೇರವೇರಿಸುತ್ತಿಲ್ಲ. ಭಾರತ ಸಂವಿಧಾನದ ಅನುಚ್ಛೇದ 184 ದಲ್ಲಿ ಮುಂದುವರೆದು ಅಥವಾ 'ಉಪಸಭಾಪತಿಯ ಹುದ್ದೆಯು ಖಾಲಿಯಾಗಿದ್ದಲ್ಲಿ, ಆ ಉದ್ದೇಶಕ್ಕಾಗಿ ರಾಜ್ಯಪಾಲರು ನೇಮಕ ಮಾಡಬಹುದಾದಂತಹ ಪರಿಷತ್ತಿನ ಸದಸ್ಯನು ಸಭಾಪತಿ ಪದದ ಕರ್ತವ್ಯವನ್ನು ನೇರವೇರಿಸತಕ್ಕದ್ದು' ಎಂದು ಇದೆ. As an Advocate, ನನ್ನ ಪ್ರಕಾರ ಸಭಾಪತಿ ಮತ್ತು ಉಪಸಭಾಪತಿ ಹುದ್ದೆಗಳು ಖಾಲಿಯಿದ್ದಾಗ, ಗೌರವಾನ್ವಿತ ರಾಜ್ಯಪಾಲರು ಈ ಸದನದ ಹಿರಿಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದಸ್ಯರನ್ನು ಸಭಾಪತಿಯನ್ನಾಗಿ ನೇಮಕ ಮಾಡಿದ್ದಾರೆ. This is the Constitution. ಇವತ್ತೇ ಮಾಡಬೇಕು ಅಥವಾ ನಾಳೆಯೇ ಮಾಡಬೇಕೆಂಬುದನ್ನು ಸಂವಿಧಾನದಲ್ಲಿ ಎಲ್ಲಿಯೂ ಹೇಳುತ್ತಿಲ್ಲ. ಆದರೆ, ನಮಗೆ ಆದಂತಹ Rules of Procedure and Conduct of Business in the Karnataka Legislative Council ಇದೆ. ನಾವು ನಮ್ಮ ಸದನದಲ್ಲಿ business rules ನ್ನು ಮಾಡಿಕೊಂಡಿದ್ದೇವೆ. Chapter III of the Rules of Procedure and Conduct of Business in the Karnataka Legislative Council deals with **'Election of Chairman and Deputy Chairman and Panel of Chairmen'.** Under the head 'Election of Chairman' Rule 7(6) reads thus:

> "The date so fixed should be not later than immediate next session for the election of Chairman when the post is vacant."

ಅಂದರೆ, ಈ ಅಧಿವೇಶನ ಕರೆದ ಒಳಗಡೆ, ಮುಂದಿನ ಅಧಿವೇಶನದ ಒಳಗಡೆ ನಾವು ಮಾನ್ಯ ಸಭಾಪತಿಯವರನ್ನು ಆಯ್ಕೆ ಮಾಡಬೇಕು ಎಂದು ಹೇಳುತ್ತದೆ. That is how we are here now. ಈ ಅಧಿವೇಶನವು ನನ್ನ ಪ್ರಕಾರ ಮತ್ತು ಈಗಿನ ನೋಟಿಫಿಕೇಷನ್‌ನ ಪ್ರಕಾರ will continue upto 12th of this month.

(ಮುಂದು...)

**(94) 06.07.2018 ಟಿಸಿಹೆಚ್/ಎಂಡಿ 10.50**

**ಶ್ರೀ ಐವನ್ ಡಿ'ಸೋಜಾ (ಮುಂದು)**

ನಮ್ಮ ನಿಯಮಗಳ ಪ್ರಕಾರ ಸನ್ಮಾನ್ಯ ರಾಜ್ಯಪಾಲರಿಂದ ಮಾನ್ಯ ಸಭಾಪತಿಯವರ ಚುನಾವಣೆ ನಡೆಸುವಂತೆ ಈ ಅಧಿವೇಶನದಲ್ಲಿ ಸಂದೇಶ ಬಂದರೆ, three days prior notice is required to be issued from the Government. ಮಾನ್ಯ ಆಯನೂರು ಮಂಜುನಾಥ್‌ರವರಿಗೆ ಗೊತ್ತಾಯಿತು. ಮೂರು ದಿವಸದ ನೋಟೀಸ್ ಕೊಟ್ಟು ಮಾನ್ಯ ಸಭಾಧ್ಯಕ್ಷರ ಚುನಾವಣೆ ಮಾಡುವುದು ಇದೆ. ಆದಾಗ್ಯೂ, ಇನ್ನೂ ಐದಾರು ದಿವಸಗಳ ಕಾಲ ಈ ಸದನ ನಡೆಯಲು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಯ ಇದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಇದುವರೆಗೂ ಈ ಸದನ ನಡೆಯುತ್ತಿದೆ, ಏನು ನಮ್ಮ ಸದಸ್ಯ ಮಿತ್ರರು ಆಫರ್ ಮಾಡಿ ಇದು ಕಾನೂನುಬಾಹಿರವಾಗುತ್ತದೆಯೇ ಎಂದು ಕೇಳಿದರು. He never said it is illegal. ಅವರು illegal ಎಂದು ಹೇಳಲಿಲ್ಲ. ಅವರು ಆ ಪದವನ್ನು ಬಳಕೆ ಮಾಡಲಿಲ್ಲ, ಈ ಸದನದ ಘನತೆ ಮತ್ತು ಗೌರವವನ್ನು ಕಾಪಾಡುವುದಕ್ಕೋಸ್ಕರ I will also join with him and to say that, ಈ ಸದನದಲ್ಲಿ ಇದುವರೆಗೂ ನಡೆದಿರುವಂಥದ್ದು as per the provisions of the Constitution of India and as per the directions of the Governor of the State of Karnataka. ಇನ್ನೂ ನಾಲ್ಕೈದು ದಿವಸಗಳ ಕಾಲ ಸಮಯವಿದೆ. ಆ ಬಗ್ಗೆ ಸರ್ಕಾರ ಏನು ಉತ್ತರ ಕೊಡುತ್ತದೆ ಎಂಬುದನ್ನು ನಾವು ಕಾದು ನೋಡಬೇಕೇ ಹೊರತು, ಬೇರೆ ಏನೂ ಕಾನೂನುಬಾಹಿರವಾಗಿಲ್ಲವೆಂದು ಮತ್ತು ಇದುವರೆಗೂ ನಡೆದಂತಹ ಗೌರವಾನ್ವಿತ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮಾಡಿದಂತಹ ಚರ್ಚೆ ಇರಬಹುದು, ಬಜೆಟ್ ಮಂಡನೆ ಇರಬಹುದು, ಇದೆಲ್ಲವೂ ಕಾನೂನುಬದ್ಧವಾಗಿದೆ. ಹಾಗಾಗಿ, ಮುಂದೆ ಇರುವಂಥದ್ದು, 12ನೇ ತಾರೀಖಿನೊಳಗೆ ಈ ಸದನದಲ್ಲಿ ಎಲ್ಲೋ ಒಂದು ಕಡೆ ಮಾನ್ಯ ಸಭಾಪತಿಯವರ ಚುನಾವಣೆ ಆಗಬೇಕು ಎಂದು ಹೇಳುವಂಥದ್ದನ್ನು ಈ ನಿಯಮಗಳ ಪುಸ್ತಕ ಹೇಳುತ್ತದೆ ಎಂಬುದನ್ನು ನಾನು ತಮ್ಮ ಗಮನಕ್ಕೆ ಹಾಗೂ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. I am not replying to my friends. I am not replying either to Sri K.B.Shanappa or to Sri Aayanuru Manjunath. I am giving my opinion that, ಇದುವರೆಗೂ ನಾವು ಕಾನೂನುಬದ್ಧವಾಗಿ ಇದ್ದೇವೆ ಎಂದು ಈ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು**:- ಮಾನ್ಯ ಶರಣಪ್ಪ ಮಟ್ಟೂರರವರೇ ತಾವು ಮಾತನಾಡಿ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಇಂದು ನಮ್ಮ ಹಿರಿಯ ಮಿತ್ರರಾಗಿರತಕ್ಕಂಥ ಮಾನ್ಯ ಆಯನೂರು ಮಂಜುನಾಥ್‌ರವರು ಪ್ರಸ್ತಾಪಿಸಿರತಕ್ಕಂತಹ ಗಂಭೀರವಾದ ವಿಚಾರದ ಬಗ್ಗೆ ಈಗಾಗಲೇ ನನ್ನ ಮಿತ್ರರಾಗಿರತಕ್ಕಂಥ ಶ್ರೀ ಐವನ್ ಡಿ'ಸೋಜಾರವರು ಸಹ ಮಾತನಾಡಿದ್ದಾರೆ. ಇಲ್ಲಿ again I would like to reiterate the provisions of the Constitution. Article 184 of the Constitution of India is very clear. ಅದನ್ನು ನಾನು ಇನ್ನೊಂದು ಬಾರಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದು ಎರಡನೇ ಬಾರಿ ಎಂದೆನಿಸುತ್ತದೆ, ಆದರೂ ಕೂಡ ಓದುತ್ತೇನೆ;

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**Article 184 in The Constitution Of India**

*"184. Power of the Deputy Chairman or other person to perform the duties of the office of, or to act as, Chairman.*

*1. While the office of Chairman is vacant, the duties of the office shall be performed by the Deputy Chairman or, if the office of Deputy Chairman is also vacant, by such member of the council as the Governor may appoint for the purpose.*

*2. During the absence of the Chairman from any sitting of the Council the Deputy Chairman or, if he is also absent, such person as may be determined by the rules of procedure of the Council, or, if no such person is present, such other person as may be determined by the Council, shall act as Chairman."*

ಇಲ್ಲಿ Deputy Chairman ಇಲ್ಲ. ಮಾನ್ಯ ಸಭಾಪತಿಯವರೇ, ತಮ್ಮ ಗಮನಕ್ಕೆ ತರುವುದೇನೆಂದರೆ, ಗೌರವಾನ್ವಿತ ರಾಜ್ಯಪಾಲರವರು ದಿನಾಂಕ:21.06.2018ರಂದು ತಮ್ಮನ್ನು ಈ ಸದನದ ಸಭಾಪತಿಯವರನ್ನಾಗಿ ನೇಮಕ ಮಾಡಿ ಆದೇಶ ಮಾಡಿರತಕ್ಕಂಥ ಪ್ರತಿಯನ್ನು ಕೂಡ ಇಲ್ಲಿ refer ಮಾಡುವುದಕ್ಕೆ ಬಯಸುತ್ತೇನೆ. ತಾವು ಗೌರವಾನ್ವಿತ ರಾಜ್ಯಪಾಲರ ಆದೇಶದ ಪ್ರಕಾರ ಆ ಸ್ಥಾನವನ್ನು ಅಲಂಕರಿಸಿದ್ದೀರಿ. ಕಾನೂನಿನ ಅಡಿಯಲ್ಲಿ ಸಂವಿಧಾನವು ಕೂಡ ತಮಗೆ ಆ ಶಕ್ತಿಯನ್ನು ಕೊಟ್ಟಿದೆ. ಸರ್ಕಾರ ಕೂಡ ಕಾನೂನಿನ ರೀತ್ಯಾ ತಮ್ಮನ್ನು ಇಲ್ಲಿ ಮಾನ್ಯ ಸಭಾಪತಿಯವರ ಸ್ಥಾನಕ್ಕೆ ಆಯ್ಕೆ ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**In Chapter-III - Rules of Procedure and Conduct of Business in the Karnataka Legislative Council,** it is mentioned as:

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*"Rule 7(6): The date so fixed should be not later than immediate next session for the election of Chairman when the post is vacant."*

The language of Article 184 of the Constitution of India, the language of Rule 7(6) of Rules of Procedure and Conduct of Business is very clear. The Government has acted in accordance with the rule of law and as well as in accordance with the provisions of the Constitution of India. The Governor has appointed you as the Chairman. ತಮ್ಮನ್ನು ಕೂಡ ಆಯ್ಕೆ ಮಾಡಿದ್ದಾರೆ. ಹಾಗಾಗಿ, ಇಲ್ಲಿ ತಾವು ನಡೆಸತಕ್ಕಂಥ ನಡವಳಿಕೆ ಯಾವುದೇ ರೀತಿಯಲ್ಲಿ ಕಾನೂನಿಗೆ ವಿರುದ್ಧವಾಗಿ ಆಗುವುದಿಲ್ಲ. ಸರ್ಕಾರವು ಕೂಡ ತಮ್ಮನ್ನು, His Excellency, the Governor of Karnataka has appointed you by an order dated 21.06.2018. ಇಲ್ಲಿ ಯಾವುದೇ ಪ್ರಮಾದವು ಆಗಿಲ್ಲ ಎನ್ನತಕ್ಕಂಥ ಮನವಿಯನ್ನು ತಮ್ಮಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಈಗ ನಮಗೆ stricto sensu (narrow sense) ಎಂದರೆ, ನಾವು ಇದನ್ನು interpret ಮಾಡುತ್ತಾ ಬಂದರೆ, ಎಲ್ಲಿಯೂ ಕೂಡ ಪ್ರಮಾದ ಆಗಿಲ್ಲ. ನಮಗೆ ಇನ್ನೂ ಸಮಯ ಇದೆ. ಮುಂದಿನ ಅಧಿವೇಶನ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ನಮಗೆ 12ನೇ ತಾರೀಖಿನವರೆಗೆ ಮಾನ್ಯ ಸಭಾಪತಿಯವರನ್ನು ಆಯ್ಕೆ ಮಾಡಲು ಅವಕಾಶವಿದೆ. You have been appointed in accordance with the provisions of the Constitution of India.

**Sri K.B.SHANAPPA (Nominated):-** Mr. Chairman, The Governor has appointed you for the purpose of giving oath. ಈ ರೀತಿ interpretation ಮಾಡುವುದಾದರೆ ನಾಳೆಯ ದಿವಸ ಚುನಾವಣೆಯೇ ಬೇಡ ಎನ್ನುತ್ತೀರಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀ ಕೆ.ಬಿ.ಶಾಣಪ್ಪನವರು ನನಗೆ ಮಾತನಾಡಲು ಅವಕಾಶ ಮಾಡಿಕೊಡಲಿ.

**ಸಭಾಪತಿಯವರು:-** ಮಾನ್ಯ ಕೆ.ಬಿ.ಶಾಣಪ್ಪನವರೇ, ಶ್ರೀ ಶರಣಪ್ಪ ಮಟ್ಟೂರರವರು ಮಾತನಾಡಲಿ, ತಮಗೂ ಮಾತನಾಡಲು ಅವಕಾಶ ಕೊಡುತ್ತೇನೆ.

**Sri SHARANPPA MATTUR:-** Sir, you are a Senior Member.

**ಡಾ||ಜಿ.ಪರಮೇಶ್ವರ (ಉಪ ಮುಖ್ಯಮಂತ್ರಿಗಳು, ಒಳಾಡಳಿತ, ಬೆಂಗಳೂರು ಅಭಿವೃದ್ಧಿ ನಗರ ಯೋಜನೆ, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ):-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಅನುಮತಿ ಪಡೆದು ಮಾತನಾಡುತ್ತಿದ್ದೇನೆ. ಗೌರವಾನ್ವಿತ ರಾಜ್ಯಪಾಲರ Notification ನ್ನು ತಾವು ನೋಡಿದ್ದೀರಿ ಅಂದುಕೊಂಡಿದ್ದೇನೆ. ಇದರ ಬಗ್ಗೆ ಅವರು ಬಹಳ clear ಆಗಿ ತಿಳಿಸಿದ್ದಾರೆ.

> *"In exercise of the powers conferred by clause 1 of Article 184 of the Constitution of India, I Vajubhaivala, Governor of Karnataka, do hereby appoint Sri Basavaraj Horatti, the member of the Legislative Council to perform the duties of the Office of the Chairman."*

It doesn't indicate only this particular duty you have to perform. ಅವರು ಇಷ್ಟೇ ಮಾಡಬೇಕು, ಇಂಥದ್ದೇ ಮಾಡಬೇಕೆಂದು ಅವರೇನಾದರೂ specify ಮಾಡಿದ್ದಾರೆಯೇ? The Chairman has been appointed under the provisions of Article 184 of the Constitution. What does it say? It says he has been appointed to perform the duties of the Chairman and he his performing the duties of the Chairman. It doesn't specify that, you have to perform only this duty and not the other duties. Chairman's duties are defined here. ನಮ್ಮಲ್ಲಿ ನಾವೇ define ಮಾಡಿಕೊಂಡಿದ್ದೇವೆ. As long as ಎಂದು ಇಲ್ಲ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri SHARANAPPA MATTUR:-** Sir, When the provisions of the Constitution is very clear, being a senior member of the House, let him try to understand.

**ಸಭಾಪತಿಯವರು:-** ಮಾನ್ಯ ಶರಣಪ್ಪ ಮಟ್ಟೂರರವರೇ, ತಾವು ಮಾತನಾಡಬೇಡಿ. ಮಾನ್ಯ ಶ್ರೀ ಕೆ.ಬಿ.ಶಾಣಪ್ಪನವರೇ ತಾವು ಮಾತನಾಡಿ. ಅವರು ಮಾತನಾಡಿ ಮುಗಿಸುವವರೆಗೆ ಬೇರೆ ಯಾರೂ ಮಾತನಾಡಬೇಡಿ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ನನ್ನ ಅನಿಸಿಕೆ ಇಷ್ಟೇ. ಇಲ್ಲಿ process ಇದೆ. ಆ purpose ಮುಗಿದ ಕೂಡಲೇ it is a practice since last 60 years. ಕೆಳಗಿನ ಸದನದ್ದು ಆಗಿರಬಹುದು, ನಾಳೆ ದಿವಸ ಕೆಳಮನೆಯಲ್ಲಿ ಸ್ಪೀಕರ್‌ರವರು ಹಾಗೆಯೇ ತಾವು ಮುಂದುವರೆಸಬಹುದು ಎನ್ನಬಹುದು. He is appointed by the Governor. It can't be considered like that. For certain action he has been asked to look after the business for the new members to perform oath taking ceremony. It is a practice since last 70 years throughout the country that, as soon as that function is over, he is going to vacate the post. And the Government is going to notify election for the post of the Chairman and Deputy Chairman. That is the process what I have seen. But, in this business the Government has not done that. That is my concern. If you say that, the Governor say is quite clear, that he has given concurrence for all proceedings to be done without the concurrence of the Hon'ble members, then I am not having any objection for it. If, this is the practice you wanted to adopt, then don't issue any Notification for the Chairman's election in future.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ||ಜಿ.ಪರಮೇಶ್ವರ (ಉಪ ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ಅದಕ್ಕಾಗಿಯೇ ಅವರು provisions of the Constitution ಅನ್ನು quote ಮಾಡಿದ್ದಾರೆ. He has not just issued a notification to appoint the Chairman. ಅವರು ಅಷ್ಟೇ ಮಾಡಿಲ್ಲ, ಅವರು ಅಷ್ಟೇ ಮಾಡಿದ್ದರೆ; ಹೌದು, ತಾವು ಹೇಳುವುದು ಸರಿಯಾಗಿದೆ ಎನ್ನಬಹುದಾಗಿತ್ತು. ಆದರೆ, ಭಾರತ ಸಂವಿಧಾನದ ಅನುಚ್ಛೇದ 184ನಲ್ಲಿ ಏನು ಹೇಳುತ್ತದೆ (ಗೊಂದಲ) ಕಾನೂನನ್ನು ನಮಗೊಂದು ರೀತಿ, ನಿಮಗೊಂದು ರೀತಿ ಎಂದು ಮಾಡುವುದಿಲ್ಲ. ಕಾನೂನನ್ನು ಈ ಸದನದ ಗೌರವವನ್ನು ಕಾಪಾಡುವಂತಹ ರೀತಿಯಲ್ಲಿಯೇ ಅವರು ಮಾಡಿದ್ದಾರೆ. Let me remind you please... (ಗೊಂದಲ) ಭಾರತದ ಸಂವಿಧಾನ ಅನುಚ್ಛೇದ 184ರಲ್ಲಿ;

*"184. Power of the Deputy Chairman or other person to perform the duties of the office of, or to act as, Chairman.*

*1. While the office of Chairman is vacant, the duties of the office shall be performed by the Deputy Chairman or, if the office of Deputy Chairman is also vacant, by such member of the council as the Governor may appoint for the purpose."*

Interim ಅಥವಾ pro tem ಇದನ್ನೆಲ್ಲಾ ಅಲ್ಲಿ define ಮಾಡಲಿಲ್ಲ. ಮುಂದುವರೆದು ನಮ್ಮ ನಿಯಮ ಏನಿದೆ, ಅದರ ಅಡಿಯಲ್ಲಿ, further it says about the procedure.

*"184 (2) During the absence of the Chairman from any sitting of the Council the Deputy Chairman or, if he is also absent, such person as may be determined by the rules of procedure of the Council,..."*

ಅವರು ಅದನ್ನೂ deviate ಮಾಡಲಿಲ್ಲ.

**(ಮುಂದು...)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(095)06.07.2018/11.00/ಎಂ.ಎಂ-ಎಂ.ಡಿ

**ಡಾ: ಜಿ. ಪರಮೇಶ್ವರ (ಉಪಮುಖ್ಯಮಂತ್ರಿ) (ಮುಂದು)**

ಅದರಲ್ಲಿ ಏನು ಹೇಳಿದ್ದಾರೆ ನಾನು ಅದನ್ನು ಮತ್ತೊಂದು ಸಲ repeat ಮಾಡುತ್ತೇನೆ. "*to perform the duties of the office of the Chairman"* ಎಂದು ಅದರಲ್ಲಿ define ಮಾಡಿದ್ದರೆ, then certainly, I would have agreed. ಅದಕ್ಕೆ ಮಾನ್ಯ ಶಾಣಪ್ಪನವರು ಹೇಳಿದ ಹಾಗೆ ಈ ಅಧಿವೇಶನದವರೆಗೂ ನಮ್ಮ ನಿಯಮಗಳ ಪ್ರಕಾರ ಸಮಯ ಇದೆ ಎನ್ನುವುದನ್ನು ಅವರು ಹೇಳಿದ್ದಾರೆ.

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೇ, ನಾನು ತಮಗೆ request ರಿಕ್ವೆಸ್ಟ್ ಮಾಡಿದ್ದೇನೆ? ನಾನು ಸುಮಾರು 30 ವರ್ಷಗಳಿಂದ ಲೋಕಸಭೆ, ವಿಧಾನಸಭೆ ಮತ್ತು ವಿಧಾನ ಪರಿಷತ್ತು ನೋಡಿದ್ದೇನೆ. As soon as the oath taking ceremony is completed, the Government will notify that, the new Chairman or Speaker is going to be elected on so and so date. Accordingly, we have been functioning since last 70 years. If you want to start the new precedence, then we don't have any objection for it. ಮಾನ್ಯ ರಾಜ್ಯಪಾಲರ ಪತ್ರದ ಪ್ರಕಾರ, ಆ circumstances ಗಣನೆಗೆ ತೆಗೆದುಕೊಳ್ಳುತ್ತೇವೆ ಅಂದರೆ, that is your choice. The practice throughout the country, throughout the states is, for certain purpose the Hon'ble Governor has notified him to chair, to perform oath taking ceremony and finish it. ನೀವು ಅವರನ್ನೇ ಮುಂದುವರೆಸಿದರೆ ನಮ್ಮದೇನೂ ಆಕ್ಷೇಪಣೆ ಇಲ್ಲ.

**Sri SHARANAPPA MATTUR:-** Mr. Chairman, We are not disputing about the service rendered by our Hon'ble Member Sri K.B.Shanappa and as well as Ex-parliament member Sri Ayanur Manjunath. They have got a rich experience. But, either in Parliament or in Assembly or Council they have to act in accordance with the provisions of the Constitution and internal

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

rules framed by Parliament or State Legislature. His Excellency, the Governor of Karnataka while passing such an order appointing the Speaker, particularly the Chairman in exercise of powers, Kindly look at the language.

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೇ . . .

**ಸಭಾಪತಿಯವರು:-** ಮಾನ್ಯ ಶಾಣಪ್ಪನವರೇ, ಮಾನ್ಯ ಸದಸ್ಯರು ಮಾತನಾಡಲು ಬಿಡಿ, ಮಧ್ಯೆ ಏಕೆ ಮಾತನಾಡುತ್ತೀರಿ? ನೀವು ಮಾತನಾಡಲು ಅವಕಾಶವನ್ನು ಕೇಳಿದಾಗ ಕೊಡುತ್ತೇನೆ.

**Sri SHARANAPPA MATTUR:-** Mr. Chairman, Hon'ble senior member is again and again pestering about the circumstances. Circumstances may not be called as a rule or act. But, it is in accordance with the Constitution of India under Article 184. His Excellency, the Governor of Karnataka has not only referred Article 184, but also in this letter, he has reproduced the language used under Article 184 as read and submitted by our Hon'ble Deputy Chief Minister and Home Minister very clearly. He is also highly learned man and having rich experience about this Upper House and as well as Assembly. He has made a very clear submission that, neither the Government nor the procedure has been violated to appoint you as a Chairman of this House. Accordingly, you have absolute power. There is no as such silent power either in internal rules or in the Constitution of India which is violated to exercise your powers. While allowing all of us to make a submission, with regard to the on Hon'ble Governor's Address and as well as the budget issues are concerned, you have got absolute powers. ಸರ್ಕಾರ ತನ್ನದೇ ಆದ ಪರಮಾಧಿಕಾರವನ್ನು ಉಪಯೋಗಿಸಿ ಸರಿಯಾಗಿ ಮಾಡಿದ್ದಾರೆ. ಇಲ್ಲಿ ಯಾವುದೇ ರೀತಿಯ rules and regulations violate

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿಲ್ಲ. ಮಾನ್ಯ ಸದಸ್ಯರು ಎತ್ತಿರುವ ವಿಚಾರ ಕಾನೂನಿಗೆ ವಿರುದ್ಧವಾಗಿದೆ ಎಂಬ ಮಾತನ್ನು ಹೇಳಬಯಸುತ್ತೇನೆ.

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೇ, ನಾವು ಗವರ್ನರ್‌ಗೆ ಅಧಿಕಾರವನ್ನು ಕೊಟ್ಟಿಲ್ಲ. ನಮ್ಮ ಅಧಿಕಾರವೆಂದರೆ, ಹೊಸ ಸಭಾಪತಿಯವರನ್ನು ಆರಿಸುವುದು ಹೊಸ ಸಭಾಧ್ಯಕ್ಷರನ್ನು ಆರಿಸುವ ಅಧಿಕಾರ ಚುನಾಯಿತ ಪ್ರತಿನಿಧಿಗಳಗಿದೆ. ಆ purpose ಗಾಗಿ ಅವರಿಗೆ ಆ ಅಧಿಕಾರವಿರುವುದರಿಂದ ಅವರನ್ನು ನಾವು ಪ್ರಶ್ನೆ ಮಾಡುವುದಿಲ್ಲ. ಅದಾದ ನಂತರ ಸರ್ಕಾರ ಹೊಸ notification ನ್ನು ಹೊರಡಿಸಬೇಕು. ನಮ್ಮ ಅನಿಸಿಕೆಗಳನ್ನು ತೆಗೆದುಕೊಂಡು ಸಭಾಪತಿಯವರನ್ನು ಆರಿಸುತ್ತೀರಿ ಮತ್ತು notification ನ್ನು ಹೊರಡಿಸುತ್ತೀರಿ. ಇದನ್ನು ಏಕೆ ನೀವು ಹೇಳಲಿಲ್ಲ? No, the Government don't want to do it. Then further if you want to continue him as a Chairman, then we don't have any objection for it. That should be followed in future also.

**ಸಭಾಪತಿಯವರು:-** ಯಾರಾದರೂ ಒಬ್ಬರು ಮಾತನಾಡಿ, ಎಲ್ಲರಿಗೂ ಅವಕಾಶ ಕೊಡುತ್ತೇನೆ. ಮಾನ್ಯ ಆಯನೂರು ಮಂಜುನಾಥರವರೇ ಮಾತನಾಡಿ.

**ಡಾ: ಜಿ. ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಒಂದು ನಿಮಿಷ ಇರಿ ಮಾನ್ಯ ಉಪಮುಖ್ಯಮಂತ್ರಿಯವರು ಮಾತನಾಡುತ್ತಾರೆ.

**ಡಾ: ಜಿ. ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಜುಲೈ 2008ರಲ್ಲಿ ಇಂತಹದ್ದೇ ಒಂದು ಸಂದರ್ಭ ಬಂದಾಗ ಅಂದಿನ ಸ್ಪೀಕರ್ ಮತ್ತು ಛೇರ್ಮನ್‌ರವರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಮಾನ್ಯ ತಿಪ್ಪಯ್ಯನವರು ಇಡೀ ಅಧಿವೇಶನ ಪೂರ್ತಿ ಅವರೇ ಇದ್ದರು. There is already a precedent. ಆನಂತರ ಅವರನ್ನು ಮುಂದಿನ ಅಧಿವೇಶನದಲ್ಲಿ ಆಯ್ಕೆ ಮಾಡಿದರು. ಮಾನ್ಯ ಶಾಣಪ್ಪನವರು ಹೇಳಿದ ಹಾಗೆ, this is not the first time. ನಾನು ಇದರಲ್ಲಿ ರಾಜಕೀಯ ಬೆರೆಸಲು ಹೋಗುವುದಿಲ್ಲ. ಅಂದು ಕೂಡ ಭಾರತೀಯ ಜನತಾ ಪಾರ್ಟಿಯ ಸರ್ಕಾರ ಇತ್ತು. ಆದರೆ ನಾನು ಹೇಳುವುದೇನೆಂದರೆ, there is already a precedence. ಮಾನ್ಯ ಶಾಣಪ್ಪನವರು ಹೇಳಿದ ಹಾಗೆ ಈ ಸದನದ ನಂತರ ನಮ್ಮ Rules of Procedure and Conduct of

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Business ಅಡಿಯಲ್ಲಿ ನಾವು ಆಯ್ಕೆ ಮಾಡುವಂತಹ ಅವಕಾಶಗಳಿವೆ ಎಂದು ಹೇಳುವಾಗ ಅದಕ್ಕೆ ಅವಕಾಶ ಮಾಡಿಕೊಡಿ, ನಾವು ಕೇಳುತ್ತಾ ಇರುವುದು ಅಷ್ಟೇ ಅಲ್ಲ. We are not overruling anything; we are not violating any rules which we have framed ourselves. ನಾವು ಅದನ್ನು ಮಾಡುತ್ತಾ ಇಲ್ಲ. ನಾನು ಮತ್ತೆ ಮತ್ತೆ ಅದನ್ನು ಓದುವುದು ಬೇಡ ಎಂದು ಅದಕ್ಕೇ ಹೇಳಿದೆ. His Excellency, the Governor of Karnataka has quoted very clearly Article 184 of the Constitution of India and under that Hon'ble Governor has appointed the Chairman. ಅದಕ್ಕೆ ತಾವು ಆ ದೃಷ್ಟಿಕೋನದಲ್ಲಿ ನೋಡಬೇಕೇ ವಿನಃ ಬೇರೆ ದೃಷ್ಟಿಕೋನದಲ್ಲಿ ನೋಡುವುದು ಬೇಡ ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು**:- ಈಗ ಮಾನ್ಯ ಉಗ್ರಪ್ಪನವರು ಅವಕಾಶ ಕೇಳಿದ್ದಾರೆ.

**ಶ್ರೀ ಆಯನೂರು ಮಂಜುನಾಥ್**:- ಮಾನ್ಯ ಸಭಾಪತಿಯವರೇ, ಮೊದಲು ನಾನು ಮಾತನಾಡುತ್ತೇನೆ. M.N. *Kaul* and S.L. *Shakdher* - 'Practice and Procedure of Parliament' ನಲ್ಲಿ ಹೇಳಿರುವುದನ್ನು ಎಲ್ಲಾ ಕಡೆಯೂ ರೆಫರ್ ಮಾಡುತ್ತೇವೆ. ಅದರಲ್ಲಿ ಏನು ಹೇಳುತ್ತಾರೆಂದರೆ,

> ***"Speaker Pro tem:*** *When the offices of both the Speaker and the Deputy Speaker fall vacant, the duties of the Office of the Speaker are performed by such member of Lok Sabha as the President may appoint for the purpose. The person so appointed is known as the Speaker pro tem and this nomenclature distinguishes him from the Speaker elected by the House. After his appointment, the Speaker pro tem continues in office till the Speaker is chosen.*
>
> *After the General Elections, the Speaker pro tem is appointed to administer oath/affirmation to the newly elected members of Lok Sabha and conduct the election of the Speaker. He vacates Office soon after the Speaker is chosen by the House...."*

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈ ಅಂಶದ ದುರುಪಯೋಗ ಆಗಬಾರದು It is in good faith. ಹೊಸ ಸದಸ್ಯರಿಗೆ ಪ್ರಮಾಣವಚನವನ್ನು ಬೋಧಿಸುವ ಸಲುವಾಗಿ *Speaker pro tem* ಅಥವಾ ಸಭಾಪತಿಯವರನ್ನು ಆಯ್ಕೆ ಮಾಡಿದೆ. ನಾವು ದುರುಪಯೋಗ ಮಾಡಬೇಕಾದರೆ ಹೇಗಾದರೂ interpretation ಮಾಡಬಹುದು. ಸಂವಿಧಾನದ ಪಾವಿತ್ರ್ಯತೆಯನ್ನು ನಾವು ಕಾಪಾಡಬೇಕು. ಆ ಹಿನ್ನೆಲೆಯಲ್ಲಿ ಸನ್ಮಾನ್ಯ ಬಸವರಾಜ ಹೊರಟ್ಟಿಯವರು ಈ ಸದನದ ಅತ್ಯಂತ ಹಿರಿಯ ಸದಸ್ಯರಾಗಿದ್ದು, ಅವರನ್ನು ಬಿಟ್ಟರೆ ಮತ್ತಾರೂ ಅರ್ಹರಿರಲಿಲ್ಲ. ಆದ್ದರಿಂದ ಅವರನ್ನು ಸಭಾಪತಿಯಾಗಿ ಆಯ್ಕೆ ಮಾಡಿದ್ದಾರೆ. The very purpose is, ಹೊಸ ಸದಸ್ಯರಿಗೆ ಪ್ರಮಾಣವಚನವನ್ನು ಬೋಧಿಸುವುದಕ್ಕಾಗಿ ಅವರನ್ನು ಆಯ್ಕೆ ಮಾಡಲಾಗಿದೆ. ಏಕೆಂದರೆ, ಉಪಸಭಾಪತಿಯವರು ಕೂಡ ಇರಲಿಲ್ಲ. ಆ ಹಿನ್ನೆಲೆಯಲ್ಲಿ ಅವರಿಗೆ ಒಂದು ಮಿತಿ ಇದೆ. ಇದು ಇತ್ತೀಚಿನ ಒಂದು ಘಟನೆಯಾಗಿದೆ, ಇದನ್ನು ಪೂರ್ತಿ ಕೋಟ್ ಮಾಡಲು ಆಗುವುದಿಲ್ಲ, ಒಂದು ನೆನಪಿನ ಆಧಾರದ ಮೇಲೆ ಹೇಳುತ್ತೇನೆ. ಮೊನ್ನೆ ದಿವಸ ಈ ಬಾರಿಯ ಸರ್ಕಾರ ರಚನೆಯಲ್ಲಿ ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲು ಕಾರ್ಯಕ್ರಮ ನಿಗದಿಯಾಯಿತು. ಸನ್ಮಾನ್ಯ ಬೋಪಯ್ಯನವರನ್ನು ಸಭಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಆಗ ಕೆಲವು ಸದಸ್ಯರು ಸುಪ್ರೀಂ ಕೋರ್ಟ್‌ಗೆ ಹೋದರು. ಸುಪ್ರೀಂ ಕೋರ್ಟ್ ಅವರಿಗೆ ಏನು ಹೇಳಿತು? *Speaker pro tem* ಪ್ರಮಾಣವಚನವನ್ನು ಕೊಡಿಸುವುದಲ್ಲದೇ ಬೇರೆ ಯಾವುದೇ ಕೆಲಸವನ್ನು ಮಾಡಬಾರದು ಎಂದು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತು. It is a very recent circumstance. ಮಾನ್ಯ ಬೋಪಯ್ಯನವರ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಹೋದಾಗ ಸಭಾಧ್ಯಕ್ಷರು ಬೇರೆ ಇನ್ನಾವುದೇ ಕಲಾಪಗಳನ್ನು ನಡೆಸಬಾರದು ಎಂದು ನಿರ್ದೇಶನ ನೀಡಿತು. ಇದು ಹಳೆಯದಲ್ಲ, ಇತ್ತೀಚಿನ ಘಟನೆ. ಪ್ರಮಾಣವಚನದ ನಂತರ ಯಾವುದೇ;...

(ಗೊಂದಲ)

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, . . .

**ಶ್ರೀ ಪ್ರಿಯಾಂಕ್ ಖರ್ಗೆ (ಸಮಾಜ ಕಲ್ಯಾಣ ಸಚಿವರು)**:- ಮಾನ್ಯ ಸಭಾಪತಿಯವರೇ, . .

**ಶ್ರೀ ಆಯನೂರು ಮಂಜುನಾಥ್**:- ಮಾನ್ಯ ಸಚಿವರೇ, ಒಂದು ನಿಮಿಷ ಕುಳಿತುಕೊಳ್ಳಿ. ತಾವು ಅನುಭವಿ ಸಚಿವರು, ನಂತರ ಉತ್ತರ ಹೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೇ, ದಯಮಾಡಿ ಕುಳಿತುಕೊಳ್ಳಿ. ಮೊದಲು ಅವರು ಮಾತನಾಡಲಿ.

**ಶ್ರೀ ಆಯನೂರು ಮಂಜುನಾಥ:-** ಮಾನ್ಯ ಸಭಾಪತಿಯವರೇ, Academic interest ನಿಂದ ಚರ್ಚೆಯಾಗುವಾಗ ಅದನ್ನು political dispute ಮಾಡುವುದು ಬೇಡ. Academic interest ನಿಂದ ಅವರು ಕಲಿಯಬೇಕು, ನಾವೂ ಕಲಿಯಬೇಕು, ನಾವೇನೂ ವಕೀಲರಲ್ಲ. ಆ ಹಿನ್ನೆಲೆಯಲ್ಲಿ ಯಾವುದೇ proceedings, ಅವತ್ತಿನ ದಿವಸ ಅವರು ಇನ್ನೇನೋ ಮಾಡಬಾರದು, ಏನೋ ಉದ್ದೇಶಗಳಿರಬಹುದು, ಆದರೆ ಯಾವುದನ್ನೂ ಮಾಡಬಾರದು ಎಂದಾಗ ಇಲ್ಲಿ ಬೇರೆ ಎಲ್ಲದನ್ನೂ ಮಾಡುತ್ತಿದ್ದೇವೆ. ಇವತ್ತಿನ ದಿವಸ ನಮ್ಮ agenda ದಲ್ಲಿದೆ, ಬೇರೆ ಸಮಿತಿಗಳಿಗೆ ಚುನಾಯಿತ ಪ್ರತಿನಿಧಿಗಳನ್ನು ಆಯ್ಕೆ ಮಾಡುವುದು ಇದೆ. ಬೇರೆ ಬೇರೆ ಸಮಿತಿಗಳಿಗೆ ಸದಸ್ಯರನ್ನು ಆಯ್ಕೆ ಮಾಡಬೇಕು. *Speaker pro tem* ಕೆಲಸ ಪ್ರಮಾಣವಚನ ಮುಗಿದ ಮೇಲೆ ಈ ಸದನದ ಸದಸ್ಯರನ್ನು ಬೇರೆ ಬೇರೆ ಸ್ಥಾಯಿ ಸಮಿತಿಗಳಿಗೆ ಚುನಾವಣೆ ಮಾಡಬಹುದೇ ಎನ್ನುವುದು. ಒಂದು ದೊಡ್ಡ ಬಜೆಟ್ ಅನ್ನು ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಮಾಡಬಹುದೇ? 'Soon after the election', ಎಂದಿದೆ. ಆ ಪದವನ್ನು ದುರುಪಯೋಗ ಮಾಡಿಕೊಳ್ಳಬಾರದು.

(ಮುಂದು. . .

(96) 06-07-2018/11-10/ಕೆಹೆಚ್/ಎಕೆ

**ಶ್ರೀ ಆಯನೂರು ಮಂಜುನಾಥ್ (ಮುಂದು):-** ಈ ಸರ್ಕಾರ ಸಂವಿಧಾನದ ಆಶಯಗಳಿಗೆ ಅಪಚಾರವಾಗದೇ ಇರುವ ಹಾಗೆ ಕೇವಲ interpretation ಮೇಲಲ್ಲ. ಸಂವಿಧಾನದ ಆಶಯಗಳಿಗೆ ಅಪಚಾರವಾಗದೇ ಇರುವ ಹಾಗೆ ಈ ಸಭೆಯ ಸಭಾಪತಿಯವರನ್ನು ಸದನದಿಂದ ಆಯ್ಕೆ ಮಾಡಬೇಕು. ಆ ಹಕ್ಕನ್ನು ಈ ಸದನದ ಸದಸ್ಯರಿಂದ ಕಸಿದುಕೊಳ್ಳಬಾರದು. ನಮಗೆ ಸಭಾಪತಿಯವರನ್ನು ಆಯ್ಕೆ ಮಾಡುವಂತಹ ಹಕ್ಕಿದೆ. ಆದ್ದರಿಂದ ನಮ್ಮ ಹಕ್ಕನ್ನು ಕಸಿದುಕೊಳ್ಳಬಾರದು. ಕೇವಲ ವಿರೋಧ ಪಕ್ಷದ ಸದಸ್ಯರು ಮಾತ್ರವಲ್ಲ. ನಾವು ಆಯ್ಕೆ ಮಾಡಿದಂತಹ ಸಭಾಪತಿಯವರಿಗೆ ನಮ್ಮನ್ನು ಪೂರ್ತಿ ನಿಯಂತ್ರಿಸುವ ಹಕ್ಕು ಬರುತ್ತದೆ. ಆಗ ನೀವು ನಮಗೆ ಶೇಕಡ 100 ರಷ್ಟು custodian ಆಗಿರುತ್ತೀರಿ. ನಮ್ಮ ಸದಸ್ಯರನ್ನು ಅಮಾನತು ಮಾಡಬಹುದು, ವಜಾ ಮಾಡಬಹುದು, ಹೊರಗಡೆ ಎತ್ತಿ ಬಿಸಾಕಬಹುದು. ಈ ಸದನದ by-product ಆದಾಗ, ತಮಗೆ ಎಲ್ಲ ಅಧಿಕಾರವು ಪ್ರಾಪ್ತವಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗ ಕೇವಲ ತಮ್ಮನ್ನು ರಾಜ್ಯಪಾಲರು ನೇಮಕ ಮಾಡಿದ್ದಾರೆ. ನೀವು pro tem Chairman. ನಿಮಗೆ ಸರ್ವಾಧಿಕಾರಗಳು ನೈತಿಕವಾಗಿ ಬರುವುದಿಲ್ಲ ಎನ್ನುವುದಷ್ಟೆ ನನ್ನ claim. ಈ ಸಂವಿಧಾನದ ಆಶಯವನ್ನು ಹಲವಾರು angle ಗಳಲ್ಲಿ ನೋಡಬೇಕಾಗುತ್ತದೆ. ಆ ಹಿನ್ನಲೆಯಲ್ಲಿ ಮೊನ್ನೆಯ ದಿವಸ ಸರ್ವೋಚ್ಛ ನ್ಯಾಯಲಯದಲ್ಲಿ ಹೇಳದಂತಹ ಶ್ರೀ ಬೋಪಯ್ಯರವರ ಪ್ರಕರಣವಿರಬಹುದು ಅಥವಾ ಹಿಂದಿನ ವಿಚಾರವಿರಬಹುದು, ಆ ಎಲ್ಲಾ ವಿಷಯಗಳನ್ನು ಆಧಾರವನ್ನಿಟ್ಟುಕೊಂಡು ಇದರ ಬಗ್ಗೆ ರಾಜಕೀಯ ಚರ್ಚೆಯನ್ನು ಮಾಡುವುದಿಲ್ಲ. ಉಪ ಮುಖ್ಯಮಂತ್ರಿಗಳಾದ ಶ್ರೀ ಪರಮೇಶ್ವರ್‌ರವರು ಸದನದಲ್ಲಿದ್ದಾರೆ. ಈ ಸದನವನ್ನು ನೈತಿಕತೆ, ಸಂಪ್ರದಾಯ, ಕಾನೂನಿನ ಆಧಾರದ ಮೇಲೂ ನಡೆಸಬೇಕು. ಈ ಹಿನ್ನಲೆಯಲ್ಲಿ ಅತ್ಯಂತ ಜವಾಬ್ದಾರಿ ಸ್ಥಾನಕ್ಕೆ ತಕ್ಷಣ ಈ ಸದನದೊಳಗೆ ಚುನಾವಣೆ ನಡೆಸಬೇಕು ಎಂದು ಹೇಳಿದರು. ನಾಳೆ ಸದನ ನಡೆಯುವುದಿಲ್ಲ. ಸೋಮವಾರವು ಸದನ ನಡೆಯುವುದಿಲ್ಲ. ಇವತ್ತಾಗಲೇ 6ನೇ ತಾರೀಖು ಆಗಿದೆ. ಇನ್ನೂ 8ನೇ ತಾರೀಖು ಆಗಿ ಹೋಯಿತು, ಇನ್ನು 9, 10, 11 ಮತ್ತು 12ನೇ ತಾರೀಖು ಇನ್ನೂ 4 ದಿನದೊಳಗೆ ತಮ್ಮನ್ನು ಆಯ್ಕೆ ಮಾಡಿ ಸದನವನ್ನು ಮುಂದುವರೆಸುತ್ತಾರೋ ಅಥವಾ ಈ ಸದನವನ್ನು ಮುಗಿಸಿದ ಮೇಲೆ ಆಯ್ಕೆ ಮಾಡುತ್ತಾರೋ ಎಂಬುದು ಗೊತ್ತಿಲ್ಲ. ತಮಗೆ ಉತ್ತರವನ್ನು ಕೊಡುವಂತಹ ಅಧಿಕಾರವಿರುವುದರಿಂದ ತಮ್ಮ ಕಡೆಗೆ ತಿರುಗಿ ಕೇಳುತ್ತೇನೆ. ನಾಳೆಯೇ ಸಭಾಪತಿಯವರನ್ನು ಆಯ್ಕೆ ಮಾಡುವಂತಹ ಅಧಿಕಾರ ತಮಗೆ ಇದೆಯೋ ಎಂಬುದರ ಬಗ್ಗೆ ತಾವು ಮಾತನಾಡಿ. ಇನ್ನೂಳಿದಿರುವ 4 ದಿನದಲ್ಲಿ ನೋಟಿಸ್‌ನ್ನು ಯಾವಾಗ ಮಾಡುತ್ತೀರಿ, ಚುನಾವಣೆಯನ್ನು ಯಾವಾಗ ನಡೆಸುತ್ತೀರಿ, ಉಳಿದಿರುವಂತಹ proceedings ಅನ್ನು ಯಾವಾಗ ಮಾಡುತ್ತೀರಿ. ನಾವು budget ಹೇಗೆ pass ಮಾಡೋಣ. ಬಜೆಟ್ ಪಾಸ್ ಆಗದಿದ್ದರೆ ಮುಂದಿನ ಚುನಾವಣೆಗೆ ಹೋಗಿ ನಿಲ್ಲುತ್ತದೆಯಲ್ಲವೇ, ನಾವು ವಿರೋಧ ಪಕ್ಷದಲ್ಲಿರುವುದರಿಂದ ಇವರಿಗೆ ನೈತಿಕತೆ ಇದೆಯೇ, ಮಾನ-ಮರ್ಯಾದೆ ಇದೆಯೇ ಎಂಬುದನ್ನೆಲ್ಲಾ ಆಡಳಿತ ಪಕ್ಷದವರಿಂದ ಕೆಲವೊಮ್ಮೆ ಅನಿಸಿಕೊಂಡಿರುತ್ತೇವೆ. ಹಾಗಾಗಿ ಅದನ್ನೆಲ್ಲಾ ಬದಿಗಿಟ್ಟುಕೊಂಡು ಕೂಡ proceedings ನಡೆಸಬೇಕಲ್ಲವೇ, ಆ ಕಾರಣಕ್ಕೆ ಆ ಸ್ಥಾನದಲ್ಲಿ ಸನ್ಮಾನ್ಯ ಹಿರಿಯ ಸದಸ್ಯರನ್ನು ಇಟ್ಟುಕೊಂಡು ಈ ರೀತಿಯ ಚರ್ಚೆ ಮಾಡುವಂತಹ ಸಂದರ್ಭ ಒದಗಿ ಬಂದಿದ್ದು, ನಿಜವಾಗಿಯೂ ಅತ್ಯಂತ ನೋವಿನ ಘಟನೆಯಾಗಿದೆ. ಇವರು ಈ ಸದನದ ಅತ್ಯಂತ ಹಿರಿಯ ಸದಸ್ಯರಾಗಿದ್ದಾರೆ. ಅರೆ ಶತಮಾನದಿಂದ ಈ ಸದನದಲ್ಲಿ ಸದಸ್ಯರಾಗಿರುವ ಇವರು ಹೊಸ ದಾಖಲೆಯನ್ನು ಸೃಷ್ಠಿ ಮಾಡಿದ್ದಾರೆ. ಅಂತಹ ಹಿರಿಯರನ್ನು ಪೀಠದಲ್ಲಿ ಕೂರಿಸಿ ಇಂತಹ ಚರ್ಚೆಯನ್ನು ಮಾಡುವಂತಹ ಒಂದು ಅವಮಾನದ ಅಥವಾ ನೋವಿನ ಘಟನೆಯು ಪ್ರಾಪ್ತವಾಯಿತಲ್ಲ, ಎಂಬುದು ಬಹಳ ನೋವಿನ ಸಂಗತಿಯಾಗಿದೆ. ಆ ಹಿನ್ನಲೆಯಲ್ಲಿ morality ಮೇಲೆ ಅದನ್ನು good faith ನಲ್ಲಿ ಏನು ಹೇಳಿದ್ದಾರೆ. ರಾಜ್ಯಪಾಲರಿಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಭಾಪತಿಯವರನ್ನು ಖಾಯಂ ಆಗಿ ಆಯ್ಕೆ ಮಾಡಲು ಅಧಿಕಾರವಿದೆಯೋ ಎಂಬ ಬಗ್ಗೆ ಯಾವ ಸಂವಿಧಾನದಲ್ಲಿ ಉಲ್ಲೇಖಿಸಲಾಗಿದೆ. ಹಾಗಾಗಿ ತಮ್ಮನ್ನು appoint ಮಾಡಿರುವುದು it is for a very limited purpose. ಹಾಗಾಗಿ ಸಭಾಪತಿ ಸ್ಥಾನಕ್ಕೆ ಅತ್ಯಂತ ಗೌರವವನ್ನಿಟ್ಟುಕೊಂಡು, ತಮ್ಮ ಇತಿ–ಮಿತಿಯಲ್ಲಿ ತಾವು ಕೂಡ ಹಿರಿಯ ಸದಸ್ಯರಾಗಿರುವುದರಿಂದ ತಮ್ಮ ಬಗ್ಗೆ ಚರ್ಚೆ ಮಾಡುವುದು ನಿಮ್ಮ ಮನಸ್ಸಿಗೆ ನೋವಾಗಬಹುದು. ಯಾವುದೇ ಕಾರಣಕ್ಕೂ ಕೂಡ ನೋವಾಯಿತ್ತು ಎಂದು ಹಿರಿಯ ಸದಸ್ಯರು ತಾವು ಪೀಠವನ್ನು ತ್ಯಾಗ ಮಾಡಬಾರದು. ಈ ಸದನವನ್ನು ನಡೆಸಿಕೊಡಬೇಕು. ಏಕೆಂದರೆ, ತಾವು ಬಹಳ ಹಿರಿಯ ಸದಸ್ಯರಾಗಿರುವುದರಿಂದ ತಮ್ಮ ಮನಸ್ಸಿಗೆ ದೊಡ್ಡ ಆಘಾತವಾಗುತ್ತದೆ. ನಾವು ತಮ್ಮ ಸ್ಥಾನ ಮಾನದ ಬಗ್ಗೆ ಪ್ರಶ್ನೆ ಮಾಡಿದಾಗ ತಮಗೆ ತುಂಬಾ ನೋವಾಗುತ್ತದೆ. ತಮಗೆ ನೋವುಂಟು ಮಾಡುವಂತಹ ಉದ್ದೇಶ ನಮಗಿಲ್ಲ. ತಾವು ನಮ್ಮ ಮಾತಿನಿಂದ ನೊಂದು ಯಾವುದೇ ಕಾರಣಕ್ಕೂ ಪೀಠವನ್ನು ತ್ಯಾಗ ಮಾಡಬಾರದು. ಆ ರೀತಿ ಮಾಡಿದರೆ constitutional crisis ಪ್ರಾರಂಭವಾಗುತ್ತದೆ. ಈ ಸದನದಲ್ಲಿ ಸಭಾಪತಿಯವರಾಗಲೀ, ಉಪಸಭಾಪತಿಯವರಾಗಲೀ ಇಲ್ಲ. ನಾಳೆಯ ದಿವಸ proceedings ಅನ್ನು ಮಾಡುವುದಕ್ಕಾಗುವುದಿಲ್ಲ. ಹಾಗಾಗಿ ಸರ್ಕಾರವು ಜವಾಬ್ದಾರಿ ಸ್ಥಾನದಿಂದ ಯೋಚನೆ ಮಾಡಬೇಕಾಗಿತ್ತು. ಆಕಸ್ಮಾತ್, for argument sake, ಸಭಾಪತಿಯವರು ಪೀಠವನ್ನು ತ್ಯಾಗ ಮಾಡಿದರೆ ಸದನವನ್ನು ನಡೆಸುವುದಕ್ಕೆ ಏನು ಮಾಡುತ್ತೀರಿ. ಈ ಸದನದಲ್ಲಿ ಸಭಾಪತಿಯವರಿಲ್ಲ, ಉಪ ಸಭಾಪತಿಯವರಿಲ್ಲ. ಹಾಗಾದರೆ ಸದನ ಏನಾಗುತ್ತದೆ? ಸಂವಿಧಾನದ ಇಕ್ಕಟ್ಟು ಪ್ರಾರಂಭವಾಗುವುದಿಲ್ಲವೇ, ಇದರ ಬಗ್ಗೆ ಎಲ್ಲರೂ ಯೋಚಿಸಬೇಕು. ನನ್ನಂತಹ ಹೊಸ ಸದಸ್ಯರಿಗೆ ಉತ್ತರಿಸುವ ಪಾಂಡಿತ್ಯವನ್ನು ಹೊಂದುವುದಕ್ಕಿಂತ ಮುಂದೆ ಬರಬಹುದಾದ ಸಂವಿಧಾನದ crisis ಅನ್ನು ಗಮನದಲ್ಲಿಟ್ಟುಕೊಂಡು ಯೋಚನೆ ಮಾಡಬೇಕೆಂಬ ಕಾರಣಕ್ಕಾಗಿ ತಕ್ಷಣದಲ್ಲಿಯೇ ಒಂದು ಚುನಾವಣೆಯನ್ನು ಘೋಷಣೆ ಮಾಡಬೇಕು. ಸಭಾಪತಿಯವರನ್ನು ಆಯ್ಕೆ ಮಾಡಲು ನಮಗೆಲ್ಲಾ ಅಧಿಕಾರವಿದೆ. ಆಡಳಿತ ಪಕ್ಷಗಳಿಗೆ majority ಕೂಡ ಇದೆ. ತಮಗೆ ಬೇಕಾದವರನ್ನು ಆಯ್ಕೆ ಮಾಡಿಕೊಳ್ಳಿ. ಆ ಸ್ಥಾನದ ಪಾವಿತ್ರತೆಯನ್ನು ಕಾಪಾಡಬೇಕಾದುದು ನಮ್ಮೆಲ್ಲರ ಧರ್ಮ. ಅದನ್ನು ನೆನಪಿಸುವುದಕ್ಕೋಸ್ಕರ ನಾನು ಈ ಮಾತನ್ನು ಆಡುತ್ತಿದ್ದೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಶ್ರೀ ಶ್ರೀಕಂಠೇಗೌಡರೇ ಒಂದು ನಿಮಿಷ ಕುಳಿತುಕೊಳ್ಳಿ. ಶ್ರೀ ಶಾಣಪ್ಪನವರು ಹೇಳುವುದನ್ನು ಮುಗಿಸಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, latin ಭಾಷೆಯಲ್ಲಿ 'pro tem' ಎಂದರೆ 'for the time being' ಎಂದು ಇದೆ. ಅದನ್ನು ಈಗ ತಮಗೆ pro tem Chairman ಎಂದು ಮಾಡಿರುವುದು. For time being ನೀವು ಒಂದು ಕಡೆ ಎಲ್ಲರಿಗೂ oath taking ceremony ಮುಗಿಯಿತು. ಆದಾದ ಕೂಡಲೇ ಸರ್ಕಾರದವರು ಒಂದು ಕಡೆ they are trying to defend their mistake. Immediately the government must go for the election of Chairman.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಭಾಧ್ಯಕ್ಷರಾದ ಶ್ರೀ ಬೋಪಯ್ಯನವರ ವಿಚಾರ ಪ್ರಸ್ತಾಪವಾಗಿರುವುದಕ್ಕೆ ನಾನು ಮಾತನಾಡುವುದಕ್ಕೆ ನಿಂತಿದ್ದೇನೆ.

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೇ ತಾವು ನಿಯಮದಲ್ಲಿ ಏನಿದೆಯೇ ಅದರ ಪ್ರಕಾರ ಮಾತನಾಡಿ. ಭಾಷಣವನ್ನು ಮಾಡಬೇಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, pro tem Speaker ಶ್ರೀ ಬೋಪಯ್ಯನವರ ವಿಚಾರದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪ್ರಶ್ನೆ ಮಾಡಿದಾಗ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಇದರ ಬಗ್ಗೆ ಸ್ಪಷ್ಟೀಕರಣ ನೀಡಿದ್ದೇನು? Pro tem Speaker ಪೀಠದಿಂದಲೇ ಈ ಸರ್ಕಾರದ ಬಹುಮತ ಸಾಬೀತಾಗಲಿ ಎಂದು ಹೇಳಿದ್ದು. ಒಂದು ಸರ್ಕಾರವನ್ನು ಉಳಿಸುವಂತಹ ಬಹುಮತ ಸಾಬೀತಿನ ನಡವಳಿಕೆಯನ್ನು, ಕಲಾಪವನ್ನು pro tem Speaker ಅವರು ನಡೆಸಿದ್ದಾರೆ. ಒಂದು ಸರ್ಕಾರದ ಉಳಿವಿನ ಪ್ರಶ್ನೆಯ ಬಹುಮತ ಸಾಬೀತಿನ ಕಾರ್ಯಕಲಾಪವೇ ನಡೆದ ಮೇಲೆ ಉಳಿದ ಕಾರ್ಯಕಲಾಪ ಅದಕ್ಕಿಂತಲೂ ಮಹತ್ವದ್ದೇನಿಲ್ಲ. ಹಾಗಾಗಿ ಇವತ್ತಿನ ದಿವಸ ರಾಜ್ಯಪಾಲರು ಸಂವಿಧಾನದ 184ರ ನಿಯಮಾವಳಿಯ ಪ್ರಕಾರ ನೇಮಕಾತಿ ಮಾಡಿರುವಂತಹದ್ದು ಸಿಂಧು ಇದೆ. ಮುಂದಿನ ದಿನಗಳಲ್ಲಿ ಸಭಾಪತಿಯವರ ಆಯ್ಕೆಯ ಕ್ರಮಕ್ಕೆ ಸರ್ಕಾರ ಮುಂದಾಗಲೇಬೇಕಾಗುತ್ತದೆ. ಇದು ಯಾವುದೇ ಕಾನೂನಿನ ಉಲ್ಲಂಘನೆಯು ಅಲ್ಲವೆಂದು ನಾನು ಸ್ಪಷ್ಟಪಡಿಸುವುದಕ್ಕೆ ಬಯಸುತ್ತೇನೆ.

**ಡಾ|| ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, Political Science ಅನ್ನು teach ಮಾಡುತ್ತಿದ್ದೇವೆ ಮತ್ತು ನಾವೆಲ್ಲರೂ ಕಲಿತುಕೊಂಡು ಈಗ ಜನ ಪ್ರತಿನಿಧಿಗಳಾಗಿ ಆಯ್ಕೆಯಾಗಿದ್ದೇವೆ. ಹಿರಿಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್ ರವರು ಪ್ರಸ್ತಾಪಿಸಿರತಕ್ಕಂತಹ ವಿಚಾರದಲ್ಲಿ ಕರ್ನಾಟಕ ರಾಜ್ಯ ಒಂದು ಕೆಟ್ಟ ಉದಾಹರಣೆಗಳಿಗೆ ನಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇತಿಹಾಸದಲ್ಲಿ ದಾಖಲಾಗಿಬೇಕೇ, ಆವತ್ತಿನ ದಿವಸ ಸರ್ಕಾರ ರಚನೆ ಮಾಡುವಂತಹ ಸಂದರ್ಭದಲ್ಲಿ ಸಮಿಶ್ರ ಸರ್ಕಾರ ರಚನೆಯಾಗುವ ಮೊದಲು ಒಂದು ರಾಜಕೀಯ ಬಿಕ್ಕಟ್ಟು ರಾಜ್ಯದಲ್ಲಿತ್ತು. ಹಾಗಾಗಿ ಆವತ್ತಿನ ದಿವಸ ಸಭಾಧ್ಯಕ್ಷರಾದ ಶ್ರೀ ಬೋಪಯ್ಯನವರ ಸಂದರ್ಭ ಬೇರೆ ಇತ್ತು. ಇವತ್ತಿನ ದಿವಸ ಇರುವ ಸಂದರ್ಭವೇ ಬೇರೆ ಇದೆ. ಹಂಗಾಮಿ ಎನ್ನುವ ಪದದಲ್ಲಿ 'ಹಂಗು' ಎನ್ನುವ ಪದ ಇದೆ. ಇವತ್ತಿನ ದಿವಸ ಬಹುಮತ ಸಾಬೀತಪಡಿಸಿ ಒಂದು ಬಜೆಟ್‌ನ್ನು ಮಂಡಿಸಿರುವಂತಹ ಸರ್ಕಾರವು ಪೀಠಕ್ಕೆ ನ್ಯಾಯಯುತವಾಗಿ ಮತ್ತು ಸಂವಿಧಾನತ್ಮಕವಾಗಿ ಏನು ಗೌರವವನ್ನು ತೋರಬೇಕು. ನಮ್ಮ ಕಷ್ಟವೇನೆಂದರೆ ವಿರೋಧ ಪಕ್ಷದಲ್ಲಿದ್ದ ಸದಸ್ಯರು ಇವತ್ತಿನ ದಿವಸ ಅರ್ಧ ಶತಮಾನವನ್ನು ಸಾರ್ವಜನಿಕ ಜೀವನದಲ್ಲಿ ಸವಿಸಿದಂತಹವರು ಈ ಮನೆಯಲ್ಲಿ ಅತ್ಯಂತ ಹಿರಿಯರಾದಂತಹ, ಅನುಭವಿಗಳಾದಂತಹ, ಸಂವಿಧಾನದ ವಿಚಾರದಲ್ಲಿ ತಜ್ಞರಾದಂತಹ ತಾವು ಈ ಪೀಠದಲ್ಲಿ ಕುಳಿತಿರುವಾಗ, ತಾವು ಇವತ್ತು ಈ ಭಾಗದಲ್ಲಿ ಕುಳಿತಿದ್ದರೆ ಒಂದು ದೊಡ್ಡ ಅನುಕೂಲವಾಗುತ್ತಿತ್ತು ಮತ್ತು ಜ್ಞಾನಾರ್ಜನೆಯಾಗುತ್ತಿತ್ತು. ಇವತ್ತಿನ ದಿವಸ ನಾವೆಲ್ಲಾ ಕುಳಿತುಕೊಂಡು ತಾವು ಮಾತನಾಡಲಾಗದ ಪರಿಸ್ಥಿತಿ ಇರುವಾಗ, ನಾವು ಆ ಪೀಠದ ಬಗ್ಗೆ ಮಾತನಾಡುವಂತಹದ್ದು ಬಹಳ ನೋವಿನ ವಿಚಾರವಾಗಿದೆ. ಸರ್ಕಾರದ ಬಳಿ ನಿಜವಾದ ತೊಂದರೆ ಏನಿದೆ? ನಿಮಗೆ ಸಮಯವಿಲ್ಲವೋ, ಹೊಂದಾಣಿಕೆ ಇಲ್ಲವೋ ಅಥವಾ ಇಚ್ಛಾಶಕ್ತಿಯಿಲ್ಲವೋ, ಈ ಮೂರು ವಿಚಾರಗಳನ್ನು ರಾಜ್ಯದ ಜನತೆಗೆ ಹೇಳಬೇಕಾಗುತ್ತದೆ. ಈಗಿರುವಂತಹ ಸಭಾಪತಿಯವರನ್ನೇ ಒಂದು ಶಾಶ್ವತವಾಗಿ, ಸಂವಿಧಾನತ್ಮಕವಾಗಿ ಆಯ್ಕೆ ಮಾಡಿದರೆ ನಮ್ಮದೇನೂ ತಕರಾರು ಇಲ್ಲ. ನಾಳೆಯ ದಿವಸ ಇದರ ಬಗ್ಗೆ ನಮ್ಮ ಅಭ್ಯಂತರವೂ ಇಲ್ಲ ಮತ್ತು ಕಾರ್ಯಕಲಾಪಗಳು ನಡೆಯಬೇಕು. ನಾಳೆಯ ದಿವಸ ಸಂವಿಧಾನತ್ಮಕವಾದ ಲೋಪಗಳನ್ನು ಯಾರಾದರೂ ಎತ್ತಿದರೆ, ನ್ಯಾಯಾಲಯದಲ್ಲಿ ಇದೇನಾದರೂ ಅಸಿಂಧು ಎಂದಾದರೆ ಅದನ್ನು ತಮ್ಮಂತಹವರು ಪೀಠದಲ್ಲಿದ್ದಾಗ ಆ ನೋವಿನ ಕ್ಷಣವನ್ನು ತಾವೇಕೆ ಅನುಭವಿಸಬೇಕು. ಸರ್ಕಾರಕ್ಕೆ ಇದನ್ನು ತಡೆಯಬಹುದಾದಂತಹ ಸಂದರ್ಭವಿದೆ. ತಮ್ಮ ಹತ್ತಿರ ಬಹುಮತ ಇದೆ. ದಯವಿಟ್ಟು ಇದರ ಬಗ್ಗೆ ಇಚ್ಛಾಶಕ್ತಿ ಏಕಿಲ್ಲ ಅಥವಾ ಮಾಡಬೇಕಾದಂತಹ ಅವಶ್ಯಕತೆ ಅತ್ಯಂತ ಜರೂರಾಗಿದೆ ಎಂದು ಏಕೆ ತಮಗೆ ಅನಿಸುತ್ತಿಲ್ಲ ಎನ್ನುವುದನ್ನು ಹೇಳಬೇಕಾಗಿದೆ. ಸಂವಿಧಾನದ interpretation ಅನ್ನು ಹೇಗೆ ಬೇಕಾದರೂ ಮಾಡಬಹುದು. ನಮ್ಮ ಸಂವಿಧಾನ ರಚನೆಯಾಗುವಂತಹ ಸಂದರ್ಭದಲ್ಲೂ ಕೂಡ ಕೆಲವು ಪರಂಪರೆಗಳನ್ನು ಅಲಿಖಿತವಾಗಿಯೂ ನಾವು ಇವತ್ತಿನ ದಿವಸ ಅದನ್ನು ಅನುಸರಿಸಿಕೊಂಡು ಬಂದಿದ್ದೇವೆ. ಆದರೆ ಇದು ಲಿಖಿತದಲ್ಲಿ ಇಲ್ಲವೆಂದು ಅನೇಕ ಬಾರಿ ತಾವು ಹೇಳುತ್ತೀರಿ. ಆದರೆ ಇದನ್ನು ಅನುಸರಿಸುತ್ತೇವೆ. ಆದಕಾರಣ, ದಯಮಾಡಿ, ಸರ್ಕಾರ ಇದನ್ನು ತಾರ್ಕಿಕವಾಗಿ ನಿಮ್ಮ ಉತ್ತರವನ್ನು ಬಯಸಿ ನಾವು ಈ ಪ್ರಶ್ನೆಯನ್ನು ಎತ್ತುತ್ತಿಲ್ಲ. ಕರ್ನಾಟಕ ವಿಧಾನ ಪರಿಷತ್ತು ಮತ್ತು ವಿಧಾನ ಸಭೆಗೆ ಇನ್ನೊಬ್ಬರಿಗೆ ಮಾದರಿಯಾಗುವಂತಹ ಸಂದರ್ಭವಿರುವಾಗ ಈ ಒಂದು ಕ್ಷಣವನ್ನು ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ನಿವೇಶವನ್ನು ಅತ್ಯಂತ ಜರೂರಾಗಿ, ಮುಂದಿನ ದಿನಗಳಲ್ಲಿ ನಾವು ಅನಾಹುತಗಳಿಗೆ ಕಾರಣರಾಗುವುದು ಬೇಡ. ಅಂತಹ ಒಂದು ಕೆಟ್ಟ ಸಂದರ್ಭವನ್ನು ನಿವಾರಣೆ ಮಾಡಬೇಕು. ನಾವು ಪ್ರತಿಪಕ್ಷವಾಗಿ ಇಲ್ಲಿ ಕುಳಿತು ಹೇಳುವಂತಹದ್ದು ಮತ್ತು ಒಂದು ವೇಳೆ ಪೀಠಕ್ಕೆ ಅಗೌರವವಾಗುವಂತಹ ಈ ರೀತಿಯ ವಿಭಿನ್ನ ಸನ್ನಿವೇಶ ಯಾವಾಗಲೂ ಉದ್ಭವವಾಗಿರಲಿಲ್ಲ. ಸಭಾಪತಿಯವರು, ಉಪಸಭಾಪತಿಯವರ ಎರಡು ಸ್ಥಾನಗಳು ತೆರವಾಗುವಂತಹ ಸನ್ನಿವೇಶ ಉದ್ಭವವಾಗಿರಲಿಲ್ಲ. ಸದನವನ್ನು ತಕ್ಷಣ ರಚನೆ ಮಾಡುವುದಕ್ಕೆ ರಾಜ್ಯಪಾಲರ ಒಂದು ಅಧಿಕಾರದ ಅವಧಿಯನ್ನು ನಾವು ಬಳಕೆ ಮಾಡಿಕೊಂಡಿದ್ದೇವೆ. ರಾಜ್ಯಪಾಲರು ರೂಲ್ ಮಾಡುವ ಆಗಿದ್ದರೆ Elected House ಬೇಕಾಗಿರಲಿಲ್ಲ. ಅದು ಒಂದು ತುರ್ತು ಸನ್ನಿವೇಶದಲ್ಲಿ ಮಾತ್ರ ಅಧಿಕಾರವನ್ನು ತಾತ್ಕಾಲಿಕವಾಗಿ ಬಳಸಿಕೊಂಡು ದಯವಿಟ್ಟು ಆ ಪೀಠವನ್ನು 'pro tem' ಅಥವಾ 'ಹಂಗಾಮಿ ಪೀಠ' ಎನ್ನುವುದರಿಂದ ಮುಕ್ತಗೊಳಿಸಿ, ಅದಕ್ಕೆ ಸಲ್ಲಬೇಕಾದಂತಹ ಗೌರವವನ್ನು ಮತ್ತು ನ್ಯಾಯವನ್ನು ಸಲ್ಲಿಸುವ ಮೂಲಕ ಮತ್ತು ಮುಂದೇನಾದರೂ ಈ ಬಗ್ಗೆ ಒಂದು ಕೆಟ್ಟ ರಿಮಾರ್ಕ್ಸ್ ಹೋಸಾದರೆ ಈ ಸರ್ಕಾರ ನೇರ ಹೊಣೆಯಾಗಬೇಕಾಗುತ್ತದೆ.

(ಮುಂದು)

(97)06/07/2018/ಎಸ್‌ಪಿಆರ್/ಎ.ಕೆ./11:20

**ಡಾ||ತೇಜಸ್ವಿನಿ ಗೌಡ(ಮುಂದು):-**

ಪ್ರತಿಪಕ್ಷಗಳಾಗಿ ನಾವು ನಮ್ಮ ಕರ್ತವ್ಯಗಳನ್ನು ಮಾಡಿದ್ದೇವೆ. ನಾನು ಸರ್ಕಾರವನ್ನು ವಿನಂತಿಕೊಳ್ಳುವುದೇನೆಂದರೆ, ಈ ವಿಚಾರದಲ್ಲಿ ಆದಷ್ಟು ಶೀಘ್ರವಾಗಿ ಚರ್ಚೆಯಾಗಬೇಕು. ಹಿರಿಯ ಸಚಿವರು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳಾದ ಡಾ|| ಜಿ.ಪರಮೇಶ್ವರ್‌ರವರು ಪ್ರಸ್ತುತ ಸದನದಲ್ಲಿ ಉಪಸ್ಥಿತರಿದ್ದಾರೆ. ಸಮ್ಮಿಶ್ರ ಸರ್ಕಾರದ ಮಾನ್ಯ ಹಿರಿಯ ಸದಸ್ಯರಾದ ಶ್ರೀ ಹೆಚ್.ಎಂ.ರೇವಣ್ಣನವರೂ ಸಹ ಪ್ರಸ್ತುತ ಸದನದಲ್ಲಿ ಉಪಸ್ಥಿತರಿದ್ದಾರೆ. ಎರಡೂ ಪಕ್ಷಗಳೂ ಸೇರಿ ಅತ್ಯಂತ ಜರೂರಾಗಿ ಈ ವಿಚಾರದಲ್ಲಿ ಒಂದು ನಿರ್ಧಾರವನ್ನು ತೆಗೆದುಕೊಂಡು ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅನೇಕ ಸಲ ಕಾನೂನು ಚೌಕಟ್ಟಿನಲ್ಲಿ ಚರ್ಚೆಗಳಾದಾಗ, ಮಾನ್ಯ ಸದಸ್ಯರಾದ ಶ್ರೀ ವಿ.ಎಸ್.ಉಗ್ರಪ್ಪನವರು ಹಲವಾರು ಬಾರಿ ಮಾರ್ಗದರ್ಶನವನ್ನು ಮಾಡಿದ್ದಾರೆ. ಒಂದು ವೇಳೆ ಮಾನ್ಯ ಯಂ.ಸಿ.ನಾಣಯ್ಯನವರು ಪ್ರಸ್ತುತ ಉಪಸ್ಥಿತರಿದ್ದರೆ ಅವರು ಈಗಾಗಲೇ ಈ ವಿಚಾರದಲ್ಲಿ ನಮಗೆ ಮಾರ್ಗದರ್ಶನ ನೀಡುತ್ತಿದ್ದರು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಯುತರು ಕಾನೂನು ವಿಚಾರದಲ್ಲಿ ಪಾಂಡಿತ್ಯವನ್ನು ಪಡೆದವರಾಗಿದ್ದಾರೆ. He knows lot of things. ದಯಮಾಡಿ ಸದರಿಯವರು ಈ ವಿಚಾರದಲ್ಲಿ ಯಾವ ರೀತಿಯಾಗಿ ಅಭಿಪ್ರಾಯವನ್ನು ನೀಡುತ್ತಾರೆ ಎಂಬುದಾಗಿ ಕೇಳಿದರೆ ನಮಗೆ ತುಂಬಾ ಅನುಕೂಲವಾಗುತ್ತದೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಬಹಳ ದಿನಗಳ ನಂತರ, ಸಂವಿಧಾನ ಹಾಗೂ ನಿಯಮಾವಳಿಗಳ ಬಗ್ಗೆ ಈ ಸದನದಲ್ಲಿ ಚರ್ಚೆಯಾಗುವುದಕ್ಕೆ ನೀವು ಅವಕಾಶವನ್ನು ನೀಡಿದ್ದೀರಿ, ಇದು ನಿಜವಾಗಿಯೂ ಸಹ ಮೆಚ್ಚುಗೆಗೆ ಅರ್ಹವಾದುದು. ಏಕೆಂದರೆ, ನೇರವಾಗಿ ಈ ವಿವಾದಾಂಶವು ನಿಮ್ಮ ಸ್ಥಾನದ ಮೇಲೆ ಇರುವಂತಹದ್ದಾಗಿದ್ದರೂ, ತಾವು ಈ ವಿಷಯದ ಬಗ್ಗೆ ಸಂವಿಧಾನದ ಚೌಕಟ್ಟಿನಲ್ಲಿ ಚರ್ಚೆಯನ್ನು ಮಾಡಲು ಅವಕಾಶವನ್ನು ನೀಡಿರುವುದು ತಮ್ಮ ಅನುಭವದ ಹಿನ್ನೆಲೆಯನ್ನು ತೋರಿಸುತ್ತದೆ ಎಂಬುದಾಗಿ ನಾನು ಭಾವಿಸುತ್ತೇನೆ. ಪ್ರಾಯಶಃ ತಮ್ಮ ಅವಧಿಯಲ್ಲಿ ಏಕೆಂದರೆ ತಾವು 30 ವರ್ಷಗಳಿಗೂ ಹೆಚ್ಚು ಸಮಯ ಈ ಸದನದಲ್ಲಿದ್ದೀರಿ. 1984-85 ನೇ ಸಾಲಿನಲ್ಲಿ ಇದೇ ರೀತಿಯಾದಂತಹ ಸಂದರ್ಭ ಈ ಸದನದಲ್ಲಿ ನಡೆದು, ಅಂತಿಮವಾಗಿ ಅವತ್ತಿನ ದಿವಸ ಯಾರು ಹಂಗಾಮಿ ಸಭಾಧ್ಯಕ್ಷರು ಅಥವಾ ಸಭಾಪತಿ ಇದ್ದರು, ಅವರನ್ನು ಆ ಸ್ಥಾನದಿಂದ ತೆಗೆದು ಹಾಕಲು ಈ ಸದನದಲ್ಲಿ there was a resolution moved by the Opposition. ಬಹುಶಃ Practice and Procedure of Parliament by M.N. Kaul and S.L. Shakdher ಇದರಲ್ಲಿನ ಪುಟ ಸಂಖ್ಯೆ 119ನ್ನು ನಾನು ಉಲ್ಲೇಖಿಸ ಬಯಸುತ್ತೇನೆ. It reads as follows:-

> *There has been no instance in Lok Sabha when the Speaker pro tem functioned as a regular Speaker for any length of time. There has also been no instance in Lok Sabha when a notice of resolution for removal of the Speaker pro tem was tabled by any member."*

ತಿದ್ದುಪಡಿಯಾಗ

ಇದು ಒಂದು ರೀತಿಯ ನಿದರ್ಶನವಾಗಿದೆ. ನಾನು ಒಬ್ಬ ಕಾನೂನು ವಿದ್ಯಾರ್ಥಿಯಾಗಿ, ಸಂವಿಧಾನ ಮತ್ತು ನಿಯಮಾವಳಿಗಳನ್ನು ವ್ಯಾಖ್ಯಾನ ಮಾಡುವ ಸಂದರ್ಭದಲ್ಲಿ ಆತ್ಮವಂಚನೆಯನ್ನು ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಮುಂದಿನ ಪೀಳಿಗೆ ಬಹುಶಃ ಇಂತಹವರು ಸದನದಲ್ಲಿ ಉಪಸ್ಥಿತರಿದ್ದಾಗ ನಿಯಮಬಾಹಿರವಾಗಿ ಇರುವಂತಹ ಇಂತಹ ವಿಚಾರಗಳ ಬಗ್ಗೆ ಚರ್ಚೆಯನ್ನು

ಮಾಡಿದ್ದಾರೆ ಎನ್ನುವಂತಹ ಪರಿಸ್ಥಿತಿ ಉದ್ಭವವಾಗಬಾರದು ಎನ್ನುವ ದೃಷ್ಟಿಯಿಂದ ನಾನು provisions of Articles 91, 94, 184 and other related provisions and also Rules 7 & 8 of the Rules of Procedure and Conduct of Business in the Karnataka Legislative Council ಇವುಗಳ ಬಗ್ಗೆ ನಾನು ಮಾತನಾಡಲಿಕ್ಕೆ ಹೊರಟಿದ್ದೇನೆ. Practice and Procedure of Parliament by M.N.Kaul and S.L.Shakdherರಲ್ಲಿನ ಮತ್ತೊಂದು ವಾಕ್ಯವನ್ನು ಉಲ್ಲೇಖಿಸಬಯಸುತ್ತೇನೆ. ಅದರಲ್ಲಿನ ಪುಟ ಸಂಖ್ಯೆ 117 ರಲ್ಲಿ ಈ ಕೆಳಕಂಡಂತಿದೆ. It reads as follows:-

> *"The person so appointed is known as the Speaker pro tem and this nomenclature distinguishes him from the Speaker elected by the House."*

He is not a Speaker. It distinguishes him from the Speaker. The pro tem Speaker is nominated by the Governor or the President of India. The regular Speaker is elected by the House and not by the Governor or the President of India. This is one thing. Secondly, the extract from Page 117 further reads as follows:-

> *"…After the General Elections, the Speaker pro tem is appointed to administer oath/affirmation to the newly elected members of Lok Sabha…"*

So also to the Legislative Assembly or the Legislative Council. *"…and conduct the election of the Speaker."* Or to the Chairman. ಇದೇ ವಿಚಾರಕ್ಕೆ ಸಂಬಂಧಪಟ್ಟಂತೆ ಕಳೆದ ತಿಂಗಳು ಕರ್ನಾಟಕ ವಿಧಾನ ಸಭೆಯಲ್ಲಿ ಘಟನೆಯೊಂದು ನಡೆಯಿತು. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಅರ್ಜಿಯನ್ನು ದಾಖಲಿಸಿದ ಸಂದರ್ಭದಲ್ಲಿ ನಾನು ಇಂಚಿಂಚು ಮಾಹಿತಿಯನ್ನು ಪಡೆದುಕೊಂಡಿದೇನು. ಹಂಗಾಮಿ ಸಭಾಧ್ಯಕ್ಷರು ತಮ್ಮ ಇತಿ–

ಮಿತಿಗಳನ್ನು ಮೀರಬಹುದು ಎನ್ನುವ ಹಿನ್ನೆಲೆಯಲ್ಲಿ ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪಿಸುತ್ತಾರೆಂದು ಮೊದಲೇ ತಿಳಿದಿದ್ದರೆ ನಾನು ಸರ್ವೋಚ್ಚ ನ್ಯಾಯಾಲಯವು ಹೊರಡಿಸಿದ ಆದೇಶದ ಪ್ರತಿಯನ್ನು ತೆಗೆದುಕೊಂಡು ಬರುತ್ತಿದ್ದೆನು. ಅದರ ಪ್ರತಿಯು ನನ್ನ ಬಳಿ ಇದೆ. ಸದರಿ ಆದೇಶದಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ಸ್ಪಷ್ಟ ಪಡಿಸುತ್ತದೆ. It says that 'the duty of the pro tem Speaker is only to administer oath and to conduct the elections' ಎನ್ನುವತಂಹ ಅಂಶವು ಇದೆ ಎಂಬುದಾಗಿ ನಾನು ಹೇಳಬಯಸುತ್ತೇನೆ. As per the provisions of Rule 7; the following Rules viz., Rule 7, 8, 9, 10 and 10A has to be read along with the provisions of Article 184 of the Constitution of India. Article 184 of the Constitution reads as follows:-

> *"(1) While the office of Chairman is vacant, the duties of the office shall be performed by the Deputy Chairman or, if the office of Deputy Chairman is also vacant, by such member of the council as the Governor may appoint for the purpose."*

Further clause (2) of Article 184 reads as follows:-

> *"During the absence of the Chairman from any sitting of the Council, the Deputy Chairman or, if he is also absent, such person as may be determined by the rules of procedure of the Council, or, if no such person is present, such other person as may be determined by the Council, shall act as Chairman."*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆ

When there is no regular Chairman, powers are vested only with the Council to elect a person to perform as a regular Chairman, not by the Governor. ಹೀಗಾಗಿ ಸಂವಿಧಾನದ ಅನುಚ್ಛೇದ 184 ರಲ್ಲಾಗಲೀ ಅಥವಾ ನಿಯಮಾವಳಿಗಳಲ್ಲಾಗಲೀ ಎಲ್ಲಿಯೂ ಸಹ 'pro tem Chairman' ಎಂಬ ಬಗ್ಗೆ ಇಲ್ಲಿಯೂ ಸಹ ಪ್ರಸ್ತಾಪ ಮಾಡಿಲ್ಲ. 1984 ನೇ ಸಾಲಿನಲ್ಲಿ ಇದೇ ರೀತಿಯಾಗಿ ವಿತಂಡ ವಾದವನ್ನು ಮಾಡಿದ ಸಂದರ್ಭದಲ್ಲಿ ಅಂತಿಮವಾಗಿ there was a resolution by this House against the pro tem Chairman. When the resolution was about to be considered ಆ ಸಂದರ್ಭದಲ್ಲಿ ಆ ಸ್ಥಾನದಲ್ಲಿದ್ದ ವ್ಯಕ್ತಿಯು ರಾಜೀನಾಮೆಯನ್ನು ನೀಡಿದರು. ನಂತರದಲ್ಲಿ ಚುನಾವಣೆಗಳನ್ನು ಮಾಡಿರುವಂತಹ ಉದಾಹರಣೆಗಳನ್ನು ನಾವು ಈ ಸದನದ ಇತಿಹಾಸದ ಪುಟಗಳಲ್ಲಿ ಕಾಣಲಿಕ್ಕೆ ಸಾಧ್ಯತೆ ಇದೆ. ಹೀಗಾಗಿ ನಾನು ಹೇಳುವುದೇನೆಂದರೆ, ಸಂವಿಧಾನದ ಅನುಚ್ಛೇದ 184 ರಲ್ಲಾಗಲೀ ಅಥವಾ ನಿಯಮಾವಳಿಗಳ ಕ್ರಮ ಸಂಖ್ಯೆ 7, 8, 9, 10 ಮತ್ತು 10-ಎ ಗಳಲ್ಲಿ 'pro tem Speaker' ಗೆ ಅವಕಾಶವಿಲ್ಲ. To some extent, he will be a regular Chairman but in reality he will not be a regular Chairman. ಹೀಗಾಗಿ ನಾನು ದಯಮಾಡಿ ಸರ್ಕಾರವನ್ನು ಈಗಿರುವ ambiguity ಯ ಬಗ್ಗೆ ಹಾಗೂ ಸಂವಿಧಾನದ ಆಶಯಗಳಿಗೆ ಒಂದು ರೀತಿಯಲ್ಲಿ ವ್ಯತಿರಿಕ್ತವಾಗಿರುವ ಅಂಶಗಳ ಬಗ್ಗೆ ಬಹುಶಃ ಈ ವಾರದಲ್ಲಿ ಇತಿಶ್ರೀ ಹಾಡಿ, ಯಾರನ್ನು ಬೇಕಾದರೂ, ತಮ್ಮನ್ನೋ ಅಥವಾ ಮತ್ತೊಬ್ಬರನ್ನೋ ಸಭಾಪತಿಯವರನ್ನಾಗಿ ನೇಮಕ ಮಾಡುವುದರ ಮೂಲಕ, 100 ವರ್ಷಗಳಿಗೂ ಹೆಚ್ಚು ಇತಿಹಾಸವಿರುವಂತಹ, ಈ ಸದನದ ಇತಿಹಾಸಕ್ಕೆ ಒಂದು ಮೆರುಗನ್ನು ತರುವುದಕ್ಕೆ ಸರ್ಕಾರ ಮುಂದಾಗಲಿ. ಏಕೆಂದರೆ ಇದರ ಮೂಲಕ ಒಂದು ಹೊಸ precedentನ ಅದು ಒಳ್ಳೆಯದು ಅಥವಾ ಕೆಟ್ಟದ್ದೋ ಅದನ್ನು ಮಾಡುವಂತಹ ಜವಾಬ್ದಾರಿ ನಮ್ಮೆಲ್ಲರದ್ದಾಗಿ. ಬಹುಶಃ ನನಗನ್ನಿಸುವುದೇನೆಂದರೆ, ಸರ್ಕಾರ ಒಳ್ಳೆಯ ಪೂರ್ವನಿದರ್ಶನವನ್ನು ಮಾಡುವುದಕ್ಕೆ ಮುಂದಾಗಲಿ ಎನ್ನುವಂತಹ ಮಾತನ್ನು ಹೇಳಿ, ಅವಕಾಶ ನೀಡಿದ್ದಕ್ಕಾಗಿ ವಂದಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ. Thank you.

(ಮುಂದು)

(098) 06-07-2018 (11-40) ಬಿಎಸ್‌ಡಿ/ಆರ್‌ಎನ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು :-** ಪ್ರಸ್ತುತ ನಾನು ಸದನವನ್ನು ನಡೆಸಬೇಕೋ ಅಥವಾ ನಡೆಸಬಾರದೋ ಎಂಬ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಉಗ್ರಪ್ಪನವರು ಕ್ಲಾರಿಫೈ ಮಾಡಬೇಕು. ನಮ್ಮ ಸದನದಲ್ಲಿ ಅನೇಕ ಕಾನೂನು ಪಂಡಿತರು ಇದ್ದಾರೆ. ಈ ವಿಚಾರವನ್ನು 2 ಅಥವ 3ನೇ ತಾರೀಖುಗಳಂದು ಪ್ರಸ್ತಾಪ ಮಾಡಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು ಎಂಬುದು ನನ್ನ ಅನಿಸಿಕೆ. ಮಾನ್ಯ ಸದಸ್ಯರುಗಳು ಮೊದಲೇ ನೋಟೀಸ್ ಕೊಟ್ಟಿದ್ದ ಪಕ್ಷದಲ್ಲಿ ಸರ್ಕಾರದೊಡನೆ ಚರ್ಚೆ ಮಾಡಿ ತೀರ್ಮಾನ ಮಾಡಬಹುದಾಗಿತ್ತು. ಈ ವಿಚಾರದ ಬಗ್ಗೆ ವಿಸ್ತೃತವಾದ ಚರ್ಚೆ ಆಗಬೇಕು ಮತ್ತು ಎಲ್ಲಾ ಮಾನ್ಯ ಸದಸ್ಯರಿಗೂ ತಿಳುವಳಿಕೆ ಬರಬೇಕೆಂಬ ಎಂಬ ಆಶಯದಿಂದ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಸದನದ ಘನತೆ-ಗೌರವದ ಬಗ್ಗೆ ನನಗೂ ಬಹಳಷ್ಟು ಅಭಿಮಾನ ಇದೆ. ನಾನೂ ಸಹ 38 ವರ್ಷಗಳಿಂದ ಈ ಸದನದ ಸದಸ್ಯನಾಗಿದ್ದು, ಎಲ್ಲರಿಗೂ ಮಾತನಾಡಲು ಅನುವು ಮಾಡಿಕೊಟ್ಟಿದ್ದೇನೆ. ಕಾನೂನು ಪ್ರಕಾರ ನಾನು ಪೀಠದಲ್ಲಿ ಕುಳಿತುಕೊಳ್ಳಲು ಸಾಧ್ಯವಿಲ್ಲ ಎಂದಾಗ ನಾನು ಒಂದು ನಿಮಿಷವೂ ಈ ಸ್ಥಾನದಲ್ಲಿ ಕುಳಿತುಕೊಳ್ಳುವುದಿಲ್ಲ ಎಂಬ ವಿಚಾರವನ್ನು ಸ್ಪಷ್ಟವಾಗಿ ಹೇಳುತ್ತೇನೆ. ನಾನು 2ನೇ ತಾರೀಖಿನಿಂದ ಸದನವನ್ನು ನಡೆಸಿಕೊಂಡು ಬಂದಿದ್ದೇನೆ, ಅದು ಸರಿಯೋ, ತಪ್ಪೋ, ತಾವೆಲ್ಲರೂ ಒಪ್ಪಿದ್ದೀರಿ. ಅದರಂತೆ ನಾನು ಇಲ್ಲಿಯವರೆಗೂ ಸದನವನ್ನು ನಡೆಸಿಕೊಂಡು ಬಂದಿದ್ದೇನೆ. ನಾನು ಪೀಠದಲ್ಲಿ ಕುಳಿತುಕೊಂಡು ಏನನ್ನೂ ಹೇಳುವುದಿಲ್ಲ. ನನಗೆ ಕಾನೂನು ಗೊತ್ತಿದೆ. ಈ ಸದನದಲ್ಲಿ 1980ರಿಂದ ಏನೇನು ನಡೆದಿದೆ ಎಂಬುದು ನನಗೆ ಗೊತ್ತಿದೆ. ಆದರೆ 2ನೇ ತಾರೀಖಿನಿಂದ ಸದನ ನಡೆದಿರುವುದು ಕಾನೂನು ಪ್ರಕಾರ ಸರಿ ಇಲ್ಲವೆಂದಾಗ ಮುಂದೆ ಸಹ ನಾನು ಈ ಪೀಠದಲ್ಲಿ ಕುಳಿತುಕೊಂಡು ಸದನ ನಡೆಸುವುದು ಲೀಗಲ್ ಆಗುವುದಿಲ್ಲ. ಕೊನೆಗೆ ಯಾವುದೂ ಲೀಗಲ್ ಆಗುವುದಿಲ್ಲ ಎಂದು ಪರಿಗಣಿಸಬಹುದಾದ ಪರಿಸ್ಥಿತಿ ಬರಬಹುದು. ನನ್ನನ್ನು ಇಲ್ಲಿ ಕೂರಿಸಿ, ಸದನ ನಡೆಸುವಂತೆ ಹೇಳಿದ್ದಕ್ಕೆ ಸದನವನ್ನು ನಡೆಸಿದ್ದೇನೆ, ಇಲ್ಲಿಯವರೆಗೂ ಯಾರೂ ಆಕ್ಷೇಪಣೆ ಮಾಡಿರಲಿಲ್ಲ, ಈಗ ಆಕ್ಷೇಪಣೆ ವ್ಯಕ್ತ ಮಾಡಿದ್ದಾರೆ. ಇಂತಹ ಸಂದರ್ಭದಲ್ಲಿ ನನಗೂ ಮಾನಸಿಕವಾಗಿ ಇಲ್ಲಿರಲು ಆಗುವುದಿಲ್ಲ. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಇಂತಹ ವಿಚಾರವನ್ನು ಹಿರಿಯ ಮಾನ್ಯ ಸದಸ್ಯರು ಮೊದಲೇ ಪ್ರಸ್ತಾಪ ಮಾಡಬೇಕಾಗಿತ್ತು. ಅದಕ್ಕಾಗಿ ನಾನು ಪೀಠದಲ್ಲಿ ಕುಳಿತು ಏನೂ ಮಾತನಾಡುವುದಿಲ್ಲ, ಏಕೆಂದರೆ ಇಲ್ಲಿ ಕುಳಿತು ಮಾತನಾಡುವುದು ಸರಿಯೂ ಅಲ್ಲ ಹಾಗೂ ಸಾಧ್ಯವೂ ಅಲ್ಲ. ಆದರೆ ಸದಸ್ಯನಾಗಿ ಕುಳಿತು ಮಾತನಾಡಬಹುದು. ಈ ರೀತಿ ಆಗಿರುವುದರ ಬಗ್ಗೆ ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರೂ ಹಾಗು ಮಾನ್ಯ ಉಗ್ರಪ್ಪನವರು ಏನು ಹೇಳುತ್ತಾರೆ ನೋಡೋಣ.

**ಶ್ರೀ ಐವನ್ ಡಿ'ಸೋಜಾ** :- ಮಾನ್ಯ ಸಭಾಪತಿಯವರೇ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು :–** ಮಾನ್ಯ ಡಿ'ಸೋಜಾ ರವರೇ, ಮಾನ್ಯ ಉಗ್ರಪ್ಪನವರು ಹೇಳಿದ ಮೇಲೆ ನೀವು ಹೇಳುವುದು ಏನೂ ಉಳಿಯುವುದಿಲ್ಲ.

**Sri IVAN D'SOUZA:-** Sir, I mean to say you are legally continue in Chair as a Chairman.

**ಸಭಾಪತಿಯವರು** :– ನಾನು ಇದರ ಬಗ್ಗೆ ಒಂದು ಸೆಕೆಂಡ್‌ನಲ್ಲಿ ತೀರ್ಮಾನ ಮಾಡುತ್ತೇನೆ. ಆದರೆ ಸರ್ಕಾರದ ಮತ್ತು ಸದನದ ಘನತೆ–ಗೌರವವನ್ನು ಉಳಿಸಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ನಾನು ಇನ್ನೂ ಕುಳಿತುಕೊಂಡಿದ್ದೇನೆ ಮತ್ತು ತಮಗೆಲ್ಲರಿಗೂ ವಿಸ್ತೃತ ಚರ್ಚೆ ಆಗಲು ಅನುವು ಮಾಡಿಕೊಟ್ಟಿದ್ದೇನೆ.

**ಶ್ರೀ ಕೃಷ್ಣ ಭೈರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರ ಅನುಮತಿಯೊಡನೆ ನಾನು ಹೇಳುವುದೇನೆಂದರೆ, ಈಗ ಒಂದು ವಿಚಾರದ ಬಗ್ಗೆ ವಿಸ್ತೃತವಾದ ಚರ್ಚೆಯಾಗಲಿ. ಅದಾದ ನಂತರ ಸರ್ಕಾರದ ನಿಲುವಿನ ಬಗ್ಗೆ ನಾನು ಸ್ಪಷ್ಟಪಡಿಸುತ್ತೇನೆ. ಈ ಮಧ್ಯದಲ್ಲಿ ತಾವು ಈ ಸಭಾಪೀಠದಲ್ಲಿ ಕುಳಿತುಕೊಳ್ಳಬೇಕೆ, ಬೇಡವೇ ಎಂಬ ಪ್ರಶ್ನೆಯನ್ನು ಎತ್ತಿದ್ದೀರಿ. ಸದ್ಯಕ್ಕೆ ನಾನು ತಮ್ಮ ವಿಚಾರಕ್ಕೆ ಸಂಬಂಧಪಟ್ಟಂತೆ ಮಾತ್ರ ಸ್ಪಷ್ಟೀಕರಣ ಕೊಡಬಯಸುತ್ತೇನೆ. ಇತರ ಸದಸ್ಯರ ವಿಚಾರಗಳಿಗೆ ಸಂಬಂಧಪಟ್ಟಂತೆ ನಂತರ ಮಾತನಾಡುತ್ತೇನೆ. ಇವೆರಡೂ ಒಂದಕ್ಕೊಂದು ಹೊಂದಾಣಿಕೆ ಇದ್ದರೂ ಸೀಮಿತವಾಗಿ ಮಾನ್ಯ ಸಭಾಪತಿಯವರಾದ ತಾವು ಮಾತನಾಡಿದ ವಿಚಾರಕ್ಕೆ ಸಂಬಂಧಪಟ್ಟಂತೆ ಮಾತ್ರ ಹೇಳಬಯಸುತ್ತೇನೆ. ಸಂವಿಧಾನದ ಅನುಚ್ಛೇದ 184ರಲ್ಲಿ ಇದರ ಬಗ್ಗೆ ಎಲ್ಲಿಯೂ ಯಾವುದೇ ಉಲ್ಲೇಖ ಇಲ್ಲ. ಹಾಗಾಗಿ ಘನತೆವೆತ್ತ ರಾಜ್ಯಪಾಲರು ತಮ್ಮನ್ನು ನೇಮಕ ಮಾಡಿದ್ದಾರೆ ಹಾಗೂ ಮುಂದಿನ ಅಧಿವೇಶನದೊಳಗೆ ಚುನಾವಣೆ ಆಗಬೇಕೆಂದು ಇದೆ. ಹಾಗಾಗಿ ಅಲ್ಲಿಯವರೆಗೂ ಹಂಗಾಮಿ ಸಭಾಪತಿಯವರ ಕಾರ್ಯಕಲಾಪಗಳ ಬಗ್ಗೆ ಯಾವುದೇ ಇತಿಮಿತಿ ಯಾವ ಆಯಾಮದಲ್ಲಿಯೂ ಇಲ್ಲ. ಹಂಗಾಮಿ ಸಭಾಪತಿಯವರು ಯಾವ ಕೆಲಸ ಮಾಡಬಹುದು, ಯಾವ ಕೆಲಸ ಮಾಡಬಾರದು, ಸಭೆಯನ್ನು ನಡೆಸಬೇಕು ಅಥವಾ ನಡೆಸಬಾರದು ಎಂಬ ಇತಿಮಿತಿ ಇಲ್ಲ. ಹಂಗಾಮಿ ಸಭಾಪತಿಯವರು ಸಭಾಪತಿಯವರ ಎಲ್ಲಾ ಕೆಲಸಗಳನ್ನು ಮಾಡಬಹುದು ಎಂಬ ವಿಚಾರ ಸ್ಪಷ್ಟವಾಗಿದೆ. ಸಭಾಪತಿಯವರ ಚುನಾವಣೆ ಬಗ್ಗೆ ನಾವುಗಳು ಚರ್ಚೆ ಮಾಡಬಹುದು. That is a debatable question. That is open and you have every right to question. ಏತನ್ಮಧ್ಯೆ ಸಭಾಪತಿಯವರು ಸಭೆ ನಡೆಸಬಹುದೋ ಅಥವಾ ನಡೆಸಬಾರದೋ ಎಂಬ ಬಗ್ಗೆ ಪ್ರಶ್ನೆ ಇಲ್ಲ. ಈ ರೀತಿಯಾಗಿ ಸರ್ಕಾರದ ನಿಲುವು ಸ್ಪಷ್ಟವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದೆ. ಸಭಾಪತಿಯವರ ಆಯ್ಕೆ ಪದ್ಧತಿ ಪ್ರಕಾರ ಯಾವಾಗ ಮಾಡಬೇಕು ಎನ್ನುವುದರ ಬಗ್ಗೆ ಚರ್ಚೆ ಮಾಡಲಿ. ಅಲ್ಲಿಯವರೆಗೂ *pro tem* Chairman ಬಗ್ಗೆ ಯಾವುದೇ ಇತಿಮಿತಿ ಇಲ್ಲ ಎಂಬ ಬಗ್ಗೆ let us all understand it very clearly.

**ಶ್ರೀ ವಿ.ಎಸ್. ಉಗ್ರಪ್ಪ** :- ಮಾನ್ಯ ಸಭಾಪತಿಯವರೇ, nomenclature ಬಗ್ಗೆ ...

**ಸಭಾಪತಿಯವರು** :- ಎರಡೂ ಮನೆಗಳ ವಿಚಾರದಲ್ಲಿ ಕೆಲವು ವಿಚಾರಗಳು ಬೇರೆ ಬೇರೆಯಾಗಿವೆ. ಸಭಾಪತಿಯವರ ಬಗ್ಗೆ ನಡೆದಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ತಿಳಿಸಿ.

**ಶ್ರೀ ವಿ.ಎಸ್. ಉಗ್ರಪ್ಪ** :- ಮಾನ್ಯ ಸಭಾಪತಿಯವರೇ, procedural aspect under Article.91, 92, 93, 94 and related ರಾಜ್ಯಸಭಾ ಮತ್ತು ಲೋಕಸಭೆಯಲ್ಲಿ ಇರುವಂತೆ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿಗೆ procedural aspects under Article.180 and 184 ಏನಿವೆ ಅವುಗಳ ಬಗ್ಗೆ ನಾವು Kaul & Shakdhar and Subash C.Kashyap ಅವರ ಪುಸ್ತಕಗಳಲ್ಲಿ ನೋಡಬೇಕಾಗುತ್ತದೆ. ನಾನು ಕೌಲ್ ಅಂಡ ಶಕ್ದರ್ ಪುಸ್ತಕವನ್ನು ತರಿಸಿಕೊಂಡಿರುವ ಹಿನ್ನೆಲೆಯಲ್ಲಿ ಹೇಳುತ್ತಿದ್ದೇನೆ. ಬಹುಶ: ತಾವು ಮಾನ್ಯ ಸದಸ್ಯರ ಪೀಠದಲ್ಲಿ ಆಸೀನರಾಗಿದ್ದರೆ ನಮಗಿಂತ ಹೆಚ್ಚು ಬೆಳಕನ್ನು ಚೆಲ್ಲುತ್ತಿದ್ದಿರಿ. 1984ರಲ್ಲಿ ಇಂತಹ ಸಮಸ್ಯೆ ಉದ್ಭವವಾದಾಗ ತಾವು ಭಾಗಿಯಾಗಿದ್ದಿರಿ.

**ಸಭಾಪತಿಯವರು** :- ಅದೆಲ್ಲಾ ನನಗೆ ಗೊತ್ತಿದೆ.

**ಶ್ರೀ ವಿ.ಎಸ್. ಉಗ್ರಪ್ಪ** :- ಇದೇ ರೀತಿಯ ಸಂದರ್ಭ ಉದ್ಭವವಾದ ಸಂದರ್ಭದಲ್ಲಿ under procedural aspect *pro tem* Chairman ಸದನ ನಡೆಸಲು ಬರುತ್ತದೋ ಇಲ್ಲವೋ ಎಂಬ ಚರ್ಚೆಯಲ್ಲಿ ಈ ಸದನದ ಸದಸ್ಯರಾಗಿ ತಾವು ಭಾಗಿಯಾಗಿದ್ದಿರಿ. ಹಾಗಾಗಿ ನಮಗಿಂತ ಹೆಚ್ಚು ಬೆಳಕು ಚೆಲ್ಲುವ ಅವಕಾಶ ಇರುತ್ತಿತ್ತು. ಆದರೆ ತಾವು ಪೀಠದಲ್ಲಿ ಇದ್ದೀರಿ, ಇದರ ಬಗ್ಗೆ ನಾವು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಕೌಲ್ ಅಂಡ್ ಶಕ್ದರ್‌ನಲ್ಲಿ *this nomenclature* that means *Speaker or pro tem Chairman distinguishes him from the Speaker elected by the House. This is point No.1. ಎರಡನೆಯದಾಗಿ After his appointment, the Speaker pro tem continues in office till the Speaker is chosen.* ಆದ್ದರಿಂದ ತಮ್ಮನ್ನು ನೇಮಕ ಮಾಡಿರುವುದರಿಂದ ತಮಗೆ ಸದನದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಲಾಪಗಳನ್ನು ನಡೆಸಲು ಅಧಿಕಾರ ಇದೆ. ಇದು ಕಾನೂನಿನಲ್ಲಿ ಊರ್ಜಿತವಾಗುತ್ತದೆ. ನಾನು ಒಂದು ಅಂಶವನ್ನು ಹೇಳಬಯಸುವುದೇನೆಂದರೆ ಲೋಕಸಭಾ ಅಥವಾ ರಾಜ್ಯಸಭಾ ಅಥವಾ ದೇಶದ ಯಾವುದೇ ರಾಜ್ಯದ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿ ಈ ರೀತಿಯ ಸಂದಿಗ್ಧ ಪರಿಸ್ಥಿತಿಗಳು ಕರ್ನಾಟಕ ಬಿಟ್ಟರೆ ಎಲ್ಲಿಯೂ ಉದ್ಭವವಾಗಿಲ್ಲ. ಕರ್ನಾಟಕದಲ್ಲಿ 1984-1985 ಹಾಗೂ 2018ರಲ್ಲಿ ಉದ್ಭವವಾಗುತ್ತಿದೆ.

**ಸಭಾಪತಿಯವರು** :- ಒಟ್ಟಾರೆ ಮೂರು ಸಾರಿ ಈ ರೀತಿಯ ಸಮಸ್ಯೆ ಉದ್ಭವವಾಗಿದೆ. ಶ್ರೀಯುತ ಎಂ.ವಿ. ರಾಜಶೇಖರನ್, ಶ್ರೀ ತಿಪ್ಪಣ್ಣ ಮತ್ತು ಪ್ರಸ್ತುತ ಈ ಸಮಸ್ಯೆ ಉದ್ಭವವಾಗಿದೆ.

**ಶ್ರೀ ವಿ.ಎಸ್. ಉಗ್ರಪ್ಪ** :- ಮಾನ್ಯ ಸಭಾಪತಿಯವರೇ, there has been no instance in Lok Sabha when the Speaker *pro tem* functioned as a regular Speaker for any length of time. ಕೌಲ್ ಅಂಡ್ ಶಕ್ದರ್‌ನ precedents ಪ್ರಕಾರ *pro tem* Speaker or Chairman he has to administer the oath/affirmation to the newly elected members and to conduct the election. That is the main purpose for the nomination of a *pro tem* Speaker. ಹಾಗಾಗಿ ಬಹುಶ: ಈಗ ನಡೆದಿರುವ ನಡವಳಿಗಳು ಅನೂರ್ಜಿತ ಆಗುತ್ತವೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ.

(ಮುಂದು)

99/06.07.2018/11.40/ಹೆಚ್‌ವಿಃಆರ್‌ಎನ್

**ಶ್ರೀ ವಿ.ಎಸ್.ಉಗ್ರಪ್ಪ(ಮುಂದು...)ಃ-**

ಸನ್ಮಾನ್ಯ ಸಭಾಪತಿಯವರೇ, ಬಹಳ ಕಾಲ ಹಂಗಾಮಿ ಸಭಾಪತಿಗಳಾಗಿಯೇ ಸದನವನ್ನು ನಡೆಸುವ ಬಗ್ಗೆ ಸಂವಿಧಾನದಲ್ಲಿ ಅಥವಾ ರೂಲ್ಸ್‌ನಲ್ಲಿ ಅವಕಾಶವಿಲ್ಲ. ಆದ್ದರಿಂದ ಸರ್ಕಾರ ಸಭಾಪತಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಗಳನ್ನು ಮತ್ತು ಅದಕ್ಕೆ ಬೇಕಾಗಿರುವ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಆಶಿಸುವುದಕ್ಕೆ ಬಯಸುತ್ತೇನೆ. ಆ ಮೂಲಕ ಒಂದು ಒಳ್ಳೆಯ precedent ಸೃಷ್ಟಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ(ನಾಮ ನಿರ್ದೇಶಿತರು)ಃ–** ಸನ್ಮಾನ್ಯ ಸಭಾಪತಿಯವರೇ, ನನ್ನ ಕೈಯಲ್ಲಿ Order of the Governor ಇದೆ. ಈ ಸದನದಲ್ಲಿ ಎರಡು ವಿಚಾರಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಒಂದು ಸಭಾಪತಿಗಳ ಸ್ಥಾನಕ್ಕೆ ಚುನಾವಣೆ ನಡೆಸುವುದು ಮತ್ತು ಹಂಗಾಮಿ ಸಭಾಪತಿಗಳಾಗಿ ಇಲ್ಲಿಯವರೆಗೆ ಮುಂದುವರೆದಿರುವುದು ಕಾನೂನು ರೀತ್ಯಾ ಸರಿಯೇ ಅಥವಾ ಕಾನೂನು ಬಾಹಿರವೇ ಎನ್ನುವುದು ಎರಡನೆಯ ಅಂಶವಾಗಿದೆ. ಮಾನ್ಯ ಸದಸ್ಯರುಗಳು Kaul & Shakdhar ನಲ್ಲಿ ಉಲ್ಲೇಖವಾಗಿರುವ ಅಂಶಗಳನ್ನು ಸದನದ ಗಮನಕ್ಕೆ ತಂದಿದ್ದಾರೆ. They are talk about the Parliament, that is the body which is not continuing. ಅದು dissolve ಆಗುತ್ತದೆ. ಇದು permanent body ಆಗಿದೆ. ಘನತೆವೆತ್ತ ರಾಜ್ಯಪಾಲರು ನೀಡಿರುವ ಆರ್ಡರ್‌ನಲ್ಲಿ ಎಲ್ಲಿಯೂ *pro tem* ಅಥವಾ *pro tem* Chairman ಎನ್ನುವ ಪದವನ್ನು ಬಳಕೆ ಮಾಡಿಲ್ಲ. ಆ ಆರ್ಡರ್‌ನಲ್ಲಿ 'ಸಭಾಪತಿ' ಮತ್ತು 'ಉಪ ಸಭಾಪತಿ' ಎರಡೂ ಸ್ಥಾನಗಳು ಖಾಲಿ ಇರುವಂತಹ ಸಂದರ್ಭದಲ್ಲಿ ಮುಂದಿನ ಅಧಿವೇಶನದಲ್ಲಿ ಸಭಾಪತಿಗಳ ಹುದ್ದೆಗೆ ನೇಮಕ ಮಾಡುವವರೆಗೆ ತಾವು ಸಭಾಪತಿಗಳಾಗಿ ಕಾರ್ಯನಿರ್ವಹಿಸಬೇಕೆಂದು ತಿಳಿಸಲಾಗಿದೆ. That is very clear in the order and this order is in confirmation with Article.184 r/w 208 of the Constitution and Business Rules of this August House. That means you are a full time Chairman until new Chairman is appointed in the next Session. That is the rule of this House.

ಆದ್ದರಿಂದ ಆ ಪೀಠದಿಂದ ತಾವು ಇದುವರೆವಿಗೂ ಏನು ಕ್ರಮ ತೆಗೆದುಕೊಂಡಿದ್ದೀರಿ ಅದು ಕಾನೂನು ರೀತ್ಯಾ ಸರಿಯಾಗಿದೆ. Only one question is before us. ಸರ್ಕಾರ ತಕ್ಷಣವೇ ಸಭಾಪತಿಗಳ ಸ್ಥಾನಕ್ಕೆ ಚುನಾವಣೆಯನ್ನು ಘೋಷಣೆ ಮಾಡಬೇಕು, ಅದು ಈ ಅಧಿವೇಶನ ಮುಗಿಯುವುದರೊಳಗೆ ಆಗಬೇಕು ಎನ್ನುವುದು ಅಷ್ಟೇ ಮುಖ್ಯವಾಗಿರುವ ಅಂಶವಾಗಿದೆ. ಈ ಅಧಿವೇಶನ ಮುಗಿಯುವುದರೊಳಗೆ ಸಭಾಪತಿಗಳ ಸ್ಥಾನಕ್ಕೆ ಚುನಾವಣೆಯಾಗಬೇಕು, ಹೊಸ ಸಭಾಪತಿಗಳ ನೇಮಕವಾಗಬೇಕು ಅಲ್ಲಿಯವರೆಗೆ this Chairman is having all powers whatever the powers under the Constitution for a Chair.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಈ ಚರ್ಚೆ ಏತಕ್ಕೋಸ್ಕರ ಈ ಸದನದೊಳಗೆ ಪ್ರಾರಂಭವಾಗಿದೆ ಎಂದರೆ, ಮಾಧ್ಯಮಗಳು ಸೇರಿದಂತೆ ಅನೇಕರು, 'ವಿಧಾನಪರಿಷತ್ತಿನಲ್ಲಿ ಸಂವಿಧಾನದ ಬಿಕ್ಕಟ್ಟು', 'ಹಂಗಾಮಿ ಸಭಾಪತಿಯವರಿಗೆ ಅಧಿಕಾರ ವ್ಯಾಪ್ತಿಯು ಪ್ರಶ್ನಾರ್ಹ' ಎನ್ನುವ ಶಿರೋನಾಮೆಯಡಿಯಲ್ಲಿ ಚರ್ಚೆಗಳು ವ್ಯಾಪಕವಾಗಿ ನಡೆದ ಕಾರಣ ಸದಸ್ಯರಾದ ಮಾನ್ಯ ಆಯನೂರು ಮಂಜುನಾಥ್‌ರವರು ಸೇರಿದಂತೆ ನಾವೆಲ್ಲರೂ ಚರ್ಚೆ ಮಾಡುತ್ತಿದ್ದೇವೆ. ಪೀಠಕ್ಕೆ ಮತ್ತು ಪೀಠದಲ್ಲಿ ಕುಳಿತಿರುವ ತಮಗೆ ಮುಜುಗರವಾಗದಂತೆ ಇಷ್ಟೊಂದು ಸಹನೆಯಿಂದ, ತಾಳ್ಮೆಯಿಂದ, ಜವಾಬ್ದಾರಿಯುತವಾಗಿ ಮತ್ತು ಎಲ್ಲಿಯೂ ನಿಯಮಾವಳಿಗಳ ಚೌಕಟ್ಟನ್ನು ಬಿಟ್ಟು ಹೋಗದಂತೆ ಚರ್ಚೆ ಮಾಡುತ್ತಿದ್ದೇವೆ. ಇದರಲ್ಲಿ ಯಾವುದೇ ರೀತಿಯ ರಾಜಕಾರಣವಿಲ್ಲ. ಹಂಗಾಮಿ ಸಭಾಪತಿಯವರನ್ನು ಆಯ್ಕೆ ಮಾಡಿದ ನಂತರ ಅದಕ್ಕಿರುವ ಅಧಿಕಾರದ ವ್ಯಾಪ್ತಿ ಮತ್ತು ಇತಿಮಿತಿ ಸರ್ಕಾರಕ್ಕೆ ಮತ್ತು ಕಾನೂನು ಸಚಿವರಿಗೂ ಗೊತ್ತಿದೆ.

ಹೊಸ ಸದಸ್ಯರುಗಳ ಪ್ರಮಾಣ ವಚನ ಪ್ರಕ್ರಿಯೆ ಮುಗಿದ ನಂತರ ಸಭಾಪತಿಗಳ ಸ್ಥಾನಕ್ಕೆ ಚುನಾವಣೆ ಘೋಷಣೆ ಮಾಡಲು ಸರ್ಕಾರಕ್ಕೆ ಯಾವುದೇ ತೊಂದರೆ ಇರಲಿಲ್ಲ. ಇಂತಹ ವ್ಯವಸ್ಥೆ ನಿರ್ಮಾಣವಾಗುವುದಕ್ಕೆ ಯಾರು ಕಾರಣ? ಸಂವಿಧಾನ, ನಿಯಮ, ಪಕ್ಷ, ಹಂಗಾಮಿ ಸಭಾಪತಿಗಳನ್ನು ಮುಂದುವರೆಸಬೇಕೇ ಅಥವಾ ಬೇಡವೇ ಎನ್ನುವಂತಹ ಗೊಂದಲಗಳು ಬೇಡ. ಮಾನ್ಯ ಕಾನೂನು ಸಚಿವರು ಈ ಸದನ ಮುಗಿಯುವುದರೊಳಗೆ ಇಂತಹ ದಿನ ಚುನಾವಣೆಯನ್ನು ಮಾಡುತ್ತೇವೆಂದು ಚುನಾವಣೆಯ ದಿನಾಂಕವನ್ನು ಪ್ರಕಟಿಸಬೇಕಾಗಿದೆ ಎನ್ನುವುದು ನಮ್ಮ ಆಗ್ರಹವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಪೀಠಕ್ಕೆ ನಾವು ಗೌರವವನ್ನು ಕೊಡುತ್ತೇವೆ. ಪೀಠದ ಆದೇಶವನ್ನು ಪಾಲಿಸುತ್ತೇವೆ. ತಮ್ಮ ಬಗ್ಗೆ ಮತ್ತು ಪೀಠದ ಬಗ್ಗೆ ನಾವು ಸಂಪೂರ್ಣವಾದ ಗೌರವವನ್ನು ಹೊಂದಿದ್ದೇವೆ.

**ಶ್ರೀ ಕೆ.ಬಿ.ಶಾಣಪ್ಪ (ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಪೀಠದ ಬಗ್ಗೆ ನಮ್ಮ ನಾಯಕರು ಈಗಾಗಲೇ ಹೇಳಿದ್ದಾರೆ. ನಾವು ಏನು ವಾದವನ್ನು ಪ್ರಾರಂಭ ಮಾಡಿದ್ದೆವೋ ಅಲ್ಲಿಗೆ ಬಂದು ನಿಂತಿದ್ದೇವೆ. ಯಾರನ್ನೇ ಆಗಲಿ 'ಹಂಗಾಮಿ ಸಭಾಪತಿ' ಎಂದು ನೇಮಕ ಮಾಡಿದ ಮೇಲೆ ಇದಕ್ಕೆ ಕೆಲವೊಂದು ಇತಿಮಿತಿಗಳು ಇರುತ್ತವೆ. ಯಾವಾಗ ಸಭಾಪತಿಗಳ ಸ್ಥಾನಕ್ಕೆ ಚುನಾವಣೆ ನಡೆಸಲಾಗುತ್ತದೆ ಎನ್ನುವುದು ಸರ್ಕಾರಕ್ಕೆ ಬಿಟ್ಟ ವಿಚಾರವಾಗಿದೆ. ಪೀಠಕ್ಕೆ ಅವಮಾನವಾಗದೇ ಇರುವಂತೆ ನೋಡಿಕೊಳ್ಳುವ ಜವಾಬ್ದಾರಿ ತಮ್ಮದು. ತಾವು ಹಿರಿಯ ಸದಸ್ಯರಾಗಿದ್ದೀರಿ. Many things has been seen

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

in your life. ತಮ್ಮನ್ನೇ ಮುಂದುವರೆಸುವುದು ಅಥವಾ ಹೊಸ ಸಭಾಪತಿಯವರನ್ನು ಆಯ್ಕೆ ಮಾಡುವುದು ಸರ್ಕಾರಕ್ಕೆ ಬಿಟ್ಟಿರುವ ವಿಚಾರವಾಗಿದೆ. ಹೊಸ ಸಭಾಪತಿಯವರನ್ನು ಆಯ್ಕೆ ಮಾಡುವವರೆಗೆ ತಮಗೆ ಹಾಗೂ ಈ ಸರ್ಕಾರಕ್ಕೆ ನಮ್ಮ ಸಹಕಾರವಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಆಯನೂರು ಮಂಜುನಾಥ(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾಧ್ಯಮಗಳಲ್ಲಿ ಸದನದ ಪೀಠದ ಬಗ್ಗೆ ಚರ್ಚೆಯಾದ ಹಿನ್ನೆಲೆಯಲ್ಲಿ ಮನಸ್ಸಿಗೆ ಬೇಸರವಾಗಿ ನಾನು ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಇದನ್ನು ರಾಜಕೀಯ ಚರ್ಚೆಯನ್ನಾಗಿ ಮಾಡುವ ಅಥವಾ academic interest ಹಿನ್ನೆಲೆಯಲ್ಲಿ ಮಾತನಾಡುವ ಉದ್ದೇಶ ನನಗಿಲ್ಲ ಎನ್ನುವ ಅಂಶವನ್ನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಈಗ ಚೆಂಡು, ಆಯನೂರು ಮಂಜುನಾಥ್‌ರವರ ಅಭಿಪ್ರಾಯದ ಮೇಲೆ, ಮಾನ್ಯ ಉಗ್ರಪ್ಪನವರ ಅಭಿಪ್ರಾಯದ ಮೇಲೆ ಅಥವಾ ಈ ಸದನದ ಅಭಿಪ್ರಾಯದ ಮೇಲೆ ನಿಂತಿಲ್ಲ, ತಮ್ಮ ಕೋರ್ಟ್‌ಗೆ ಬಂದು ಬಿದ್ದಿದೆ. ಆ ಚೆಂಡನ್ನು ಯಾವ ದಿಕ್ಕಿಗೆ ಒದೆಯಬೇಕು ಎನ್ನುವ ನಿರ್ಧಾರವನ್ನು ತಾವು ಮಾಡಬೇಕಾಗಿದೆ. ನಮ್ಮ ರಾಷ್ಟ್ರದ ಇತಿಹಾಸದಲ್ಲಿಯೇ ಪ್ರಥಮ ಬಾರಿಗೆ 1984-85ರಲ್ಲಿ ಈ ಸದನದಲ್ಲಿ ಇಂಥಹದೇ ರೀತಿಯ ಪರಿಸ್ಥಿತಿಯುಂಟಾದಾಗ 'ಹಂಗಾಮಿ ಸಭಾಪತಿ' ಎನ್ನುವುದನ್ನು ತೆಗೆದು ಹಾಕಬೇಕೆನ್ನುವ ನಿರ್ಣಯವನ್ನು ಮೂವ್ ಮಾಡಲಾಯಿತು. ಆ ಪ್ರಕರಣದಲ್ಲಿ ಲೋಕಸಭೆಯವರು 'ಇಂತಹ instance ನಡೆದಿಲ್ಲ' ಎನ್ನುವ ಮಾತನ್ನು ಹೇಳಿದ್ದರು. ಕೊನೆಗೆ ಅದು ಅಂತಿಮಘಟ್ಟ ಕಂಡಿತು. ಈಗ 2008ರಲ್ಲಿ ನಡೆದಂತಹ ಪ್ರಕರಣವನ್ನು ಉಲ್ಲೇಖಿಸಲಾಗಿದೆ. ಯಾರದೋ ಮರ್ಜಿಯಲ್ಲಿ ತಾವು ಆ ಪೀಠದಲ್ಲಿ ಕೂರಬೇಕಾಗಿಲ್ಲ. 'ಯಾರೋ ನಿರ್ಣಯವನ್ನು ಮೂವ್ ಮಾಡಿದರು' ಎನ್ನುವ ವಿವಾದಕ್ಕೆ ಈ ಪೀಠ ಒಳಗಾಗಬಾರದು. ಸರ್ಕಾರದ ಪ್ರಕ್ರಿಯೆ ತಪ್ಪಾಗಿರುವ ಹಿನ್ನೆಲೆಯಲ್ಲಿ, ಸರ್ಕಾರ ಮೈಮರೆತು ಕುಳಿತುಕೊಂಡಿರುವ ಹಿನ್ನೆಲೆಯಲ್ಲಿ ಮತ್ತು ಸಭಾ ನಡವಳಿಕೆಗಳ ಬಗ್ಗೆ ಗಾಂಭೀರ್ಯತೆ ಇಲ್ಲದೆ, ಇದರ ಬಗ್ಗೆ ಯಾವುದೇ ಆಲೋಚನೆಗಳನ್ನು ಮಾಡದೇ ಆಂತರಿಕ ರಾಜಕಾರಣದಲ್ಲಿ ಮುಳಗಿರುವ ಪರಿಣಾಮವಾಗಿ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಇವತ್ತು ಈ ಸದನ ಚರ್ಚೆಗೊಳಗಾಗುವಂತಹ ಅಪರಾಧ ನಡೆದಿದೆ. ಅದಕ್ಕೆ ಆಡಳಿತ ಪಕ್ಷವೇ ಕಾರಣವೆಂದು ನಾನು ಭಾವಿಸುತ್ತೇನೆ.

'ನಾವು ಯಾರೋ ಒಪ್ಪುತ್ತೇವೆ, ಅದಕ್ಕೆ ತಾವು ಪೀಠದಲ್ಲಿ ಮುಂದುವರೆಯಬಹುದು ಅಥವಾ ಕಾನೂನು ಈ ರೀತಿ ಹೇಳಿದೆ' ಎಂದು ಕಾನೂನಿನ ಮರೆಯಲ್ಲಿ ಈ ಪೀಠದಲ್ಲಿ ಮುಂದುವರೆಯುವುದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಿಡುವುದು ತಮಗೆ ಬಿಟ್ಟಿರುವ ವಿಚಾರ. ಆದರೆ, ತಮ್ಮ ಇಷ್ಟು ಸುದೀರ್ಘ ಸದನದ ಅನುಭವದೊಳಗೆ ಬಹು ದೊಡ್ಡ ಅವಕಾಶ ತಮ್ಮ ಕಣ್ಮುಂದೆ ಬಂದು ನಿಂತಿದೆ. ಇಡೀ ದೇಶ ಗಮನಿಸುವಂತಹ ದಾಖಲೆಯ ನಿರ್ಣಯವನ್ನು ತಾವು ಕೈಗೊಳ್ಳಬಹುದು. ಅದು ತಮ್ಮ ಆತ್ಮಸಾಕ್ಷಿಗೆ ಬಿಟ್ಟಿರುವ ವಿಚಾರವಾಗಿದೆ. ಸರ್ಕಾರದ ಬೇಜವಾಬ್ದಾರಿತನದಿಂದ ಈ ಸದನದ ಪೀಠ ಇಕ್ಕಟ್ಟಿಗೆ ಸಿಲುಕಿದೆ. ವಿರೋಧ ಪಕ್ಷದವರ ಅಭಿಪ್ರಾಯಗಳಿಗೆ ಮಾನ್ಯತೆ ಕೊಡಬೇಕು, ಸರ್ಕಾರದಲ್ಲಿ ಯಾರನ್ನೋ ಉಳಿಸಬೇಕು ಅಥವಾ ಸರ್ಕಾರಕ್ಕೆ ಆಗುವಂತಹ ಮುಖಭಂಗವನ್ನು ತಪ್ಪಿಸಬೇಕು ಎನ್ನುವ ನಿಟ್ಟಿನಲ್ಲಿ ತಾವು ಆಲೋಚಿಸುವುದಕ್ಕೆ ಹೋಗಬಾರದು. ಇದು ನ್ಯಾಯಪೀಠ. ಇದಕ್ಕೆ ಕಪ್ಪು ಚುಕ್ಕೆ ಬಾರದಿರುವಂತೆ, ಎಲ್ಲ ಚರ್ಚೆಗಳನ್ನು ಆಧರಿಸಿ, ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಆ ಸ್ಥಾನದ ಗೌರವವನ್ನು ಯಾವ ರೀತಿಯಲ್ಲಿ ಕಾಪಾಡಬೇಕು ಎನ್ನುವ ತೀರ್ಮಾನವನ್ನು ತಮ್ಮ ಅನುಭವದ ಹಿನ್ನೆಲೆಯಲ್ಲಿ ಕೈಗೊಳ್ಳಬೇಕು. ಇದು ಯಾರ ಮರ್ಜಿಯೂ ಅಲ್ಲ. ಈ ಪೀಠದ ಪರಂಪರೆಯನ್ನು ಗೌರವವನ್ನು ಕಾಪಾಡುವ ಬಹು ದೊಡ್ಡ ತೀರ್ಪಿನದ ಘಟ್ಟ ತಮ್ಮ ಕೈಯಲ್ಲಿದೆ. ತಮಗೆ ಹೇಗೆ ಭಗವಂತ ಬುದ್ಧಿ ಕೊಡುತ್ತಾನೋ ಮತ್ತು ತಮ್ಮ ಆತ್ಮಸಾಕ್ಷಿ ಹೇಗೆ ಹೇಳುತ್ತದೆಯೋ ಆ ರೀತಿ ತಾವು ತೀರ್ಮಾನವನ್ನು ತೆಗೆದುಕೊಳ್ಳಿ. ನಮ್ಮೆಲ್ಲರ ಅಭಿಪ್ರಾಯಗಳನ್ನು ಬಿಟ್ಟು ಆ ಪೀಠ ಮತ್ತು ತಮ್ಮ ಘನತೆ ಗೌರವವನ್ನು ಗಮನದಲ್ಲಿಟ್ಟುಕೊಂಡು ತಾವು ತೀರ್ಮಾನವನ್ನು ತೆಗೆದುಕೊಳ್ಳಬಹುದು.

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಸದನದಲ್ಲಿ ಬಹಳ ವಿಸ್ತೃತವಾಗಿ ಚರ್ಚೆ ನಡೆದಿದೆ. ಆತ್ಮವಂಚನೆಯ ಪ್ರಶ್ನೆ ಇಲ್ಲಿ ಬರುವುದಿಲ್ಲ. ಕಾನೂನಿನಲ್ಲಿ ಏನು ಹೇಳಿದೆ ಅದರ ಪ್ರಕಾರ ಈ ರಾಜ್ಯದ ಘನತೆವೆತ್ತ ರಾಜ್ಯಪಾಲರು ಆದೇಶವನ್ನು ಮಾಡಿದ್ದಾರೆ. *The Constitution and as well as rules are very silent about the protem and as well as duties. Duties performed and determined* ಎನ್ನುವ ಶಬ್ಧವನ್ನು ಅಲ್ಲಿ ಬಳಕೆ ಮಾಡಿದ್ದಾರೆ. ಆದ್ದರಿಂದ 'ತಾವು ಹಂಗಾಮಿ ಸಭಾಪತಿಗಳಾಗಿ ಹೀಗೆ ಮಾಡಬೇಕು, ತಮ್ಮದು ಇಷ್ಟೇ ಕೆಲಸ' ಎನ್ನುವುದು *neither Constitution speaks nor the rules framed by ourself speaks. So, under these circumstances, I could also makes out very clear about reference made by our Hon'ble Members on the floor of this House with regard to the page;117, 119 and as well as 91.*

(ಮುಂದುವರಿದಿದೆ)

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(100) : 6.7.2018 : 11.50 : ಪಿಕೆ:ವಿಕೆ

**ಶ್ರೀ ಶರಣಪ್ಪ ಮಟ್ಟೂರ(ಮುಂದುವರೆದಿದೆ)**

But it does not contrary with the Article 184 of the Constitution of India. But, the Judgement is also referred by our Hon'ble Member Mr. Ayanur Manjunath. He has not referred the Judgement in which it has been stuck down the Article 184 with regard to confer the duties of the Speaker. ನೀವೇನು ಮಾಡಬೇಕು? ಹೀಗೆಯೇ ಮಾಡಬೇಕು, ನಿಮಗೆ powers ಇಲ್ಲ ಎಂಬ ವಿಚಾರ ಯಾವುದೇ ಜಡ್ಜ್‌ಮೆಂಟ್‌ನಲ್ಲೂ ಬಂದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಭೋಪಯ್ಯನವರಿಗೆ ಸಂಬಂಧಪಟ್ಟ ಜಡ್ಜ್‌ಮೆಂಟ್ ಬಗ್ಗೆ ಇಲ್ಲಿ ಹೇಳಿದರು. The facts and circumstances of that case are different from this case. ಈ ಕೇಸ್‌ನಲ್ಲಿ ತಮ್ಮನ್ನು ಹೊಗಳಿ ಮಾತನಾಡುವವರು ಉಂಟು, ಆದರೆ ಇನ್ನೊಂದು ವಿಚಾರದಲ್ಲಿ ಬೇರೆ ರೀತಿ ಹೇಳುವುದು ಉಂಟು. ಮಾನ್ಯ ಸಭಾಪತಿಯವರೇ, ತಮ್ಮ ಕರ್ತವ್ಯಗಳು ಹೀಗೆಯೇ ಇರಬೇಕೆಂದು ಎಲ್ಲಿಯೂ ಸಂವಿಧಾನದಲ್ಲಿ ಹೇಳಿಲ್ಲ ಎನ್ನುವುದನ್ನು ನಾನು ಪುನರುಚ್ಚರಿಸುವುದಕ್ಕೆ ಬಯಸುತ್ತೇನೆ. The Constitution is very silent about these issues. It has been clearly convinced by our Hon'ble Law and Parliamentary Affairs Minister and the Hon'ble Deputy Chief Minister. ಹಾಗಾಗಿ ತಾವು ಹೀಗೆಯೇ ಕೆಲಸ ನಿರ್ವಹಿಸಬೇಕು ಎಂದು ಸಂವಿಧಾನ ಕೂಡ ಹೇಳುವುದಿಲ್ಲ. ತಾವು ನಿರ್ವಹಿಸುತ್ತಿರುವ ಕರ್ತವ್ಯ ಸರಿಯಾಗಿಯೇ ಇದೆ.

**ಶ್ರೀ ಕೆ.ಬಿ. ಶಾಣಪ್ಪಃ-** ಮಾನ್ಯ ಸಭಾಪತಿಯವರೇ, .....

**ಸಭಾಪತಿಯವರು:-** ಮಾನ್ಯ ಶಾಣಪ್ಪನವರೇ, ಮಧ್ಯದಲ್ಲಿ ಎದ್ದುನಿಂತು ಏಕೆ ಮಾತನಾಡುತ್ತೀರಿ? ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಈಗ ಮಾನ್ಯ ಮಟ್ಟೂರರವರು ಮಾತನಾಡುತ್ತಿದ್ದಾರೆ. ಅವರು ಮಾತನಾಡಲಿ ಬಿಡಿ. ಇಲ್ಲಿ ಮಾತನಾಡುವುದಕ್ಕೆ ಎಲ್ಲಾ ಸದಸ್ಯರಿಗೂ ಅಧಿಕಾರ ಇದೆ. ಸದನದ ಸದಸ್ಯರ ಮಾತನಾಡುವ ಹಕ್ಕನ್ನು ಮೊಟಕು ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಶರಣಪ್ಪ ಮಟ್ಟೂರಃ-** ಮಾನ್ಯ ಸಭಾಪತಿಯವರೇ, ನಾನು ಹೊಸಬನಾಗಿ, with little knowledge ಎಂದು ನೇರವಾಗಿ ಹೇಳಬಯಸುತ್ತೇನೆ. With rich experience, ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದನದಲ್ಲಿ ನಾಲ್ಕು ದಶಕಗಳನ್ನು ಕಳೆದು, ತಾವು ಎಲ್ಲವನ್ನೂ ನೋಡಿಕೊಂಡು ಬಂದಿದ್ದೀರಿ. ತಮ್ಮ ಪ್ರಾಮಾಣಿಕತೆ, ಬದ್ಧತೆಯನ್ನು ತಮ್ಮ ಜೊತೆಯಲ್ಲಿ ಕಳೆದ 4 ವರ್ಷಗಳಿಂದ ಸಮಿತಿಗಳಲ್ಲಿ ಕೆಲಸ ಮಾಡುತ್ತಾ ನೋಡಿದ್ದೇನೆ. ಒಂದು ವೇಳೆ ಅಂತಹ ಅಪಕೀರ್ತಿ ವಿಚಾರ ಬಂದರೆ ತಾವು ಆ ಸ್ಥಾನದಲ್ಲಿ ಉಳಿಯುವುದಿಲ್ಲ ಎನ್ನುವುದು ನನಗೆ ಗೊತ್ತು. ಆದರೆ, ತಾವು ಹೀಗೆಯೇ ನಡೆದುಕೊಳ್ಳಬೇಕು ಎಂದು ಎಲ್ಲೂ ಇಲ್ಲ ಮತ್ತು ಅಂತಹ ನಿರ್ಧಾರಗಳನ್ನು ತಾವು ತೆಗೆದುಕೊಳ್ಳಬೇಕಾಗಿಯೂ ಇಲ್ಲ. ಸಂವಿಧಾನ ನಿಮ್ಮ ರಕ್ಷಣೆಗೆ ಬಂದಿದೆ, ಮಾನ್ಯ ರಾಜ್ಯಪಾಲರೂ ಈ ಕುರಿತು ಸ್ಪಷ್ಟವಾಗಿ ಹೇಳಿದ್ದಾರೆ. ಮತ್ತೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಅಂತಹ ಯಾವುದೇ ಶಬ್ದಗಳೂ ಇಲ್ಲ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರೂ ಕೂಡ ಈ ಕುರಿತು ಈಗಾಗಲೇ ಹೇಳಿದ್ದಾರೆ. ಸದನದಲ್ಲಿ ಈ ವಿಚಾರ ಬಂದಿದೆ. Constitution has very much protected your interest to act as a Chairman of this House. Accordingly, by exercising the powers under Article 184 of the Constitution Hon'ble Governor has issued this order. Again I am telling you, he has also reiterated the language enumerated under Article 184 of the Constitution and also Rule 7(6) of Rules of Procedure and Conduct of Business is very clear. ಹಾಗಾಗಿ ಈ submission ಅನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಭೋಜೇಗೌಡ (ಶಿಕ್ಷಕರ ಕ್ಷೇತ್ರ)** :- ಮಾನ್ಯ ಸಭಾಪತಿಯವರೇ, ಈ ವಿಚಾರ ಲಾಭ ಪಡೆಯುವಂಥದ್ದು ಅಲ್ಲ ಅಥವಾ ಆತ್ಮಾವಲೋಕನ ಮಾಡುವಂಥ ವಿಚಾರವೂ ಅಲ್ಲ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ಕಾನೂನಿನ ವ್ಯಾಪ್ತಿಯಲ್ಲಿ ಮಾತ್ರ ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿ, ರಾಜಕೀಯ ಮಾತನಾಡುವುದಕ್ಕೆ ಹೋಗಬೇಡಿ.

**ಶ್ರೀ ಭೋಜೇಗೌಡ** :- ಮಾನ್ಯ ಸಭಾಪತಿಯವರೇ, ಈ ಅಧಿವೇಶನ ಯಾವ ಸಂದರ್ಭದಲ್ಲಿ ಪ್ರಾರಂಭವಾಯಿತು ಎನ್ನುವುದು ಬಹಳ ಮುಖ್ಯ. ಅಧಿವೇಶನ ಪ್ರಾರಂಭವಾಗುವಂಥ ಸಂದರ್ಭದಲ್ಲಿ ಸಭಾಪತಿಗಳ ಸ್ಥಾನ ಖಾಲಿ ಇರಬಾರದು, ಸಭಾಪತಿಗಳು ಇರಲೇಬೇಕಾಗುತ್ತದೆ. ಇಲ್ಲಿ ಸರ್ಕಾರದ ಲೋಪವಿದೆ ಎಂದು ಪ್ರಸ್ತಾಪವಾದ ಹಿನ್ನೆಲೆಯಲ್ಲಿ ನಾನು ಒಂದು ವಿಚಾರ ಹೇಳುವುದಕ್ಕೆ ಇಷ್ಟಪಡುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಮ್ಮ ನಿಯಮದಲ್ಲಿ *"ವಿಧಾನ ಪರಿಷತ್ತಿನ ಸಭಾಪತಿ ಹುದ್ದೆಯು ಖಾಲಿಯಾದಾಗ ಅವರ ನೇಮಕಾತಿಯ ಸಲುವಾಗಿ ನಿಗದಿಪಡಿಸಿದ ದಿನಾಂಕವು ನಿಕಟೋತ್ತರ ಅಧಿವೇಶನದ ದಿನಾಂಕಕ್ಕೆ ಕಡಿಮೆ ಇರತಕ್ಕದ್ದಲ್ಲ"* ಎಂದಿದೆ. ಇದು ಬಹಳ ಮುಖ್ಯವಾದುದು. "ನಿಕಟೋತ್ತರ" ಅಂದರೆ, ಅಧಿವೇಶನದ ದಿನಾಂಕಕ್ಕಿಂತ ಕಡಿಮೆ ಇರಬಾರದು ಎಂದಿದೆ. ಆ ಸಂದರ್ಭದಲ್ಲಿ pro tem Chairman ಆಯ್ಕೆ ಮಾಡಲು ಸರ್ಕಾರ ರಾಜ್ಯಪಾಲರಿಗೆ ಬರೆದು ಕಳುಹಿಸುತ್ತಾರೆ. ಆ ಪ್ರಕ್ರಿಯೆ ಹಿನ್ನೆಲೆಯಲ್ಲಿ ತಾವು ಆಯ್ಕೆಯಾಗಿದ್ದೀರಿ. ನಂತರ ತಾವು ಪ್ರಮಾಣ ವಚನ ಬೋಧಿಸಿದಿರಿ, ಈಗ ಅಧಿವೇಶನವನ್ನು ನಡೆಸುತ್ತಿದ್ದೀರಿ.

ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು ಮಾತನಾಡುತ್ತಾ ಚುನಾವಣೆ ಮುಗಿದ ನಂತರ "till the new Speaker or Chairman is elected" ಎಂಬುದನ್ನು ನಮೂದು ಮಾಡಿದರು. There is no particular time limit for it. ಇಲ್ಲಿಯವರೆಗೆಯೇ, stipulated time ನಲ್ಲಿ ಅಥವಾ ಇಂತಹ ದಿನಾಂಕದೊಳಗಡೆಯೇ ಹೊಸ ಸಭಾಪತಿಯವರನ್ನು ನೇಮಕ ಮಾಡಬೇಕು ಎನ್ನುವ ಅಂಶ ಅವರು ಓದಿದ್ದರಲ್ಲೂ ಇಲ್ಲ. ಹಾಗಾಗಿ, ತಾವು ಇಂತಿಷ್ಟೇ ದಿನ ಕುಳಿತು ಕೆಲಸ ಮಾಡಬೇಕು ಎನ್ನುವುದನ್ನೂ ಎಲ್ಲೂ ಕೂಡ ಹೇಳಿಲ್ಲ. And what are the duties of the pro tem Speaker or Chairman ಎಂದು ಎಲ್ಲೂ ಕೂಡ ಹೇಳದೇ ಇರುವುದರಿಂದ ತಾವು ಅಧಿವೇಶನ ನಡೆಸುತ್ತಿರುವುದು ಕಾನೂನುಬದ್ಧವಾಗಿಯೇ ಇದೆ. ಮಾನ್ಯ ಆಯನೂರು ಮಂಜುನಾಥ್‌ರವರು ಮಾತನಾಡುವಾಗ, ತಮ್ಮ ಮನಸ್ಸಾಕ್ಷಿಯನ್ನು ಕೇಳಿ ಎಂಬ ಮಾತುಗಳನ್ನು ಹೇಳಿದರು. ಈ ವಿಚಾರ ಮನಸ್ಸಾಕ್ಷಿಗೆ ಕೇಳುವಂಥದ್ದಲ್ಲ. ಇವು ನೂರಕ್ಕೆ ನೂರು ಕಾಯಿದೆ-ಕಾನೂನಿನ ವಿಚಾರವಾಗಿವೆ. ಕಾನೂನು ಪ್ರಕಾರವಾಗಿಯೇ ತಾವು ಆ ಪೀಠದಲ್ಲಿ ಕುಳಿತುಕೊಂಡಿದ್ದೀರಿ. Pro tem Speaker or Chairman ಅವರು ಸದಸ್ಯರಿಗೆ ಪ್ರಮಾಣ ವಚನ ನೀಡಿ ನಂತರ ಕೆಳಗೆ ಇಳಿಯಬೇಕು ಎನ್ನುವ ಅಂಶ ಕೂಡ ಎಲ್ಲೂ ಇಲ್ಲ. ಹಾಗಾಗಿ ಈ Pro tem Chairman ಅನ್ನು appoint ಮಾಡಿ ಮಾಡಿದ್ದು ಅದರ ಪ್ರಕಾರ ತಾವು ಆ ಪೀಠದಲ್ಲಿ ಕುಳಿತಿರುವ ಸಂದರ್ಭದಲ್ಲಿ, it is very particular that, till the election of the new Chairman ಎಂದಿದೆ. ಇದು ಕಾನೂನುಬದ್ಧವಾಗಿದೆ. ಸರ್ಕಾರ ಈ ಪ್ರಕ್ರಿಯೆಯಲ್ಲಿ ಎಲ್ಲೂ ಕೂಡ ಲೋಪ ಮಾಡಿಲ್ಲ ಎನ್ನುವ ವಿಚಾರವನ್ನು ಸದನಕ್ಕೆ ತಿಳಿಸಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೃಷ್ಣಭೈರೇಗೌಡ (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಇವತ್ತು ಈ ವಿಚಾರವಾಗಿ ಒಳ್ಳೆಯ ಚರ್ಚೆಯಾಗಿದೆ. ಇದನ್ನು ಸರ್ಕಾರ ಸ್ವಾಗತ ಮಾಡುತ್ತದೆ. ಈ ಕುರಿತು ಏಕೆ ಚರ್ಚೆ ಮಾಡುತ್ತಿದ್ದೀರಿ ಎಂದು ನಾವು ತಕರಾರು ತೆಗೆಯುವುದಿಲ್ಲ ಅಥವಾ ಬೇಸರ ಕೂಡ ಇಲ್ಲ. ಇಂತಹ ಚರ್ಚೆಗಳು ಆಗುತ್ತಿರಬೇಕು. ಇಲ್ಲದಿದ್ದರೆ, ಇವತ್ತಿನ ದಿನಗಳಲ್ಲಿ ನಮ್ಮಂಥ ಅರೆ-ಬರೆ ಜನ, ಅರ್ಥಂಬರ್ಥ ತಿಳಿದವರು ತಮ್ಮ ಇಷ್ಟ ಬಂದ ಹಾಗೆ ನಡೆದುಕೊಂಡು ಹೋಗುತ್ತಿರುತ್ತೇವೆ. ಆದರೆ ಮಾನ್ಯ ಶಾಣಪ್ಪನವರಂತೆ ತಿಳಿದುಕೊಂಡಿರುವ ಜನ ಈಗ ಬಹಳ ಕಡಿಮೆ ಸಂಖ್ಯೆಯಲ್ಲಿ ಇದ್ದಾರೆ. ದಿನದಿಂದ ದಿನಕ್ಕೆ ಎಲ್ಲೋ ಒಂದು ಕಡೆ ನಾವು ಸರಿದ ಹಾಗೆ, ಅಂದರೆ ಟಿಪ್ ಆಗಿ ಎಲ್ಲಿಯವರೆಗೆ ಸರಿದಿರುತ್ತೇವೆಯೋ ನಮಗೆ ಅದು ಗೊತ್ತೇ ಆಗಿರುವುದಿಲ್ಲ. ಈ ರೀತಿ ಸರಿದು ಎಲ್ಲೋ ಹೋಗಿಬಿಟ್ಟಿರುತ್ತೇವೆ. ಇಂತಹ ಹಿನ್ನೆಲೆಯಲ್ಲಿ, ಇವತ್ತಿನ ದಿನಮಾನಗಳಲ್ಲಿ ಇದು ವಾಡಿಕೆಯಂತಾಗಿ ಬಿಟ್ಟಿದೆ. ಆದ್ದರಿಂದ ಇಂತಹ ಚರ್ಚೆಗಳು ಆಗುವುದು ಬಹಳ ಒಳ್ಳೆಯದು. ಈ ಚರ್ಚೆಯನ್ನು ಸರ್ಕಾರ ಸ್ವಾಗತ ಮಾಡುತ್ತದೆ. ಈ ಕುರಿತು ವೈಚಾರಿಕ ಚರ್ಚೆ ಆಗಬೇಕು ಎಂದು ಇದನ್ನು ಸದನದ ಮುಂದೆ ತಂದಿದ್ದಿರೋ ಅಥವಾ ರಾಜಕೀಯ ಉದ್ದೇಶಕ್ಕೋಸ್ಕರ ತಂದಿದ್ದೀರೋ ಎಂದು ಈ ಸಂದರ್ಭದಲ್ಲಿ ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಪ್ರಸ್ತಾಪ ಮಾಡಿರುವ ವಿಚಾರವನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಂಡಿದೆ. ಇದರಲ್ಲಿ ಯಾವುದೂ ಅನುಮಾನ ಇಟ್ಟುಕೊಳ್ಳುವುದು ಬೇಡ. ಇದನ್ನು ನಾವು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಪ್ರಸ್ತುತ ವಿಚಾರದ ಬಗ್ಗೆ ಸ್ಪಷ್ಟತೆ ಇರಬೇಕು, ಇದಕ್ಕೆ ಪರಿಹಾರ ಇರಬೇಕು ಎನ್ನುವ ವಿಚಾರದಲ್ಲೂ ನಮ್ಮದೂ ಸಂಪೂರ್ಣ ಸಹಮತ ಇದೆ. ಆದರೆ ಈಗ ನಾವು ಏನು ಹೇಳಬೇಕು ಎಂದಿದ್ದೇವೆಯೋ ಅದನ್ನು ತಾವುಗಳು ತೆರೆದ ಮನಸ್ಸಿನಿಂದ ಕೇಳಿಸಿಕೊಳ್ಳಬೇಕು, ಅರ್ಥ ಮಾಡಿಕೊಳ್ಳಬೇಕು. Have an open mind ಎಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಈಗ ಇಲ್ಲಿ ಎರಡು ವಿಚಾರ ಚರ್ಚೆಯಾಯಿತು. ಪ್ರಮುಖವಾದ ವಿಚಾರದ ಬಗ್ಗೆ ನಾನು ಆಗಲೇ ಹೇಳಿದ್ದನ್ನು ಪುನರುಚ್ಚಾರ ಮಾಡಬಯಸುತ್ತೇನೆ. ಹಾಲಿ ಪೀಠದಲ್ಲಿ ಕುಳಿತಿರುವವರು ಈ ಸದನವನ್ನು ನಡೆಸುವುದರ ಬಗ್ಗೆ ಯಾವುದೇ ರೀತಿಯ ಪ್ರಶ್ನೆ ಉದ್ಭವಿಸುವುದಿಲ್ಲ. ಏಕೆಂದರೆ ಪೀಠದಲ್ಲಿ ಕುಳಿತ ಹಾಲಿ ಸಭಾಪತಿಯವರು ಎಲ್ಲಾ ರೀತಿಯ ಕಾರ್ಯಕಲಾಪಗಳನ್ನು ನಡೆಸುವ ಹಕ್ಕನ್ನು ಹೊಂದಿದ್ದಾರೆ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇದನ್ನು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ; ಕೃಷ್ಣಭೈರೇಗೌಡ ಹೇಳಿಬಿಟ್ಟರೆ ಆ ಹಕ್ಕು ಬಂದುಬಿಡುತ್ತದೆಯೇ; ನೀವು ಹೇಳಿಬಿಟ್ಟರೆ ಆಗಿಹೋಯಿತೇ ಎಂದು ತಾವು ಪ್ರಶ್ನೆ ಮಾಡಬಹುದು. ಆದರೆ ನಾನು ಆ ರೀತಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹೇಳುವುದಕ್ಕೆ ಹೋಗುತ್ತಿಲ್ಲ. ಯಾವ ಆಧಾರದ ಮೇಲೆ ನಾನು ಈ conclusion ಗೆ ಬಂದಿದ್ದೇನೆ ಎಂಬುದನ್ನು ತಿಳಿಸುತ್ತೇನೆ.

(ಮುಂದು . . . )

101/6-7-2018/ಬಿಕೆಪಿ-ವಿಕೆ/12-00

**ಶ್ರೀ ಕೃಷ್ಣ ಬೈರೇಗೌಡ**(ಮುಂದು. . )

ಈಗ ಸಂವಿಧಾನದಲ್ಲಿ 184 ನಿಯಮ ಇದೆ. ಇದರಲ್ಲಿ ಏನು ಹೇಳಲಾಗುತ್ತಿದೆ ಎಂದರೆ

**Article 184 in the Constitution of India**

*"184. Power of the Deputy Chairman or other person to perform the duties of the office of, or to act as, Chairman.*

1. *While the office of Chairman is vacant, the duties of the office shall be performed by the Deputy Chairman or, if the office of Deputy Chairman is also vacant, by such member of the council as the Governor may appoint for the purpose."*

ಹೀಗಾಗಿ, ಈಗ ತಮ್ಮನ್ನು ಯಾರು ನೇಮಕ ಮಾಡಿದ್ದಾರೆ? ರಾಜ್ಯಪಾಲರು ನೇಮಕ ಮಾಡಿದ್ದು, ಅದಕ್ಕೆ ಪುರಾವೆ ಬೇಕಿದ್ದರೆ ಇಲ್ಲಿಯೇ ಇದೆ. ಮಾನ್ಯ ರಾಜ್ಯಪಾಲರು ತಮ್ಮನ್ನು ನೇಮಕ ಮಾಡುವಾಗ ಏನು ಆದೇಶ ಮಾಡಿದ್ದಾರೆಂದರೆ,

*"In exercise of the powers conferred by clause 1 of Article 184 of the Constitution of India, I Vajubhaivala, Governor of Karnataka, do hereby appoint Sri Basavaraj Horatti, the member of the Legislative Council to perform the duties of the Office of the Chairman or of the Legislative Council with effect from 22-06-2018, until a Chairman is duly elected by the House."*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Has the Governor used out some powers that he does not have? Under Article 184(1) the Governor has every power to appoint a member for the purpose. For the benefit of the House I can repeat it once again.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ,

**ಶ್ರೀ ಕೃಷ್ಣ ಬೈರೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಮಾನ್ಯ ಸದಸ್ಯರಾದ ಡಾ॥ ತೇಜಸ್ವಿನಿ ಗೌಡರವರು ಕೇಳಿಸಿಕೊಳ್ಳಬೇಕು. You will get opportunity... Yes of course... ಸದಸ್ಯರುಗಳಿಗೆ ಮಾತನಾಡಲಿಕ್ಕೆ ಎಲ್ಲಾ ಅಧಿಕಾರ ಮತ್ತು ಹಕ್ಕು ಇದೆ. ತಮ್ಮಲ್ಲಿ ನಾನು ಇಷ್ಟೇ ವಿನಂತಿ ಮಾಡಲಿಕ್ಕೆ ಬಯಸುತ್ತೇನೆ. ನಾನು ಹೇಳುವಾಗ ಸದಸ್ಯರುಗಳು with an open mind ಕೇಳಿಸಿಕೊಳ್ಳಬೇಕು. If somewhere I am wrong in my judgement or in my interpretation, you are welcome to correct me. No matter that, ನಾನು ಹೇಳಿದ ಕೂಡಲೇ ಎಲ್ಲವೂ ಆಗಿ ಹೋಗುತ್ತದೆ ಎಂದೇನೂ ಇಲ್ಲ. ನನಗೆ ತಿಳಿದಿರುವ ಇತಿಮಿತಿಯಲ್ಲಿ ನಾನು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ಕೇಳಿಸಿಕೊಳ್ಳಬೇಕು. ಈ ಬಗ್ಗೆ ಅರ್ಥ ಮಾಡಿಕೊಳ್ಳೋಣ. We will find out. ಸರ್ಕಾರ ಈ ವಿಚಾರದಲ್ಲಿ ವಿತಂಡವಾದ ವಾದವನ್ನು ಮಾಡಬೇಕೆನ್ನುವ ನಿಲುವು ಇಲ್ಲ ಮತ್ತು ಈ ವಿಚಾರವನ್ನು ಬೆಳೆಸಬೇಕೆನ್ನುವುದು ನಮ್ಮ ನಿಲುವು ಆಗಿರುವುದಿಲ್ಲ. ಈ ರೀತಿಯಲ್ಲಿ ಎಲ್ಲಿಯೋ ಒಂದು ಕಡೆ ಗೊಂದಲವನ್ನಿಟ್ಟುಕೊಂಡು ಸದನವನ್ನು ನಡೆಸಬೇಕೆನ್ನುವುದು ಯಾರಿಗೂ ಶೋಭೆಯನ್ನು ತರುವಂತಹ ವಿಚಾರವೂ ಅಲ್ಲ. So, we are open.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರು ಈ ಸಂಬಂಧ ಕಳುಹಿಸಿರುವ ಆದೇಶದಲ್ಲಿ Pro tem Chairman ಎಂದು ಇದೆಯೋ Chairman ಎಂದು ಇದೆಯೋ ಅದನ್ನು ಹೇಳಬೇಕು.

(ಗೊಂದಲ)

**ಶ್ರೀ ಕೃಷ್ಣ ಬೈರೇಗೌಡ:–** ಈ ವಿಚಾರವಾಗಿ ಸಂವಿಧಾನ ಏನು ಹೇಳುತ್ತದೆ ಎಂದರೆ *"if the office of Deputy Chairman is also vacant..."*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ. . .

**ಶ್ರೀ ಕೃಷ್ಣ ಬೈರೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರಾದ ಶ್ರೀಮಾನ್ ಕೆ.ಬಿ.ಶಾಣಪ್ಪನವರ ವಿಚಾರಕ್ಕೆ ಬರುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀಯುತ ಕೆ.ಬಿ.ಶಾಣಪ್ಪನವರು ಏನು ಕೇಳುತ್ತಿದ್ದಾರೆಂದರೆ ಗೌರವಾನ್ವಿತ ರಾಜ್ಯಪಾಲರ ಆದೇಶದಲ್ಲಿ Pro tem Chairman ಎಂದು ಇದೆಯೋ ಅಥವಾ Chairman ಎಂದು ಇದೆಯೋ ಎನ್ನುವುದನ್ನು ಹೇಳಬೇಕೆಂದು ಕೇಳುತ್ತಿದ್ದಾರೆ. ಆ ವಿಚಾರವಾಗಿ ಮಾನ್ಯ ಸಚಿವರು clear ಮಾಡಬೇಕು.

**ಶ್ರೀ ಕೃಷ್ಣ ಬೈರೇಗೌಡ:–** ಮಾನ್ಯ ಸಭಾಪತಿಯವರೇ, ಆ ವಿಚಾರವಾಗಿ clear ಮಾಡುತ್ತೇನೆ. ನನಗೆ ಒಂದು ನಿಮಿಷ ಅವಕಾಶ ಕೊಡಿ. ತಮ್ಮ ಪ್ರಶ್ನೆ ಪ್ರಸ್ತುತ ಇದೆ. ಆ ವಿಚಾರಕ್ಕೂ ಬರುತ್ತೇನೆ. ನಿಮ್ಮ ಪ್ರಶ್ನೆಗೆ ಸಂಬಂಧಪಟ್ಟಂತೆ ಒಂದು ಪೀಠಿಕೆ ಹಾಕುವುದರ ಮೂಲಕ ಹೇಳುತ್ತೇನೆ. ಸಂವಿಧಾನದಲ್ಲಿ ಏನು ಹೇಳಲಾಗುತ್ತದೆ ಎಂದರೆ *"..by such member of the council as the Governor may appoint for the purpose."* ಹೀಗಾಗಿ Pro tem ಎನ್ನುವ ಪದ ಅಲ್ಲಿಯೂ ಏನಿಲ್ಲ. ತಮ್ಮ ವಿಚಾರಕ್ಕೆ ಸಂಬಂಧಪಟ್ಟಂತೆ ಪೂರಕವಾಗಿ ಹೇಳುವುದಾದರೆ. . .

**Sri K.B.SHANAPPA:-** When the offices of both the Chairman and the Deputy Chairman fall vacant and when the new House comes it is Pro tem only.

**ಶ್ರೀ ಕೃಷ್ಣ ಬೈರೇಗೌಡ:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲಿಕ್ಕೆ ಒಂದು ನಿಮಿಷ ಅವಕಾಶ ಕೊಡಿ.

**Sri K.B.SHANAPPA:-** Why you are blaming the Governor. We are the people who appoint the Chairman.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ವಿಚಾರವಾಗಿ ಓದುತ್ತಾ, *..appoint for the purpose..* ಎಂದು ಓದಿದ್ದು, ಅಲ್ಲಿಂದ ಮುಂದಕ್ಕೆ ಏನು ವಿಷಯ ಇದೆ ಎನ್ನುವುದನ್ನು ಮಾನ್ಯ ಸಚಿವರು ಓದಬೇಕು. *..The*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*person so appointed is known as the Speaker pro tem...* ತಾವು ಅಲ್ಲಿಯವರೆಗೆ ಓದಿ, ಮುಂದಿನ ವಾಕ್ಯವನ್ನು ನಿಲ್ಲಿಸಿದ್ದೀರಿ. ಮುಂದಿನ ವಾಕ್ಯವನ್ನು ಸಹ ತಾವು ಓದಬೇಕು. ಓದುವುದರ ಮೂಲಕ ಸದನದಲ್ಲಿ ಬೆಳಕನ್ನು ಚೆಲ್ಲುವುದಕ್ಕೆ ಪ್ರಯತ್ನ ಮಾಡಿ. ಅರ್ಧಕ್ಕೆ ನಿಲ್ಲಿಸಬಾರದು. ಅದರ ಮುಂದಿನ ವಾಕ್ಯದಲ್ಲಿ *..The person so appointed is known as the Speaker pro tem..* ಎನ್ನುವುದನ್ನು ಹೇಳಿದ್ದಾರೆ. ನೋಡಿ, ಅದನ್ನು ಯಾವ ಉದ್ದೇಶಕ್ಕೆಂದು ಸಹ ಹೇಳುತ್ತಾರೆ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ನನಗೆ ನನ್ನ ಉತ್ತರವನ್ನು ಮುಕ್ತಾಯ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಆಯಿತು, ಮಾನ್ಯ ಸದಸ್ಯರ ಸಲಹೆಯನ್ನು ನಾನು ತೆಗೆದುಕೊಂಡಿದ್ದೇನೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನಗೆ ಸ್ವಲ್ಪ ಸಮಯ ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

(ಗೊಂದಲ)

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನ್ಯ ಮಾನ್ಯ ಸದಸ್ಯರ ಸಲಹೆಯನ್ನು ತೆಗೆದುಕೊಂಡಿದ್ದೇನೆ.

**Sri AYANUR MANJUNATH:-** The Speaker pro tem is appointed to administer oath/affirmation to the newly elected members of Lok Sabha.... ಈ ವಿಚಾರವನ್ನು ತಾವು ಇಟ್ಟುಕೊಂಡಿರುವ ಪುಸ್ತಕದಲ್ಲಿಯೇ ಓದುತ್ತಿದ್ದೇನೆ. ಸಚಿವರು ಸದನಕ್ಕೆ ಈ ವಿಚಾರವಾಗಿ ಬೆಳಕನ್ನು ಚೆಲ್ಲುವಾಗ ಅರೆಬರೆ ಬೆಳಕು ಚೆಲ್ಲಬೇಡವೆಂದು ಹೇಳುತ್ತಿದ್ದೇನೆ. ಮಾನ್ಯ ಸಚಿವರು ಸಂಸದೀಯ ಸಚಿವರಿದ್ದು, ಸಂಸದೀಯ ನಡವಳಿಕೆಗಳ ಬಗ್ಗೆ ಬಹಳ ದೊಡ್ಡ track ಅನ್ನು set ಮಾಡಬೇಕಾದವರಾಗಿರುತ್ತಾರೆ. ಆದ್ದರಿಂದ, ಅರೆಬರೆ ಓದಬಾರದೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದಂತಹ ವಿಚಾರಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಕೊಡುತ್ತೇನೆ. ಎರಡನೆಯ ಬಾರಿ ಸರ್ಕಾರದ ಉದ್ದೇಶಗಳ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅನುಮಾನವನ್ನು ಮಾನ್ಯ ಸದಸ್ಯರು ಹಾಕುತ್ತಿದ್ದಾರೆ. ಅದನ್ನು ನಾನು outright ತಿರಸ್ಕಾರ ಮಾಡುತ್ತಿದ್ದೇನೆ. ಈ ಸರ್ಕಾರದ ಪರವಾಗಿ ಅರೆಬರೆ ಉತ್ತರವನ್ನು ಕೊಡುವಂತಹ ಉದ್ಧೇಶ ನಮಗಿಲ್ಲ. ಅಂತಹ ಅವಶ್ಯಕತೆಯೂ ಸಹ ನಮಗೆ ಇರುವುದಿಲ್ಲ. That has been clear. ಏತಕ್ಕೆ ನಾವು ಅರೆಬರೆ ಉತ್ತರವನ್ನು ಕೊಡಬೇಕು, Mislead ಮಾಡುವಂತಹ ಅವಶ್ಯಕತೆ ನಮಗೆ ಏನಿದೆ? ಅಂತಹ ಅವಶ್ಯಕತೆ ಇಲ್ಲದೇ ಇರುವಾಗ ಇಂತಹ aspersions ನಮ್ಮ ಮೇಲೆ ಹಾಕಬಾರದು. ನಾನು ಇದನ್ನು ತಿರಸ್ಕಾರ ಮಾಡುತ್ತೇನೆ. I will come back to your question. Kindly allow me to talk.

(ಗೊಂದಲ)

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾನು ವಾಕ್ಯವನ್ನು ಪೂರ್ಣವಾಗಿ ಓದಬೇಕೆಂದು ಹೇಳುತ್ತಿದ್ದೇನೆ.

**ಸಭಾಪತಿಯವರು:-** ನಿಮಗೆ ಈಗಾಗಲೇ ಎಲ್ಲರಿಗೂ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ. ದಯಮಾಡಿ, ಇನ್ನೊಬ್ಬರು ಮಾತನಾಡುವಾಗ ನೀವುಗಳು ಮಾತನಾಡಬೇಡಿ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸದಸ್ಯರು ಮಾತನಾಡುವಾಗ ನಾನು ಸುಮ್ಮನೆ ಕುಳಿತುಕೊಂಡಿದ್ದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಕೆ.ಬಿ.ಶಾಣಪ್ಪನವರು ನಾನು ಮಾತನಾಡುತ್ತಿರುವಂತಹ ಸಂದರ್ಭದಲ್ಲಿ ಒಂದು ಪ್ರಶ್ನೆಯನ್ನು ಮಾಡಿದರು. ಇದರಲ್ಲಿ ಏನು ಹೇಳಲಾಗಿದೆ ಎಂದು ನಾನು ಓದಿದರೆ ಮತ್ತೆ ಮತ್ತೆ ಓದಿದ್ದನ್ನೇ ಮತ್ತೆ ಮತ್ತೆ ಓದುತ್ತಿದ್ದೀರಿ ಎಂದು ತಾವುಗಳು ಬೇಜಾರು ಮಾಡಿಕೊಳ್ಳಬೇಡಿ. But, I am forced to read the same thing to answer your question. Sir, kindly...

**Sri K.B.SHANAPPA:-** When both the Chairman and the Deputy Chairman are absent...

**Sri KRISHNA BYRE GOWDA:-** No Sir, the Constitution does not say so. I will read for your benefit and kindly hear me. ಇದರಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಮಗೆ ಮುಚ್ಚುಮರೆ ಏನೂ ಇಲ್ಲದೇ ಇರುವಾಗ we are open. The Government is open.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಚೇರ್ಮನ್‌ರವರನ್ನು ನೇಮಕ ಮಾಡುವಂತಹ ಅಧಿಕಾರ ರಾಜ್ಯಪಾಲರಿಗೆ ಇದೆಯೋ ಅಥವಾ ಈ ಮನೆಗೆ ಇದೆಯೋ ಎನ್ನುವುದನ್ನು ಮಾತ್ರ ಹೇಳಿ, ಸಾಕು.

**ಶ್ರೀ ಎಸ್.ಎಲ್. ಬೋಜೇಗೌಡ:-** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ಸಂಸದೀಯ ವ್ಯವಹಾರಗಳ ಸಚಿವರು ಹೇಳುತ್ತಿದ್ದಾರೆ, ಅವರಿಗೆ ಹೇಳಲಿಕ್ಕೆ ಅವಕಾಶ ಕೊಡಬೇಕು.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ. ಅವರು ಮಾತನಾಡಿದ ಮೇಲೆ ನೀವುಗಳು ಮಾತನಾಡಿ. ರಾತ್ರಿ 10.00 ಗಂಟೆಯಾದರೂ ಪರವಾಗಿಲ್ಲ, ನಿಮಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡುತ್ತೇನೆ. ಎಲ್ಲರಿಗೂ ಅವಕಾಶ ಕೊಡುತ್ತೇನೆ. ಆದ್ದರಿಂದ, ಸಚಿವರಿಗೆ ಮಾತನಾಡಲಿಕ್ಕೆ ಬಿಡಿ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:-** ಶ್ರೀಯುತ ಶಾಣಪ್ಪನವರೇ, ನೀವು ಎದ್ದುನಿಂತುಕೊಂಡು ಎಲ್ಲವನ್ನು ಹೇಳಿಬಿಡಿ. ಆದರೆ, ಅವರು ಮಾತನಾಡುವಾಗ ಈ ರೀತಿ ಮಧ್ಯ ಪ್ರವೇಶ ಮಾಡಿ ಮಾತನಾಡಿದರೆ ಹೇಗೆ? ಅವರಿಗೆ ಮಾತನಾಡಲಿಕ್ಕೆ ಬಿಡಿ ಅಥವಾ ನೀವು ಮಾತನಾಡಿ.

**ಶ್ರೀ ಕೆ.ಬಿ.ಶಾಣಪ್ಪ:-** ಈಗ ಈ ಚರ್ಚೆ ಮುಗಿದಿದೆ. ಯಾವಾಗ ಹೊಸ ಚೇರ್ಮನ್ ಮಾಡುತ್ತೀರಿ ಎನ್ನುವುದನ್ನಾದರೂ ಹೇಳಬೇಕು. ಹೊಸ ಚೇರ್ಮನ್ ಮಾಡುತ್ತೇವೆ ಎಂದಾದರೂ ಹೇಳಬೇಕು ಅಥವಾ ನಿಮ್ಮನ್ನೇ ಮುಂದುವರಿಸುತ್ತೇವೆ ಎಂದಾದರೂ ಹೇಳಬೇಕಲ್ಲವೇ? ಇಲ್ಲದಿದ್ದರೆ ಹೊಸ ಚೇರ್ಮನ್ ಮಾಡಲಿಕ್ಕೆ ವಿಚಾರ ಮಾಡುತ್ತಿದ್ದಾರೆಂದು ಅನಿಸುವುದಿಲ್ಲವೇ?

**ಸಭಾಪತಿಯವರು:-** ಈ ವಿಚಾರದಲ್ಲಿ ನಾನು ಬೇಸರ ಮಾಡಿಕೊಳ್ಳಬೇಕೇ ವಿನಃ ನೀವು ಏತಕ್ಕೆ ಬೇಸರ ಮಾಡಿಕೊಳ್ಳುತ್ತೀರಿ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri K.B.SHANAPPA:-** You have allowed us to speak about that Chair only. If somebody was there, you would have not allowed.

**ಸಭಾಪತಿಯವರು:-** ಈ ಬಗ್ಗೆ ಚರ್ಚೆಯಾಗಬೇಕೆಂದು ನಾನು ಸಹ ಹೇಳುತ್ತೇನೆ. ಎಲ್ಲರಿಗೂ ತಿಳಿಯಲೆಂದು ಹೇಳುತ್ತಿದ್ದೇನೆ. ಈ ಬಗ್ಗೆ ಮಾತನಾಡಬೇಕು. ನೀವು ಹೀಗೆಯೇ ಮಾತನಾಡಬೇಕೆಂದು ಸಚಿವರಿಗೆ ಹೇಳಬಾರದು.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಗೌರವಾನ್ವಿತ ಸದಸ್ಯರಲ್ಲಿ ಇಷ್ಟೇ ಮನವಿ ಮಾಡುತ್ತೇನೆ. ಮಾನ್ಯ ಸದಸ್ಯರು ನಾನು ಹೇಳುವುದನ್ನು ಕೇಳಬೇಕು. ನಾನು ಇನ್ನು ಉತ್ತರವನ್ನೇ ಮುಗಿಸಿಲ್ಲ. ಮಾನ್ಯ ಸದಸ್ಯರು ಅಂತಿಮವಾಗಿ ಒಂದು word ಹೇಳಿಬಿಡಿ ಸಾಕು ಎಂದು ಹೇಳುತ್ತಿದ್ದಾರೆ. ಇಷ್ಟೆಲ್ಲಾ ಚರ್ಚೆಯಾದ ಮೇಲೆ ಸರ್ಕಾರದ ಪರವಾಗಿ ಸ್ಪಷ್ಟೀಕರಣವನ್ನಾದರೂ ಕೊಡಬೇಕಲ್ಲವೇ? ಕಲಿತಂತಹ ಮಾನ್ಯ ಸದಸ್ಯರು ಹಿರಿಯರಿದ್ದಾರೆ. ಅವರು ನಮಗೆ ಈ ವಿಚಾರದಲ್ಲಿ ಕಲಿಸಬೇಕು. ನ್ಯಾಯಾಧೀಶರು ಒಂದೇ ವರ್ಡ್‌ನಲ್ಲಿ ಆರ್ಡರ್ ಮಾಡುತ್ತಾರೆಯೇ? Justification ಬರೆಯುವುದಿಲ್ಲವೇ?

**ಶ್ರೀ ಕೆ.ಬಿ.ಶಾಣಪ್ಪ:-** ಜಡ್ಜ್ ಮೊದಲಿನಿಂದ ಕುಳಿತ್ತಿದ್ದರೆ ಅವನಿಗೆ ಗೊತ್ತಾಗುತ್ತದೆ. ನೀವು ಈಗ ನಡುವೆ ಬಂದಿದ್ದು, ಏನು ಆರ್ಡರ್ ಮಾಡುತ್ತೀರಿ? ಮಾನ್ಯ ಮಂತ್ರಿಗಳು ಮೊದಲಿನಿಂದ ಕುಳಿತಿದ್ದರೆ ಎಲ್ಲವೂ ಗೊತ್ತಾಗುತ್ತಿತ್ತು. You have come in between the discussion.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರ ಈಗ ಉಪಸ್ಥಿತ ಇದೆ. ಸರ್ಕಾರ, ಮಾನ್ಯ ಎಲ್ಲಾ ಸದಸ್ಯರುಗಳ ವಾದಗಳನ್ನು ಕೇಳಿಸಿಕೊಂಡಿದೆ. ನಾನು ಉತ್ತರ ಮುಗಿಸುವಿಗಾದರೂ ಮಾನ್ಯ ಸದಸ್ಯರುಗಳು ತಾಳ್ಮೆಯಿಂದ ಕೇಳಿಸಿಕೊಳ್ಳಬೇಕು. ಕೊನೆಗೆ ನನ್ನ ಉತ್ತರ ಸಮಾಧಾನವಾಗಲಿಲ್ಲವೆಂದರೆ ಆಗ ಏನು ಬೇಕೋ ತಮ್ಮ ನಿಲುವನ್ನು ತೆಗೆದುಕೊಳ್ಳಿ. ಅವರು ಕೇಳಿದ ಪ್ರಶ್ನೆಗೆ ಅಂದರೆ ಅವರು ಹೆಸರನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಏಕೆಂದರೆ, ಅವರ ಹೆಸರನ್ನು ಹೇಳಿದರೆ, ಅವರು ಮತ್ತೆ ಎದ್ದು ನಿಲ್ಲುತ್ತಾರೆ. ನಾನು ಇಷ್ಟೆ ಹೇಳಲಿಕ್ಕೆ ಬಯಸುತ್ತೇನೆ. ಒಂದು ಪ್ರಶ್ನೆ ಉದ್ಭವಿಸಿದೆ. ಅಂದರೆ ಅವರಿಬ್ಬರ ಅನುಪಸ್ಥಿತಿಯಲ್ಲಿನ ಅಂದರೆ when they are absent ಎನ್ನುವಂತ ಉಪ ಪ್ರಶ್ನೆಯನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ. ಇಲ್ಲ, ಸಂವಿಧಾನದಲ್ಲಿ it does not

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

refer to absence. Constitution clearly refers to vacancy. And for the benefit of the House I am forced to read it again.

ಮುಂದು

(102) 06.07.2018 12.10 ಎಸ್‌ವಿ-ಬಿಎನ್‌ಎಸ್

**Sri KRISHNA BYREGOWDA (MINISTER FOR PARLIAMENTARY AFFAIRS AND LEGISLATION DEPARTMENT)** :- For the benefit of the House, I am forced to read again; "…..*if the office of Deputy Chairman is also vacant* …" not absent, I would like to submit that these are not my words. 'Vacancy' is different from 'absence'. 'Absence' is absence and 'vacancy' is vacancy. I hope everybody will agree with me on this. With due respect, the Hon'ble Members have every right to disagree with me. This is to the best of my knowledge how I interpret the words and as advised by legal experts. This is not a conclusion which I have come to on my own. ಇವತ್ತು vacant ಇದೆ. ಅಂತಹ ಸಂದರ್ಭದಲ್ಲಿ ಅವರನ್ನು 'Pro tem' ಎಂದು ನಾವು ವಾಡಿಕೆಯಲ್ಲಿ ಕರೆದುಕೊಂಡಿದ್ದೇವೆ. ಆದರೆ, "… such member of the council as the Governor may appoint for the purpose." ಇವತ್ತು ಇದೇ exact provision ಕೆಳಗೆ ರಾಜ್ಯಪಾಲರು ತಮ್ಮನ್ನು ಹಂಗಾಮಿ ಸಭಾಪತಿಯಾಗಿ ನೇಮಕ ಮಾಡಿ ತಾವು ಕೆಲಸ ಮಾಡುತ್ತಿದ್ದೀರಿ. It is perfectly in consonance and in accordance with law. Let this argument be rested and let us not prolong this argument ಎಂದು ನಾನು ಎಲ್ಲರಲ್ಲಿಯೂ ಮನವಿ ಮಾಡುತ್ತೇನೆ. ಇದು ಮಧ್ಯದಲ್ಲಿಯೇ ತಾವು ಕೇಳಿದ್ದರಿಂದ ಉದ್ಭವಿಸಿದಂತಹ ಪ್ರಶ್ನೆ. ಆದರೆ ವಿಚಾರ ಇರುವುದು ಎಷ್ಟು ದಿನ ಹಂಗಾಮಿಯಾಗಿ ತಾವು ನಡೆಸಬಹುದು ಎಂದು. ತಮ್ಮ ವಾದದಲ್ಲಿ ಸ್ವಲ್ಪಮಟ್ಟಿಗೆ ಪುಷ್ಟಿ ಇದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಹಂಗಾಮಿ ಸಭಾಪತಿಯಾಗಿರುವವರ ಕಾರ್ಯಕಲಾಪಗಳ ಮಿತಿಯೇನು ಎಂಬ ಪ್ರಶ್ನೆಯೂ ಸಹ ಉದ್ಭವಿಸಿದೆ. ಇದನ್ನು ವಿವರಿಸುವ ಸಲುವಾಗಿ ನಾನು ಸುಭಾಷ್ ಸಿ. ಕಶ್ಯಪ್ ಅವರ ವಿಶ್ಲೇಷಣೆಯ ಸಹಾಯವನ್ನು

ಪಡೆದುಕೊಳ್ಳುತ್ತಿದ್ದೇನೆ. ಕಶ್ಯಪ್ ಅವರು ತಮ್ಮ ವಿಶ್ಲೇಷಣೆಯ ಪುಟ 64ರ 14.1 ರಲ್ಲಿ Speaker Pro tem ಕುರಿತು ಹೀಗೆ ಹೇಳುತ್ತಾರೆ:

> *"14.1 When the offices of both the Speaker and the Deputy Speaker are vacant, the duties of the office of the Speaker are performed by such Member of the House as the President may appoint for the purpose. The person so appointed is known as Speaker pro tem and he continues in office till the Speaker is elected. The name of a member to be appointed as Speaker pro tem is suggested by the Prime Minister."*

When the offices of both the Speaker and the Deputy Speaker are vacant, the duties of the office of the Speaker are performed by such Member of the House as the President may appoint for the purpose. ಅಲ್ಲಿಯವರೆವಿಗೂ ಎಲ್ಲರೂ ಒಪ್ಪುತ್ತೀರೆಂದು ಭಾವಿಸುತ್ತೇನೆ. The person so appointed **is known as** Speaker pro tem. ಇದು ವಾಡಿಕೆಯಲ್ಲಿ ಉದ್ಭವವಾಗಿರುವಂಥದ್ದು. By convention, we call them 'Speaker Pro-Tem'.

**Sri K.B.SHANAPPA (NOMINATED MEMBER)**:- What do you mean by "Pro tem"? "Pro tem" means temporary or for time being.

**ಶ್ರೀ ಕೃಷ್ಣ ಬೈರೇಗೌಡ**:- ಮಾನ್ಯ ಸಭಾಪತಿಯವರೆ, ಇರಲಿ. Everybody agrees on that. There is no dispute that it is a temporary arrangement. I am coming to that question Sir. In the mean time, I have another question. Please listen. Otherwise, whole discussion from the morning is a waste. Do you mean to say ...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಶಾಣಪ್ಪನವರೇ, ನಾನು ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುತ್ತೇನೆ. ಮಾನ್ಯ ಸಚಿವರು ಉತ್ತರಿಸಿದ ನಂತರ ಮತ್ತೊಮ್ಮೆ ತಮಗೆ ಮಾತನಾಡಲು ಅವಕಾಶವನ್ನು ನೀಡಲಾಗುವುದು.

**Sri K.B.SHANAPPA**:- The House is being misled. (interruptions). ಮಾನ್ಯ ಸಭಾಪತಿಯವರೆ, ತಾವು ಈಗ ಸಮಯದ ಕೂಸು. ಯಾವ circumstance ನಲ್ಲಿ ತಮ್ಮನ್ನು ....

**ಸಭಾಪತಿಯವರು:-** ಮಾನ್ಯ ಶಾಣಪ್ಪನವರೇ, ಅವರಿಗೆ ಹೇಳುವ ಅಧಿಕಾರವಿದೆಯಲ್ಲವೆ? ಅವರು ತಪ್ಪು ಹೇಳಿದರೆ ಕಡತದಿಂದ ತೆಗೆಯುವಂತಹ ಅಧಿಕಾರವಿದೆ. ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ ಎಂದು ನೀವು ಏಕೆ ತಿಳಿದುಕೊಳ್ಳುತ್ತೀರಿ? ಅವರು ಪೂರ್ತಿ ಹೇಳಿದ ನಂತರ ಅವರನ್ನು ಕೇಳಿ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಈಗ ನಾನು ಮತ್ತೊಮ್ಮೆ ಮನವಿ ಮಾಡುತ್ತೇನೆ. ಒಂದು ಪ್ರಶ್ನೆ ಉದ್ಭವಿಸಿದ ಮೇಲೆ ಅದು ತಾರ್ಕಿಕ ಅಂತ್ಯವನ್ನು ಕಾಣಬೇಕು. ಬೆಳಗ್ಗೆಯಿಂದ ಇಷ್ಟು ಚರ್ಚೆ ಮಾಡಿದ್ದಾರೆ. ಆದರೆ ಉತ್ತರ ಕೇಳುವುದಕ್ಕೆ ಏಕೆ ಅವರಿಗೆ ತಾಳ್ಮೆ ಇಲ್ಲ. ನಾನು ತಪ್ಪು ಮಾಡಿದರೆ ಆಮೇಲೆ ನಿಂತು ಅದು ತಪ್ಪು ಎಂದು ಹೇಳಲಿ. When I am saying that we have an open mind on this, why time and again doubts are being raised. ಹಾಗಾದರೆ ಅವರು ಬೆಳಗ್ಗೆಯಿಂದ ಮಾತನಾಡಿದಾಗ ನಾವು ತಾಳ್ಮೆಯಿಂದ ಕೇಳಿದ್ದು ತಪ್ಪೇ? We could have raised operational and procedural objections from morning. We have heard them patiently. All that I am seeking is their indulgence to hear me. Is that a big ask? Kindly, ಪ್ರಶ್ನೆ ಉದ್ಭವಿಸಿದ ನಂತರ ಅದು ಸ್ಪಷ್ಟವಾಗಬೇಕೆಂದು ನನಗೆ ತಿಳಿದಿರುವ ವಿಚಾರವನ್ನು ನನ್ನ ಇತಿ-ಮಿತಿಯಲ್ಲಿ ಹೇಳಲು ಪ್ರಯತ್ನ ಪಡುತ್ತಿದ್ದೇನೆ. "Pro tem" is a temporary arrangement ಎಂಬುದು ನಿಜ. ಅದನ್ನು ಇಲ್ಲ ಎಂದು ಯಾರು ಹೇಳಿದರು? Are we disagreeing? Whether the Government has taken a view that Pro tem Chairman shall continue forever? By what measure are they

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

inferring such things. I will come to the reply Sir. Allow me to come to the reply. I will answer them. ಕೊನೆಯ ವಾಕ್ಯವನ್ನು ಕೊನೆಯಲ್ಲಿಯೇ ಹೇಳಬೇಕು. ಕೊನೆಯ ವಾಕ್ಯವನ್ನು ಮೊದಲಿಗೆ ಹೇಳಲಾಗುವುದಿಲ್ಲ. But, allow me. Because, so many issues have been raised. The Hon'ble Member is a knowledgeable person, but there are Members like me who are not so knowledgeable. We should also learn. This is an opportunity for everybody to learn. So, exercise patience. It is a good debate. I welcome the debate.

**Sri K.B.SHANAPPA**:- I am learning since last 30 years. (interruption) I am a student of this House.

**Sri KRISHNA BYREGOWDA** :- No, what I am saying is that we want to learn from people like the Hon'ble Member. ನನ್ನಂತಹವರು ಮಾನ್ಯ ಶಾಣಪ್ಪರವರಂತಹ ಹಿರಿಯರಿಂದ ಕಲಿಯಲು ಬಯಸುತ್ತೇವೆ. ಬೇರೆಯ ಸದಸ್ಯರಿಗೂ ಇದರಿಂದ ಒಂದು ಕಲಿಕೆಯಾಗುತ್ತಿದೆ. ಚರ್ಚೆಯಾಗಲಿ ಎಂದು ನಾನು ಹೇಳುತ್ತಿದ್ದೇನೆ. I did not refer to the Hon'ble Member. ಇತರ ಸದಸ್ಯರೂ ಸಹ ಮಾನ್ಯ ಶಾಣಪ್ಪರವರಿಂದ ಕಲಿಯುತ್ತಿದ್ದಾರೆ. I think that many Members will agree for this. Let a good debate happen in good spirit.

**(ಗೊಂದಲ)**

ಮಾನ್ಯ ಶಾಣಪ್ಪನವರು ಹೇಗೆ ಕಲಿಸುತ್ತಿದ್ದಾರೆಯೋ ಹಾಗೆ ನಾವು ಕಲಿಯುತ್ತಿದ್ದೇವೆ. ಮಾನ್ಯ ಸಭಾಪತಿಯವರೇ, ನಾನು ಮೊದಲ ಬಾರಿಗೆ ಉಪ ಚುನಾವಣೆಗೆ ನಿಂತಾಗ ಬಹುತೇಕ ನಾನು ಏಕಾಂಗಿಯಾಗಿದ್ದೆನೆಂಬ ವಿಷಯ ತಮಗೆ ತಿಳಿದಿದೆ. ಆಗ ನಮ್ಮದೊಂದು ಪಕ್ಷ ಇತ್ತು. ತಾವು ಆಗ ನನ್ನ ಜೊತೆಯಲ್ಲಿ ಇದ್ದಿರಿ. ಆದರೆ ಚುನಾವಣೆಗೆ ನನ್ನ ಪರವಾಗಿ ಬಂದು ಪ್ರಚಾರ ಮಾಡಿಸಿ, ನನ್ನ ಕ್ಷೇತ್ರದಲ್ಲಿ ಅಡ್ಡಾಡಿ ನನಗೆ ಗೆಲುವು ಸಿಗುವಂತೆ ಮಾಡಿದವರು ಮಾನ್ಯ ಶಾಣಪ್ಪನವರು. ಚಿಕ್ಕಬಳ್ಳಾಪುರದಲ್ಲಿ ನಡೆದ ಒಂದು ಸಂತಾಪ ಸೂಚನಾ ಸಭೆಗೆ ತಾವು ಹಾಗೂ ಮಾನ್ಯ ಶಾಣಪ್ಪನವರು ಬಂದಿದ್ದಿರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸಚಿವರೆ, ಅವರು ಅವಾಗಲೂ ಹೀಗೆಯೇ ಇದ್ದಿದ್ದರೆ ಈ ಪ್ರಶ್ನೆ ಉದ್ಭವವಾಗುತ್ತಿರಲಿಲ್ಲ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಅವರು ಹೀಗಾಗಬೇಕಾದರೆ ಅದರಲ್ಲಿ ನಮ್ಮೆಲ್ಲರದ್ದೂ ತಪ್ಪಿದೆ. ನಾನು ಯುವಕ. ನಾನು ಅವಸರಿಸಬೇಕು. ಆದರೆ ಅವರು ಅವಸರ ಮಾಡುತ್ತಿರುವುದು ಏಕೆ ಎಂದು ನನಗೆ ಅರ್ಥವಾಗುತ್ತಿಲ್ಲ. ಚಿಕ್ಕಬಳ್ಳಾಪುರದ ಸಭೆಗೆ ಬಂದು ನನಗೆ ಚುನಾವಣೆಯಲ್ಲಿ ಸ್ಪರ್ಧೆ ಮಾಡಲು ಹೇಳಿದ್ದರು. ನಿಮ್ಮ ಕುಟುಂಬದಲ್ಲಿ ಬೇರೆ ಯಾರೂ ಆಗುವುದಿಲ್ಲ, ನೀನೇ ನಿಲ್ಲಬೇಕು ಎಂದು ಹೇಳಿ ಏಕಾಂಗಿಯಾಗಿ ಕಾಂಗ್ರೆಸ್ ವಿರುದ್ಧ ಸ್ಪರ್ಧೆ ಮಾಡಿದಾಗ ಇಡೀ ಸರ್ಕಾರ ನನ್ನ ವಿರುದ್ಧವಾಗಿತ್ತು. ತಾವು, ಮಾನ್ಯ ಶಾಣಪ್ಪನವರು, ಮಾನ್ಯ ಉದಾಸಿಯವರು, ಮಾನ್ಯ ಎಸ್.ಎಸ್.ಪಾಟೀಲರು ಎಲ್ಲರೂ ಬಂದು...

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅಂದಿನದ್ದೆಲ್ಲವನ್ನೂ ನೆನಪು ಇಟ್ಟುಕೊಂಡಿದ್ದಾರೆ. ಆದರೆ ನಾನು ಇತ್ತೀಚೆಗೆ ಸದನದಲ್ಲಿ ಮಾನ್ಯ ಸಚಿವರನ್ನು ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಮಾಡಿದರೆ ಕಾಂಗ್ರೆಸ್‌ಗೆ ಪೂರ್ಣ ಬಹುಮತ ದೊರೆಯುತ್ತದೆ ಎಂದು ಹೇಳಿದ್ದೆ. ಅದನ್ನು ಅವರು ಮರೆತಿದ್ದಾರೆ. ಅವರ ಬಗ್ಗೆ ನಮಗೆ ಅಷ್ಟು ಗೌರವವಿದೆ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಈ ಹಂಗಾಮಿ ವ್ಯವಸ್ಥೆಯನ್ನು ಮುಂದುವರೆಸಬೇಕೆನ್ನುವ ಉದ್ದೇಶ ಸರ್ಕಾರಕ್ಕೆ ಎಲ್ಲೆಲ್ಲಿಯೂ ಸಹ ಇಲ್ಲ. ಆದರೆ ಈಗ ಹಂಗಾಮಿ ಸಭಾಪತಿಯವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರ ಕಾರ್ಯವ್ಯಾಪ್ತಿ ಬಗ್ಗೆ ಮಾತನಾಡುತ್ತಿದ್ದೆನು. ಅರ್ಧದಲ್ಲಿಯೇ ನಿಲ್ಲಿಸಿದ್ದ ಕಾರಣ ಅದನ್ನು ಪೂರೈಸುತ್ತೇನೆ. "... *The person so appointed is known as Speaker pro tem and he continues in office till the Speaker is elected. The name of a member to be appointed as Speaker pro tem is suggested by the Prime Minister."* ಅಲ್ಲಿ "suggested by the Prime Minister" ಎಂದು ಇದೆ. ಅದು ಇಲ್ಲಿ ಅವಶ್ಯಕತೆ ಇಲ್ಲ. ಈಗ ಉದ್ಭವಿಸುವುದು ಒಂದೇ. ಇಲ್ಲಿ ಏನು ಹೇಳುತ್ತದೆಂದರೆ, he may continue as Speaker till Speaker is duly elected. Current occupant is not duly elected and we agree with the Hon'ble Members. But, till a Chairman is duly elected, he shall have the rights to perform as Chairman. Let that issue be rested. ಮಧ್ಯದಲ್ಲಿ ಪೀಠದಿಂದ ಕೇಳಿದ್ದರಿಂದ ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತರವನ್ನು ಕೊಡಬೇಕಾಗಿ ಬಂದಿತು. ಆ ಪ್ರಶ್ನೆಯನ್ನು ದಯವಿಟ್ಟು ತಮ್ಮ ಮನಸ್ಸಿನಿಂದ ತೆಗೆದು ಹಾಕಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ. ಪ್ರಶ್ನೆ ಉದ್ಭವಿಸುವುದು ಒಂದೇ. ಎಲ್ಲಿಯವರೆವಿಗೂ ಈ ವ್ಯವಸ್ಥೆ ಮುಂದುವರೆಯಬಹುದು?

**(...ಮುಂದು)**

(103)06.07.20186.12.20ಕೆಜಿ.ಬಿಎನ್ಎಸ್

**ಶ್ರೀ ಕೃಷ್ಣಭೈರೇಗೌಡ (ಮುಂದು.,):-** ಈಗ ಇಷ್ಟೇ ತಾನೆ. ಅದಕ್ಕೆ ಅವರು ಉತ್ತರ ಹೇಳಬಿಡಿ ಎಂದು ಹೇಳಿದ್ದಾರೆ. Article 184(1) of the Constitution ಕೆಳಗಡೆ ಅದು ರಚನೆಯಾಗಿರುವುದು. ಆ ಪ್ರಶ್ನೆ ಎಲ್ಲಿ ಬರುತ್ತದೆ? Constitution ನಲ್ಲಿ ಎಷ್ಟು ದಿವಸಗಳವರೆಗೆ ಸಭಾಪತಿಯವರು ಮುಂದುವರೆಯಬಹುದೆಂದು ಹೇಳಿರುವುದಿಲ್ಲ. ಅದನ್ನು ನಾವು ನಿಯಮಾವಳಿಗಳಲ್ಲಿ ರೂಪಿಸಿಕೊಂಡಿದ್ದೇವೆ. ಆ ನಿಯಮಾವಳಿಗಳು ಸಹ Article 184(1) of the Constitution ರ ಅಡಿಯಲ್ಲಿ ರಚನೆಯಾಗಿರುತ್ತದೆ. Rule 7 (6) of the Rules of Procedure and Conduct of Business in the Karnataka Legislative Council states about it. ಮಾನ್ಯ ಸದಸ್ಯರು ಅದನ್ನೇ ಉಲ್ಲೇಖ ಮಾಡಿದ್ದಾರೆ. ಬಹುಶಃ ಅದು ಹೊಸದಲ್ಲ. ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದರಲ್ಲಿ ಅವರಿಗೆ ಸಮಾಧಾನ ಆಗಲಿಲ್ಲವೆಂದರೆ ಆಮೇಲೆ ಅವರು ಮಾತನಾಡಲಿ. I am coming to the point directly. "The date so fixed", ... (interruptions) ಯಾವುದು, "The Chairman shall be elected soon" ... ಆ "soon" ಗೆ ಏನಾದರೂ ಅರ್ಥ ಇರಬೇಕು ಅಲ್ಲವೇ? ಅದಕ್ಕೆ ನಿಯಮದಲ್ಲಿ ಏನು ಹೇಳುತ್ತದೆಂದರೆ; Rule 7 (6) of the Rules of Procedure and Conduct of Business in the Karnataka Legislative Council reads thus:

> *"7(6) The date so fixed should be not later than immediate next session for the election of Chairman when the post is vacant."*

We agree with this. This has also been the contention of the Opposition Members. We agree with their contention. Now, what

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

is the interpretation? 'Next Session' ಎಂದು ಹೇಳಿದರೆ ಏನು? I take refuge under one of the most learned Members of this House who is no more with us whom I use to personally respect who also liked me very much i.e. Dr. V.S.Acharya. ಡಾ॥ವಿ.ಎಸ್.ಆಚಾರ್ಯರವರು ಏನು ಹೇಳಿದ್ದಾರೆಂದರೆ;

> *"The date so fixed should be not later than immediate next Session for the appointment of Chairman when the post is vacant."*

Exactly, the same Rule is quoted. It is very clear. Further it reads thus:

> *"We are not taking liberty under any Rule. It is not our provision. .."*

ಇದರಲ್ಲಿ ನಾವೆಲ್ಲರೂ ತೀರ್ಮಾನಿಸಿದಂತೆ, ಮುಂದಿನ ಅಧಿವೇಶನಕ್ಕೆ ಮುಂಚೆ ಎಂದಿದೆ. ಡಾ॥ವಿ.ಎಸ್.ಆರ್ಚಾಯರವರು ಕೊನೆಗೆ ಏನು ಹೇಳುತ್ತಾರೆಂದರೆ;

> *"Session means the period of time between the first meeting of the Council upon the summons of the Governor under Article 174(1) of the Constitution and its prorogation."*

Correct Sir. This House is not prorogued. ಈಗ ಅವರ ಪ್ರಶ್ನೆಗೆ ಉತ್ತರ ಹೇಳುತ್ತೇನೆ. This Government is committed to duly elect the Chairman before the prorogation of this Session. ಈ ಅಧಿವೇಶನ ಮುಗಿಯುವುದರೊಳಗೆ ಹೊಸ ಸಭಾಪತಿಯವರನ್ನು ಆಯ್ಕೆ ಮಾಡುತ್ತೇವೆ. ಅಲ್ಲಿಯವರೆಗೆ ನಮಗೆ ಸಮಯ ಇದೆ ಎನ್ನುವುದು ನಿಯಮ 7(6) ರಲ್ಲಿ ಸ್ಪಷ್ಟವಾಗಿ ಇದೆ. As per Rule 7(6) of the Rules, we have every right and time till the end of this Session to elect the Chairman. ಈಗಾಗಲೇ, ನಾವು ಈ ವಿಷಯವನ್ನು ಸಂಪುಟದಲ್ಲಿ ಮಂಡನೆ ಮಾಡಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಮುಖ್ಯಮಂತ್ರಿಯವರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ರಾಜ್ಯಪಾಲರಿಗೆ ಪತ್ರ ವ್ಯವಹಾರವನ್ನು ಮಾಡಿ ಸಭಾಪತಿಯವರನ್ನು ಆಯ್ಕೆ ಮಾಡುವುದಕ್ಕೆ ಒಂದು ದಿನಾಂಕವನ್ನು ಅವರಿಂದ ಅನುಮತಿ ಪಡೆದುಕೊಂಡು ಆದೇಶವನ್ನು ಹೊರಡಿಸಬೇಕಾಗುತ್ತದೆ. ಅದರ ಕಡತ ತಯಾರು ಇದೆ. ಅದು ಮಾನ್ಯ ರಾಜ್ಯಪಾಲರಿಗೆ ಹೋಗಿ ಬರಬೇಕು. ಆ ಪ್ರಕ್ರಿಯೆಯನ್ನು ಮಾಡಿ ಈ ಅಧಿವೇಶನ ಮುಗಿಯುವುದರೊಳಗೆ ಸಭಾಪತಿಯವರನ್ನು ಆಯ್ಕೆ ಮಾಡುತ್ತೇವೆ. ಹಾಗಾಗಿ, ನಾವು ಇದೇ ರೀತಿ ನಡೆಸುತ್ತೇವೆಂದು ಯಾರು ಸಹ ಆತಂಕಕ್ಕೆ ಒಳಗಾಗಬೇಕಿಲ್ಲ. ಅದು ವಾಸ್ತವದಲ್ಲಿ ಆಧಾರಿತವಾಗಿತಕ್ಕಂತಹ ಆತಂಕ ಅಲ್ಲ. ಯಾರೋ ಕಲ್ಪನೆ ಮಾಡಿಕೊಂಡು ಮಾಧ್ಯಮದವರು ಹೇಳಬಹುದು. ಆದರೆ, ಸರ್ಕಾರಕ್ಕೆ ಈ ರೀತಿಯೇ ಮುಂದುವರಿಸಿಕೊಂಡು ಹೋಗಬೇಕು ಎನ್ನುವಂತಹ ಯಾವುದೇ ಉದ್ದೇಶ ಇಲ್ಲ. ಈ ಅಧಿವೇಶನ ಮುಗಿಯುವವರೆಗೂ..., the Government has every right till the end of this Session and we are only exercising the powers that are vested in Government by the Rules. We are not usurping any power and we have no intention to usurp any power. ಮಾನ್ಯ ಸಭಾಪತಿಯವರೇ, hence, I reject the aspersions cast on the Government. ಎಲ್ಲೋ ನಮಗೆ ಯಾವುದೇ ಬೇರೆ ಉದ್ದೇಶ ಇದೆ ಅಥವಾ ಬೇರೆ ಯಾವುದೇ ಅರೆಬರೆ ಮಾಡುವಂತಹ ಉದ್ದೇಶವು ಇಲ್ಲ ಹಾಗೂ mislead ಮಾಡುವಂತಹ ಉದ್ದೇಶವು ಇಲ್ಲ. When the Rules are very clear, why should we resort to any half baked interpretations. We have power till the end of this session. ನಾನು ಮಾನ್ಯ ಎಲ್ಲಾ ಸದಸ್ಯರಲ್ಲಿ ಮನವಿ ಮಾಡುವುದೇನೆಂದರೆ, ಈ ಅಧಿವೇಶನ ಮುಗಿಯುವುದರೊಳಗೆ ಎಲ್ಲರೂ ಸೇರಿ ಹೊಸ ಸಭಾಪತಿಯವರನ್ನು ಆಯ್ಕೆ ಮಾಡೋಣ, ಅಲ್ಲಿಯವರೆಗೆ ಈ ಸದನ ಸುಗಮವಾಗಿ ನಡೆಯಲಿ. ಈ ಸದನವನ್ನು ನಡೆಸುವುದಕ್ಕೆ ಹಾಲಿ ಸಭಾಪತಿಯವರಿಗೆ ಎಲ್ಲಾ ಅಧಿಕಾರ ಇದೆ. ನಾವೆಲ್ಲರೂ ಅವರಿಗೆ ಗೌರವವನ್ನು ಕೊಡೋಣ. ಈ ಅಧಿವೇಶನ ಮುಗಿಯುವುದರೊಳಗೆ ಹೊಸ ಸಭಾಪತಿಯವರನ್ನು ಆಯ್ಕೆ ಮಾಡೋಣವೆಂದು ನಾನು ಎಲ್ಲಾ ಮಾನ್ಯ ಸದಸ್ಯರಲ್ಲಿ ಮನವಿ ಮಾಡುತ್ತೇನೆ. ಅದರೊಂದಿಗೆ ಮುಂದಿನ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳಬೇಕೆಂದು ಮಾನ್ಯ ಪೀಠದಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನನಗೆ ಕಾಲಾವಕಾಶ ಕೊಡಿ. ಒಂದು ವಿಷಯವನ್ನು refer ಮಾಡಿಬಿಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಆಯಿತು ಮಾಡಿ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಇದು ಬೇರೆ. In addition to that. ಏಕೆಂದರೆ, academic ಬಗ್ಗೆ ಚರ್ಚೆ ನಡೆಯುತ್ತಿದೆ.

*"It is submitted that pro tem Speaker cannot exercise any power other than what has been conferred upon him in the order dtd.18.05.2018. The pro tem speaker cannot take up any agenda other than administration of oath and the floor test."*

ಇದನ್ನು ಡಾ||ಜಿ.ಪರಮೇಶ್ವರ್‌ರವರು Hon'ble Supreme Court ಗೆ affidavit ಮೂಲಕ ದಿನಾಂಕ 18.05.2018 ರಂದು ಸಲ್ಲಿಸಿದ್ದಾರೆ. ಅವರು ಪ್ರಮಾಣ ವಚನವನ್ನು ಬಿಟ್ಟು ಬೇರೆ ಏನು ಮಾಡಬಾರದೆಂದು ಹೇಳಿ ಡಾ||ಜಿ.ಪರಮೇಶ್ವರ್‌ರವರು "Pro tem Speaker" ಎಂದರೆ ಏನೆಂದು ಹೇಳಿ ಅವತ್ತಿನ ಕರ್ನಾಟಕ ರಾಜ್ಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದಂತಹ ಹಾಗೂ ಈಗಿನ ಉಪ ಮುಖ್ಯಮಂತ್ರಿಗಳಾದಂತಹ ಡಾ||ಜಿ.ಪರಮೇಶ್ವರ್‌ರವರು Hon'ble Supreme Court ಗೆ affidavit ಮೂಲಕ ಮೇ ತಿಂಗಳಿನಲ್ಲಿ ಸಲ್ಲಿಸಿದ್ದಾರೆ. "Pro tem Speaker" ಎಂದರೆ ಏನು? *Administration of oath* ಅನ್ನು ಬಿಟ್ಟು ಬೇರೆ ಏನ್ನನ್ನು ಮಾಡಬಾರದೆಂದು ಹೇಳಿದ್ದು ಯಾರು? ಇದನ್ನು ನಾನು ಅಥವಾ ನಮ್ಮ ಸದಸ್ಯರು ಹೇಳಿದ್ದು ಅಲ್ಲ. ಇದನ್ನು ಉಪ ಮುಖ್ಯ ಮಂತ್ರಿಗಳಾದ ಡಾ||ಜಿ.ಪರಮೇಶ್ವರ್‌ರವರು ಹೇಳಿದ್ದು. ನನ್ನ ಕೈಯಲ್ಲಿರುವಂತಹ ಪ್ರತಿ ಅವರು Hon'ble Supreme Court ಗೆ ಸಲ್ಲಿಸಿರುವಂತಹ ನಕಲಿನ ಪ್ರತಿ. ಇಲ್ಲಿ ನಾನು ಯಾವುದೇ ಪತ್ರಿಕೆಯಲ್ಲಿ ಬಂದಿರುವಂತಹ ವಿಷಯವನ್ನು ಹೇಳುತ್ತಿಲ್ಲ. ಅವರು affidavit ಮೇಲೆ ಹಾಕಿದ್ದನ್ನು, ಈಗ ಮಾನ್ಯ ಸಚಿವರು ಅವರ ಮಾತಿನ ಚಾಕಚಕ್ಯತೆಯಿಂದ 'ಚಾಕಚಕ್ಯತೆ' ಪದವೇ ಬೇರೆ, ಇದು ಚಾಕು ಚಕ್ಯತೆ ಯಿಂದ ಮಾತನಾಡಿ.,,

(ಗೊಂದಲ)

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, I strongly protest. ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ಬಹಳ ಹಿರಿಯ ಸದಸ್ಯರಿದ್ದಾರೆ. ಅವರ ಬಾಯಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಂತಹ ಪದ ಬರಬಾರದು. "ಚಾಕು ಚಕ್ಯತೆ" ಸಂಸ್ಕೃತಿ ಅವರದ್ದು ಇರಬಹುದು. ಅದು ನಮ್ಮದಲ್ಲ. ಈ ಸದನಕ್ಕೆ ಗೌರವ ಇದೆ.

(ಗೊಂದಲ)

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದು ಅವರ ಸಂಸ್ಕೃತಿಯ ಬಗ್ಗೆ ಅಲ್ಲ.

(ಗೊಂದಲ)

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನನ್ನ ಬಗ್ಗೆ ಮಾತನಾಡಿದ್ದಾರೆ. I request that, ದಯವಿಟ್ಟು ಆ ಪದವನ್ನು ಕಡತದಿಂದ ತೆಗೆಯಬೇಕೆಂದು ನನ್ನ ಮನವಿ. ಅವರು ಇಂತಹ ಪದಗಳನ್ನು ಬೇಕಾದರೆ ಬೀದಿಯಲ್ಲಿ ಬಳಕೆ ಮಾಡಿಕೊಳ್ಳಲಿ. ನಮಗೆ ಅವರ ಬಗ್ಗೆ ಗೌರವ ಇದೆ. ಮಾನ್ಯ ಸದಸ್ಯರು ಅಂತಹ ಪದ ಬಳಕೆ ಮಾಡಿ ಈ ಸದನಕ್ಕೆ ಅಗೌರವ ತೋರಿದ್ದಾರೆ.

ಮುಂದು

(104):06.07.2018-12.30-ಎಂವಿ-ಜಿಆರ್

**ಶ್ರೀ ಕೃಷ್ಣಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಆ ತರಹದ ಪದವನ್ನು ಏತಕ್ಕೆ ಬಳಕೆ ಮಾಡಬೇಕು.

(ಗೊಂದಲ)

**ಡಾ.ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಬ್ಬ ಸದಸ್ಯರಿಗೆ ಏಕವಚನ ಪ್ರಯೋಗ ಮಾಡುವುದಕ್ಕೆ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ಸಾಕು, ಅವರು ಇಲ್ಲಿ ಏನು ಪ್ರಯೋಗ ಮಾಡುತ್ತಾರೆ.

**ಡಾ.ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಅವರ ಬಗ್ಗೆ ಮಾತನಾಡುವುದಕ್ಕೆ ನಮಗೂ ಸಹ ಬರುತ್ತದೆ. ಆದರೆ, ನಾವು ಅದನ್ನು ಪ್ರಯೋಗ ಮಾಡುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಸಭಾಪತಿಯವರು**:- ನಾನು ಹೇಳುತ್ತೇನೆ ದಯಮಾಡಿ ಕುಳಿತುಕೊಳ್ಳಿ. ನಾನು ಹೇಳವುದಕ್ಕೆ ಅವಕಾಶ ನೀಡಿ.

**ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, ಎಲ್ಲರೂ ದಯಮಾಡಿ ಕುಳಿತುಕೊಳ್ಳಲಿ.

**ಸಭಾಪತಿಯವರು**:- ಮಾನ್ಯ ಶ್ರೀಕಂಠೇಗೌಡರೆ, ಒಂದು ನಿಮಿಷ ನಾನು ಮಾತನಾಡುವುದಕ್ಕೆ ಅವಕಾಶ ನೀಡಿ, ನಾನು ಹೇಳುವವರೆಗೂ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಕೆ.ವಿ.ನಾರಾಯಣಸ್ವಾಮಿ (ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ನಾನು ಆಡಳಿತ ಪಕ್ಷಕ್ಕೆ ಸೇರಿದವನು, ನನಗೆ ಇಲ್ಲಿ ಸೀಟ್ ಕೊಟ್ಟಿದ್ದೀರಿ. ವಿರೋಧ ಪಕ್ಷದವರು ಮತ್ತು ಆಡಳಿತ ಪಕ್ಷದವರು ನಿಂತುಕೊಂಡಾಗ, ನಾನು ನಿಂತುಕೊಂಡರೆ, ಇವರ ಕಡೆ ನಿಂತು ಕೊಳ್ಳುತ್ತೇನೆಯೋ? ಅಥವಾ ಅವರ ಕಡೆ ನಿಂತು ಕೊಳ್ಳುತ್ತೇನೆಯೋ? ಎಂದು ನನಗೆ ತೊಂದರೆಯಾಗಿದೆ. ನನಗೆ ಹಿಂದಿನ ಸೀಟ್ ಆದರೂ ಪರವಾಗಿಲ್ಲ, ದಯವಿಟ್ಟು ಅಲ್ಲಿ ಒಂದು ಸೀಟ್ ಅನ್ನು ನೀಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು**:- ಆಯಿತು. ಒಂದು ನಿಮಿಷ ಎಲ್ಲರೂ ಕೇಳಿ. ಈ ಪೀಠದಲ್ಲಿ ಕುಳಿತುಕೊಂಡಾಗ, ಯಾರೇ ಸಭಾಪತಿಯವರು ಇರಲಿ, ಉಪಸಭಾಪತಿಯವರು ಇರಲಿ, ಯಾರೇ ಇದ್ದರು ಸಹ 'ಸಭಾಪತಿ' ಎಂದು ಕರೆಯುವಂತಹ ವಾಡಿಕೆ, ಪದ್ಧತಿ ರೂಢಿಯಲ್ಲಿದೆ. ನೀವು ಯಾವುದೋ Protem ಬಗ್ಗೆ ಚರ್ಚೆ ಮಾಡಿದ್ದೀರಿ. ಇಲ್ಲಿ ಯಾರೇ ಇದ್ದರು ಸಹ 'ಹಂಗಾಮಿ ಸಭಾಪತಿ' ಎಂಬುವಂತಹ ಪದ ಎಲ್ಲೂ ಇಲ್ಲ. 'ಸಭಾಪತಿ' ಎಂದೇ ಕರೆಯಬೇಕಾಗುತ್ತದೆ ಮತ್ತು 'ಸಭಾಪತಿ' ಎಂದೇ ಇರಬೇಕಾಗುತ್ತದೆ. ನಾನು ಎರಡೂ ಕಡೆಯವರ ಮಾತನ್ನು ಕೇಳಿದ್ದೇನೆ. ನಾನು ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡುತ್ತೇನೆ. (ಗೊಂದಲ) ಒಂದು ನಿಮಿಷ, ಎಲ್ಲರೂ ಏತಕ್ಕೆ ಮಾತನಾಡುತ್ತೀರಿ. ಇಂತಹ burning issue ಇದ್ದಾಗ ಮತ್ತೊಂದು ಕಡೆ ಹೋಗುತ್ತೀರಲ್ಲ.

(ಗೊಂದಲ)

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ತಮ್ಮ ಮನಸ್ಸಿಗೆ ತೆಗೆದುಕೊಳ್ಳಬಾರದು. ಇದಕ್ಕೆ ನಾವು ಕ್ಷಮೆ ಕೇಳುತ್ತೇವೆ. ನೀವು ಪೀಠದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಳಿತುಕೊಳ್ಳಿ, ನಿಮಗೆ ನೋವಾಗಿದ್ದರೆ, ನಾವು ಕ್ಷಮೆ ಕೇಳುತ್ತೇವೆ. ದಯವಿಟ್ಟು ನೀವು ಇದನ್ನು ಮನಸ್ಸಿಗೆ ತೆಗೆದುಕೊಳ್ಳಬೇಡಿ.

**ಸಭಾಪತಿಯವರು:-** ನಾನು ಎದ್ದು ನಿಂತಿದ್ದೇನೆ. ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ಬೇರೆ ವಿಷಯದಲ್ಲಿ ವಾದ-ವಿವಾದ ಮಾಡುವುದು ಬೇರೆ. ಈ ನಾಡಿನ ಹೊರಗೆ ಏನು ಸಂದೇಶ ಹೋಗುತ್ತದೆ ಎಂಬುದನ್ನು ನಾವು ಸಂಪೂರ್ಣವಾಗಿ ವಿಚಾರ ಮಾಡಬೇಕಾಗುತ್ತದೆ. ಅದಕ್ಕೆ ವಾದ-ವಿವಾದ ಬೇಡ. ದಯಮಾಡಿ ಎಲ್ಲಾ ಸಂಬಂಧಪಟ್ಟ ಸಚಿವರು ಮತ್ತು ವಿರೋಧ ಪಕ್ಷದವರು ನನ್ನ ಕೊಠಡಿಗೆ ಬನ್ನಿ, ಅದರ ಬಗ್ಗೆ ಚರ್ಚೆ ಮಾಡೋಣ. ಸಭೆಯನ್ನು ಹತ್ತು ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

(105) 06.07.2018 ಟಿಸಿಹೆಚ್/ಎಂಡಿ 1.00

**(ಮಧ್ಯಾಹ್ನ 12 ಗಂಟೆ 33 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಮತ್ತೆ ಮಧ್ಯಾಹ್ನ 1 ಗಂಟೆ 09 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಕೃಷ್ಣಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಈ ಸದನದಲ್ಲಿ ಬೆಳಗ್ಗೆಯಿಂದ ಒಳ್ಳೆಯ ಚರ್ಚೆ ಆಗಿದೆ ಮತ್ತು ಸಂಸದೀಯ ಕಾರ್ಯಕಲಾಪಗಳ ಒಂದು ಉದ್ದೇಶ ಏನಿರುತ್ತದೆಯೋ ಆ ಉದ್ದೇಶದ ಪ್ರಕಾರವಾಗಿ ಚೆನ್ನಾಗಿ ಚರ್ಚೆ ಆಗಿದೆ.

**(ಮುಂದು...)**

<u>(106)06.7.2018/1.10/ಎಂ.ಎಂ-ಎ.ಕೆ</u>

**ಶ್ರೀ ಕೃಷ್ಣ ಭೈರೇಗೌಡ (ಮುಂದು):-**

ನಾವು ಯಾರೂ ಕೂಡ ಕಾನೂನಿನಲ್ಲಿ ಸಂಪೂರ್ಣವಾಗಿ ಪರಿಣಿತರಲ್ಲ. ಈ ರೀತಿ ಚರ್ಚೆಯಾದಾಗಲೇ ನಮಗಿರುವ ಅಲ್ಪಸ್ವಲ್ಪ ಜ್ಞಾನ ಸುಧಾರಣೆಯಾಗುತ್ತದೆ. ಇಲ್ಲಿರುವ ಅನೇಕ ಸದಸ್ಯರು ಕಿರಿಯರಿದ್ದಾರೆ, ಯುವಕರಿದ್ದಾರೆ, ಸದನಕ್ಕೆ ಮೊದಲನೇ ಬಾರಿಗೆ ಬಂದವರಿದ್ದಾರೆ. ಅವರೆಲ್ಲಾ ಇವತ್ತು ಸಂಸದೀಯ ವ್ಯವಹಾರಗಳ ಘನತೆ ಏನು, ಇದರ ಹಿನ್ನೆಲೆ ಏನು, ಸಂಪ್ರದಾಯ ಏನು, ಇದರ ತೂಕ ಏನು ಎನ್ನುವುದು ಈ ಚರ್ಚೆಯ ಮುಖಾಂತರ ಎಲ್ಲರಿಗೂ ಸ್ವಲ್ಪ ಮಟ್ಟಿಗೆ ಅರಿವು ಮೂಡಿದೆ ಎಂದು ಭಾವಿಸುತ್ತೇನೆ. ಏಕೆಂದರೆ, ಸುಮ್ಮನೇ ಇದು ಒಂದು ಸಭೆಯ ರೀತಿ ನಡೆಯುತ್ತದೆ ಎಂದು ಅಲ್ಲ. ಇದರ ಒಂದೊಂದು ಪದಕ್ಕೂ ಯಾವ ಹಿನ್ನೆಲೆ ಇದೆ, ವ್ಯಾಖ್ಯಾನ ಇದೆ, ಅರ್ಥವಿದೆ ಎನ್ನುವುದೆಲ್ಲಾ ಚರ್ಚೆಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖಾಂತರ ಆಡಳಿತ ಪಕ್ಷದ ಮಾನ್ಯ ಸದಸ್ಯರು ಮತ್ತು ವಿರೋಧಪಕ್ಷದ ನಾಯಕರಿಂದ ಎಲ್ಲಾ ಸದಸ್ಯರೂ ಈ ವಿಚಾರದ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಕೊನೆಯಲ್ಲಿ ಒಂದು ಸಣ್ಣ ಘಟನೆ ನಡೆದಿದ್ದು ಬಿಟ್ಟರೆ ಅಲ್ಲಿಯವರೆಗೂ ಬಹಳ ಆರೋಗ್ಯಕರವಾಗಿ ಚರ್ಚೆಯಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಪೀಠದ ಬಗ್ಗೆಯೇ ಪ್ರಶ್ನೆ ಉದ್ಭವಿಸಿದಾಗ ಅಂತಹ ಚರ್ಚೆಗೆ ಪೀಠವೇ ಅವಕಾಶ ಮಾಡಿಕೊಟ್ಟಿರುವುದು ಇನ್ನೂ ವಿಶೇಷವಾಗಿದೆ. ಪೀಠದ ಬಗ್ಗೆ ಪ್ರಶ್ನೆ ಉದ್ಭವಿಸಿದಾಗ ಪೀಠವೇ ಇದಕ್ಕೆ ಅವಕಾಶ ಮಾಡಿಕೊಟ್ಟು ಇವತ್ತು ಆ ಪೀಠಕ್ಕೆ ಮೆರುಗನ್ನು ತರುವಂತಹ ಕೆಲಸ ಪೀಠಾಸೀನರಾಗಿರುವಂತಹ ತಾವು ಮಾಡಿದ್ದೀರಿ. ಇಂತಹ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊದಲಿಗೆ ನಾನು ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಈ ವಿಚಾರದ ಬಗ್ಗೆ ಬೆಳಕು ಚೆಲ್ಲುವಂತಹ ಪ್ರಯತ್ನವನ್ನು ವಿರೋಧಪಕ್ಷದವರು ಕೂಡ ಮಾಡಿದ್ದಾರೆ. ಸರ್ಕಾರವು ಕೂಡ ಜಾಗ್ರತೆಯಿಂದ ಕೆಲಸ ಮಾಡಬೇಕೆಂಬ ಒಂದು ಸಂದೇಶವನ್ನು ಈ ಚರ್ಚೆಯ ಮುಖಾಂತರ ವರು ಕೊಟ್ಟಿದ್ದಾರೆ ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಈ ಚರ್ಚೆಯನ್ನು ಸ್ವಾಗತ ಮಾಡುತ್ತೇನೆ, ಇಂತಹ ಚರ್ಚೆಗಳು ಆಗುತ್ತಾ ಇರಬೇಕೆನ್ನುವ ವಿಚಾರವನ್ನು ಹೇಳುತ್ತಾ ಈ ವಿಚಾರದ ಬಗ್ಗೆ ಮಾತನಾಡಿದ ಎಲ್ಲಾ ಸದಸ್ಯರಿಗೂ ನನ್ನ ಧನ್ಯವಾದಗಳನ್ನು ತಿಳಿಸುತ್ತೇನೆ.

ಮುಂದುವರೆದು, ಆಗಲೇ ಎರಡು ವಿಚಾರಗಳ ಬಗ್ಗೆ ಚರ್ಚೆಯಾಗಿದೆ. ಹಾಲಿ ಪೀಠಾಸೀನರಾಗಿರುವವರ ವ್ಯಾಪ್ತಿ ಏನು ಎಂಬ ಬಗ್ಗೆ ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಸಂವಿಧಾನದ ಅನುಚ್ಛೇದ 184(1)ರಲ್ಲಿ ರಾಜ್ಯಪಾಲರು ಸಭಾಪತಿಯವರನ್ನು ನೇಮಕ ಮಾಡಬಹುದು ಎಂದು ಹೇಳಿದ್ದಾರೆ. 'ಹಂಗಾಮಿ ಸಭಾಪತಿ' ಎಂದೇನೂ ವ್ಯಾಖ್ಯಾನ ಇಲ್ಲ ಮತ್ತು ರಾಜ್ಯಪಾಲರು ಆದೇಶ ಹೊರಡಿಸಿದಾಗಲೂ ಕೂಡ 'ಹಂಗಾಮಿ ಸಭಾಪತಿ' ಎಂದೇನೂ ಆದೇಶ ಹೊರಡಿಸಿಲ್ಲ. 'ಸಭಾಪತಿಯಾಗಿ' ಎಂದೇ ಸ್ಪಷ್ಟವಾಗಿ ಆದೇಶವನ್ನು ಹೊರಡಿಸಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಸಚಿವರು ಕರ್ನಾಟಕ ರಾಜ್ಯಪತ್ರದಲ್ಲಿ ಹೊರಡಿಸಿರುವ ಅಧಿಸೂಚನೆಯನ್ನು ಸದನದಲ್ಲಿ ಪ್ರದರ್ಶಿಸಿದರು)**

ಇದು ರಾಜ್ಯ ಪತ್ರ. ಇದನ್ನು ಎಲ್ಲರೂ ಓದಿದ್ದಾರೆ, ಆದರೂ ಇದರ ಬಗ್ಗೆ ಸ್ಪಷ್ಟೀಕರಣವಾಗಲಿ ಎಂದು ಮತ್ತೊಮ್ಮೆ ಓದುತ್ತೇನೆ. It reads as follows:-

> *"In exercise of the powers conferred by clause (1) of Article 184 of the Constitution of India, I, Vajubhai Vala, Governor of Karnataka, do hereby appoint Sri*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*Basavaraj Horatti, a Member of Legislative Council, to perform duties of the Office of Chairman of Legislative Council."*

ಅವರು ಎಲ್ಲಿಯೂ ಕೂಡ ಭಾಗಶಃ ತಮ್ಮನ್ನು ನೇಮಕ ಮಾಡಿಲ್ಲ. He has appointed you as a full Chairman. And he has exercised these powers not on his own. He has exercised these powers given to him by the Constitution under Article 184, sub-clause (1). ಹಾಗಾಗಿ ತಮ್ಮನ್ನು ಅವರು ನೇಮಕ ಮಾಡಿದ್ದು, ತಾವು ಸಭಾಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದೀರಿ. ತಮ್ಮ ಕಾರ್ಯವ್ಯಾಪ್ತಿಯ ಬಗ್ಗೆ ಯಾರೂ ಕೂಡ ಪ್ರಶ್ನೆ ಮಾಡುವುದು ಬೇಡ ಎಂದು ಸದನದ ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ, ವಿರೋಧಪಕ್ಷದಿಂದ ಹಿಡಿದು ಎಲ್ಲರಲ್ಲಿಯೂ ಮನವಿ ಮಾಡುತ್ತೇನೆ. ಮುಂದೆ ಸಭಾಪತಿಯವರು ಆಯ್ಕೆಯಾಗುವವರೆಗೂ ಕೂಡ ಕಾರ್ಯನಿರ್ವಹಿಸುವಂತಹ ಎಲ್ಲಾ ಅಧಿಕಾರ ಪೀಠಾಸೀನರಾಗಿರುವ ಮಾನ್ಯ ಶ್ರೀ ಬಸವರಾಜ ಹೊರಟ್ಟಿಯವರಿಗೆ ಇದೆ. ಅದನ್ನು ನಾವೆಲ್ಲರೂ ಗೌರವಿಸೋಣ ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಎರಡನೆಯ ಪ್ರಮುಖ ವಿಚಾರ ಎಂದರೆ, ಚುನಾವಣೆ. ನಿಯಮಾನುಸಾರ ಸಭಾಪತಿಯವರನ್ನು ಆಯ್ಕೆ ಮಾಡಬೇಕು ಎನ್ನುವುದು ತಮ್ಮೆಲ್ಲರ ಆಶಯವಾಗಿದೆ. ಅದಕ್ಕೆ ಸಂಬಂಧಪಟ್ಟ ಹಾಗೆ ಕೂಡ ನಾನು ಹೇಳಿದ್ದೇನೆ. ಪೀಠಾಸೀನರಾಗಿರುವವರು ಯಾರೇ ಆಗಲಿ, ಮುಂದೆ ಚುನಾವಣೆ ಮುಖಾಂತರ ಆಯ್ಕೆಯಾಗುವವರೆಗೂ ಅವರು ಸದನವನ್ನು ನಡೆಸುತ್ತಾರೆ. ಚುನಾವಣೆಯನ್ನು ಯಾವಾಗ ನಡೆಸಬೇಕು? ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳಲ್ಲಿ *"The date so fixed should not be later than the immediate next session for the election of Chairman…"* ಎಂದು ಹೇಳಿದೆ. Next Session ಅಂದರೆ ಏನು? 'Session' ಅಂದರೆ ಏನು ಎಂಬುದಕ್ಕೆ ಕೂಡ ವ್ಯಾಖ್ಯಾನ ಇದೆ. ನಾವು ಯಾರೂ ಇದನ್ನು ನಾವಾಗೇ ಕಲ್ಪನೆ ಮಾಡಿರುವುದಲ್ಲ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಪುಟ ೦೩ರಲ್ಲಿ ಅಧಿವೇಶನ ಎಂದರೆ ಏನು ಎಂದು ಇದೆ. *"Session" means the period of time between the first meeting of the Council upon the summons of the Governor under Article 174(1) of the Constitution and its prorogation."* ಇದು prorogue ಆಗುವವರೆಗೆ ಈ ಅಧಿವೇಶನ ಚಾಲ್ತಿಯಲ್ಲಿ ಇರುತ್ತದೆ. ಆದ್ದರಿಂದ ಆ ಅಧಿವೇಶನ;

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಚಿವರೇ, prorogue ಎಂದರೆ ಕನ್ನಡದಲ್ಲಿ ಏನೆಂದು ಹೇಳಿ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಅಂದರೆ, ಈ ಅಧಿವೇಶನವನ್ನು ನಾವು ಮುಕ್ತಾಯ; ಮುಂದೂಡುವುದಲ್ಲ, ಮುಂದೂಡಿದರೆ sine die ಎನ್ನುತ್ತೇವೆ. ಮುಕ್ತಾಯ ಮಾಡಿದರೆ ಅದು prorogue ಆಗುತ್ತದೆ. ಎಲ್ಲಿಯವರೆಗೂ ಸಭಾಪತಿಯವರು ಈ ಅಧಿವೇಶನ ಮುಕ್ತಾಯವಾಗಿದೆ ಎಂದು ಘೋಷಣೆ ಮಾಡುವುದಿಲ್ಲವೋ ಅಲ್ಲಿಯವರೆಗೂ ಈ ಅಧಿವೇಶನ ಚಾಲ್ತಿಯಲ್ಲಿ ಇರುತ್ತದೆ. ಈ ಅಧಿವೇಶನ ಮುಗಿಯುವುದರೊಳಗೆ ಸರ್ಕಾರವು ನಿಯಮಾನುಸಾರವಾಗಿ ಸಭಾಪತಿಯವರನ್ನು ಆಯ್ಕೆ ಮಾಡುವಂತಹ ಎಲ್ಲಾ ಉದ್ದೇಶಗಳನ್ನು ಇಟ್ಟುಕೊಂಡಿದೆ ಎನ್ನುವುದನ್ನು ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಅದಕ್ಕೆ ಗೌರವಕೊಟ್ಟು ಒಳ್ಳೆಯ ಚರ್ಚೆಯಾಗಿದೆ. ಆದರೆ ಮುಂದೆ ಕೂಡ ಆಯವ್ಯಯದಂತಹ ಪ್ರಮುಖ ವಿಚಾರಗಳ ಬಗ್ಗೆ ಚರ್ಚೆಯಾಗಿಬೇಕಾಗಿರುವುದರಿಂದ ಚರ್ಚೆಯನ್ನು ಮುಂದುವರೆಸಬೇಕೆಂದು ಸದನದ ಎಲ್ಲಾ ಸದಸ್ಯರಲ್ಲಿ ಮತ್ತು ವಿರೋಧಪಕ್ಷದ ನಾಯಕರು ಹಾಗೂ ಸಭಾಪತಿಯವರನ್ನು ಕೂಡ ಮನವಿ ಮಾಡಿಕೊಳ್ಳುತ್ತೇನೆ. ಪ್ರಶ್ನೆಗಳು ಉದ್ಭವಿಸಿದ್ದರಿಂದ ತಮ್ಮ ಮನಸ್ಸಿಗೂ ಎಲ್ಲೋ ಒಂದು ಕಡೆ ಸ್ವಲ್ಪ ಘಾಸಿ ಆಗಿರಬಹುದು ಎಂಬ ಅಭಿಪ್ರಾಯ ನನಗೆ ಬರುತ್ತಿದೆ. ಯಾವ ಸದಸ್ಯರಿಗೂ ಕೂಡ ತಮ್ಮನ್ನು ವೈಯಕ್ತಿಕವಾಗಿ ಪ್ರಶ್ನೆ ಮಾಡುವಂತಹ ಉದ್ದೇಶ ಇಲ್ಲ ಇಲ್ಲ ಎಂದು ಭಾವಿಸುತ್ತೇನೆ, ಆ ರೀತಿಯಾಗಿ ತಾವು ತಿಳಿಯಬಾರದು ಎಂತಲೂ ನಾನು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ.

**Sri BOJEGOWDA:** I would like to make one small intervention.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಭೋಜೇಗೌಡರೇ, ಇದನ್ನು ಇಲ್ಲಿಗೇ ಬಿಟ್ಟು ಬಿಡಿ. ಎಲ್ಲಾ ಸದಸ್ಯರೂ ಕೂಡ.

**ಶ್ರೀ ಭೋಜೇಗೌಡ:-** ಮಾನ್ಯ ಸಚಿವರೇ, ಇದರಲ್ಲಿ ತಪ್ಪಾಗುತ್ತದೆ. ಕಾನೂನು ಪ್ರಕಾರವಾಗಿ ಅವರು ಆಯ್ಕೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ತಾವು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

**ಶ್ರೀ ಕೃಷ್ಣ ಭೈರೇಗೌಡ:-** ಹೌದು, ಅದು ಸ್ಪಷ್ಟವಿದೆ. ಈಗ ನಾನು ಸಹ ಅದನ್ನು ಸ್ಪಷ್ಟವಾಗಿ ಹೇಳಿದ್ದೇನೆ. ತಾವು ನೇಮಕವಾಗಿರುವುದು ಮತ್ತು ಕಾರ್ಯನಿರ್ವಹಿಸುತ್ತಿರುವುದು ಸಂಪೂರ್ಣವಾಗಿ ಕಾನೂನಿನ ಅನ್ವಯವಾಗಿದೆ. ಅದನ್ನು ಹೊರತುಪಡಿಸಿ ಈ ಸದನದ ಎಲ್ಲಾ ಸದಸ್ಯರೂ ತಮ್ಮ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಷ್ಟೇ ಗೌರವವನ್ನು ಇಟ್ಟುಕೊಂಡಿದ್ದಾರೆ. ಈ ಸದನಕ್ಕೆ ಇಷ್ಟು ಬಾರಿ ಚುನಾಯಿತರಾಗಿರುವಂತಹವರು ಕರ್ನಾಟಕದಲ್ಲಿ ನಮ್ಮ ಸದನದಲ್ಲಂತೂ ಯಾರೂ ಇಲ್ಲ. ಚುನಾಯಿತರಾಗಿ ಇಷ್ಟು ಸುದೀರ್ಘವಾಗಿ ಸೇವೆ ಸಲ್ಲಿಸುತ್ತಿರುವವರು, ಬಹುಶಃ ದೇಶದಲ್ಲಿ ಯಾರಾದರೂ ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅದರ ಬಗ್ಗೆ ನನಗೆ ಸಂಪೂರ್ಣ ಜ್ಞಾನ ಇಲ್ಲ. ನನಗಿರುವ ಮಾಹಿತಿ ಪ್ರಕಾರ ಯಾರೂ ಇಲ್ಲ. ಅಷ್ಟು ಸುದೀರ್ಘ ಅನುಭವವನ್ನು ಮೇಲ್ಮನೆಯಲ್ಲಿ ತಾವು ಹೊಂದಿರುವವರಾಗಿರುವುದರಿಂದ ತಮ್ಮ ನಡವಳಿಕೆ ಹಾಗೂ ಸದನದ ಸದಸ್ಯರಾಗಿ, ಮಂತ್ರಿಗಳಾಗಿ, ಸಾರ್ವಜನಿಕ ಜೀವನದಲ್ಲಿ, ಖಾಸಗಿಯಾಗಿ ತಮ್ಮ ನಡವಳಿಕೆ ಬಗ್ಗೆ ನಮ್ಮೆಲ್ಲರಿಗೂ ಗೌರವ ಇದೆ ಎನ್ನುವುದನ್ನು ತಾವೆಲ್ಲಾ ಒಪ್ಪಿದರೆ ಈ ಸದನದ ಪರವಾಗಿ; ಕೇವಲ ಸರ್ಕಾರವಲ್ಲ; ನಾನು ತಮಗೆ ಮನವರಿಕೆ ಮಾಡಿಕೊಡಬಯಸುತ್ತೇನೆ. ಆದ್ದರಿಂದ ತಾವು ಇದರಲ್ಲಿ ಯಾವುದೇ ಎರಡನೇ ಆಲೋಚನೆ ಇಲ್ಲದೇ ಈ ಸದನವನ್ನು ನಡೆಸಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ. ಎಲ್ಲಾ ಸದಸ್ಯರೂ ಕೂಡ ಇವರಿಗೆ ಸಹಕಾರ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಧನ್ಯವಾದಗಳು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ಈ ಸದನಕ್ಕೆ ನಾನು 3ನೇ ಬಾರಿಗೆ ಶಾಸಕನಾಗಿ ಆಯ್ಕೆಯಾಗಿದ್ದೇನೆ. ಪ್ರಾರಂಭದಲ್ಲಿ ನಾನು ಬಂದಂತಹ ಸಂದರ್ಭದಲ್ಲಿ ಮಾನ್ಯ ನಾಣಯ್ಯನವರಂತಹ ಹಿರಿಯರು ಈ ಸದನದಲ್ಲಿದ್ದರು. ಅವರು ಯಾವಾಗಲೂ ನಮ್ಮನ್ನೆಲ್ಲಾ ಕರೆದು, ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಕೂಡ ಪೀಠವನ್ನು ಗೌರವಿಸುವ ಗುಣಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಹೇಳುತ್ತಿದ್ದರು. ನಿಮ್ಮ ಭಾವನೆಗಳು ಏನೇ ಇರಬಹುದು, ಅಂತಿಮವಾಗಿ ಪೀಠ ಕೊಟ್ಟಂತಹ ಆದೇಶಗಳನ್ನು ಅನುಷ್ಠಾನ ಮಾಡಿದರೆ ಮಾತ್ರ ಶಾಸಕನೊಬ್ಬ ತನ್ನ ಜವಾಬ್ದಾರಿಗಳನ್ನು ಪೂರ್ಣಗೊಳಿಸಿದಂತಾಗುತ್ತದೆ ಎನ್ನುವ ಮಾತನ್ನು ನಾನು ಸಹ ಹೇಳುತ್ತೇನೆ. ಇಡೀ ಭಾರತ ದೇಶದಲ್ಲಿ ಹೆಚ್ಚು ಕಡಿಮೆ ಶತಮಾನದ ಇತಿಹಾಸ ಇರುವ ಯಾವುದಾದರೂ ಒಂದು ಸದನ ಇದ್ದರೆ ಅದು ಕರ್ನಾಟಕ ರಾಜ್ಯದ ಮೇಲ್ಮನೆ ಎನ್ನುವ ಮಾತನ್ನು ಮಾನ್ಯ ನಾಣಯ್ಯನವರು ಯಾವಾಗಲೂ ಹೇಳುತ್ತಿದ್ದರು.

(ಮುಂದು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(107) 06-07-2018/1-20/ಕೆಹೆಚ್/ಎಕೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು)**:- ಆದರೆ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಗಳು ನಿರಂತರವಾದಂತಹ ಆಡಳಿತ ಪಕ್ಷದ ಕಾರ್ಯವೈಖರಿ ಬಗ್ಗೆ ಕಣ್ಗಾವಲು ಮಾಡುತ್ತಿರಬೇಕೆನ್ನುವಂತಹ ಒಂದು ನಿಯಮವಿದೆ. ಸಾರ್ವತ್ರಿಕವಾಗಿ ಬಂದಂತಹ ಚರ್ಚೆಗಳು, ಮಾಧ್ಯಮದಲ್ಲಿ ಬಂದಿರುವಂತಹ

ಸುದ್ಧಿಗಳು, ಇತಿಹಾಸವಿರುವಂತಹ ಮೇಲ್ಮನೆಯ ಸದನದ ಪರಮೋಚ್ಛ ಪೀಠದ ಬಗ್ಗೆ ಚರ್ಚೆಯಾಗುವಾಗ ಸಾರ್ವಜನಿಕರ ಆತಂಕಗಳನ್ನು ನಿವಾರಿಸುವಂತಹ ಅನಿವಾರ್ಯ ಮತ್ತು ಗುರುತರವಾದ ಜವಾಬ್ದಾರಿ ವಿರೋಧ ಪಕ್ಷಕ್ಕೆ ಇರುವುದರಿಂದ ನಮ್ಮ ಸದಸ್ಯರು ಸದನದ ಮೂಲಕ ಸರ್ಕಾರಕ್ಕೆ ಸ್ಪಷ್ಟೀಕರಣವನ್ನು ಕೇಳುತ್ತಿದ್ದಾರೆ. ಇದರ ಬಗ್ಗೆ ಚರ್ಚೆಯು ಬಹಳ ವಿಸ್ತಾರವಾಗಿದೆ. ನಾನು ಒಂದು ಪೀಠದ ಬಗ್ಗೆ ಹೇಳುತ್ತಿರುವುದಲ್ಲ. ಪ್ರತಿ ಮಾತಿನಲ್ಲೂ ಕೂಡ ಪೀಠ ಮತ್ತು ಆ ಪೀಠದಲ್ಲಿರುವ ನಿಮ್ಮ ಬಗ್ಗೆ ಪೂರ್ಣ ಗೌರವದ ಶಬ್ಧಗಳನ್ನು ಬಳಸಿ, ಪೀಠಕ್ಕೆ ಮುಜುಗರವಾಗದಿರುವಂತೆ ಈ ಚರ್ಚೆಯನ್ನು ನಾವು ಪ್ರಾರಂಭ ಮಾಡಿದ್ದೇವೆ. ಒಂದಿಷ್ಟು ಪ್ರೀತಿಯಿಂದ ಕಾನೂನು ಸಚಿವರಿಗೆ ಹೇಳುವುದಾದರೆ ತಾವೇನಾದರೂ ಪ್ರಯತ್ನಪಟ್ಟಿದ್ದರೆ take off ಆದಂತಹ ಸರ್ಕಾರ ಒಂದು, ಈ ಕೊನೆಗಳಗೆಯವರೆಗೂ ಕೂಡ ಸಭಾಪತಿಯವರ ಆಯ್ಕೆಗೋಸ್ಕರ ಕಾಯುವಂತಹ ಅಗತ್ಯವಿರಲಿಲ್ಲವೆಂದು ನಮಗೆ ಅನಿಸಿತ್ತು. ಆದರೆ ಇವತ್ತಿನ ದಿವಸ ಇದರ ಬಗ್ಗೆ ಸಾಕಷ್ಟು ಬಿಸಿ ಬಿಸಿ ಚರ್ಚೆಗಳು ನಡೆಯುತ್ತಿದೆ. ಮಾನ್ಯ ಸಂಸದೀಯ ವ್ಯವಹಾರ ಮಂತ್ರಿಗಳು ವಿರೋಧ ಪಕ್ಷದ ಸದಸ್ಯರು ಇದಕ್ಕೆ ಸಹಕಾರ ಕೊಡಬೇಕೆನ್ನುವಂತಹ ಮಾತುಗಳನ್ನು ಹೇಳಿದ್ದಾರೆ. ಆದ್ದರಿಂದ ನಾನು ಇದನ್ನು ದೀರ್ಘವಾಗಿ ಬೆಳೆಸುವುದಕ್ಕೆ ಹೋಗುವುದಿಲ್ಲ. ತಮ್ಮ ಬಗ್ಗೆ ಮತ್ತು ಪೀಠದ ಬಗ್ಗೆ ವಿರೋಧ ಪಕ್ಷವು ಸೇರಿದಂತೆ ಎಲ್ಲಾ ಸದಸ್ಯರಿಗೂ ಅಪಾರವಾದಂತಹ ಗೌರವ, ಅಭಿಮಾನ ಮತ್ತು ಹೆಮ್ಮೆ ಇದೆ ಎನ್ನುವ ಕಾರಣಕ್ಕೆ ಮತ್ತು ಈ ಸದನದ ಪೂರ್ಣ ಕಾರ್ಯಕಲಾಪಗಳು ಯಶಸ್ವಿಯಾಗಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಡೆಯಬೇಕೆನ್ನುವ ಕಾರಣಕ್ಕೆ ಪೀಠದ ಆಡಳಿತಾತ್ಮಕ ವ್ಯವಸ್ಥೆಗೆ ನಾವು ಪೂರ್ಣ ಸಹಕಾರವನ್ನು ಕೊಡುತ್ತೇವೆಂದು ಹೇಳಿ ನಾನು ಧನ್ಯವಾದವನ್ನು ಹೇಳಬಯಸುತ್ತೇನೆ.

**ಸಭಾಪತಿಯವರು**:- ಮಾನ್ಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್‌ರವರು ಈ ವಿಷಯವನ್ನು ಪ್ರಸ್ತಾಪಿಸಿದಾಗ, ಅದು ಈ ನಾಡಿನ ಎಲ್ಲಾ ಜನರಿಗೂ ಗೊತ್ತಾಗಲಿ ಮತ್ತು ಇದರ ಬಗ್ಗೆ ಚರ್ಚೆಯಾಗಲಿ, ಅದಕ್ಕೆ ನಾವು ನೋಟಿಸ್‌ನ್ನು ಕೊಡಿ ಎಂದು ಹೇಳಬಹುದಾಗಿತ್ತು ಅಥವಾ ಇದನ್ನು ತಿರಸ್ಕಾರ ಮಾಡಬಹುದಾಗಿತ್ತು. ಈ ಸ್ಥಾನ ಯಾರದೋ ಒಬ್ಬ ವ್ಯಕ್ತಿಯದಲ್ಲ. ಈ ಸ್ಥಾನ ಬಹಳ ಮಹತ್ವದ್ದು. ಅನೇಕ ಸಾರಿ ನಮ್ಮ ಸದನದಲ್ಲಿ ರಾಜೀನಾಮೆ ಕೊಟ್ಟಾಗ, ಅವರನ್ನು ಕೆಳಗಿಳಸಲು ನಾನು ಅಲ್ಲಿ ಕುಳಿತುಕೊಂಡು ವಿರೋಧವನ್ನು ಮಾಡಿದ್ದೇನೆ. ತನ್ನದೇ ಆದಂತಹ ಘನತೆ-ಗೌರವವನ್ನು ಇಟ್ಟುಕೊಂಡಿರಬೇಕು. ಕೆಲವೊಮ್ಮೆ ನಾವು ಭಾರತ ದೇಶದಲ್ಲಿನ ಬೇರೆ ಬೇರೆ ರಾಜ್ಯದಲ್ಲಿರುವ Sister Committees ಗಳಿಗೆ ಭೇಟಿ ಕೊಡುತ್ತೇವೆ. ಹಾಗೆಯೇ ಒಂದು ಬಾರಿ ಕಾಶ್ಮೀರಕ್ಕೆ ಹೋದಾಗ ನಮ್ಮ ಸದನದ ಬಗ್ಗೆ ಬಹಳ ಉತ್ತಮವಾದಂತಹ ಮಾತುಗಳನ್ನು ಅಲ್ಲಿಯವರೂ ಮಾತನಾಡಿದ್ದರು. ಸದನದ ಘನತೆ-ಗೌರವ ಉಳಿಯಬೇಕು ಮತ್ತು ಇದರಲ್ಲಿರುವ ವ್ಯಕ್ತಿಯು ಬಹಳ ಮುಖ್ಯವಾಗಿರಬೇಕು. ಆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿನ್ನಲೆಯಲ್ಲಿ ಇದರ ಬಗ್ಗೆ ಎಲ್ಲಾ ಸದಸ್ಯರು ಚರ್ಚೆ ಮಾಡಿದ್ದಾರೆ. ಆದ್ದರಿಂದ ನಾನು ಇಡೀ ಸದನದ ಸದಸ್ಯರಿಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಇದರ ಬಗ್ಗೆ ಎಲ್ಲರಿಗೂ ಗೊತ್ತಿರಬೇಕು ಮತ್ತು ಚರ್ಚೆಯಾಗಬೇಕು. ಇದರ ಬಗ್ಗೆ ಮಾಧ್ಯಮಗಳು ಕೇಳಿದಾಗ ನಾನು ಇಲ್ಲೇ ಕುಳಿತುಕೊಂಡರೆ ನಾನು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆಂಬ ಒಂದು ಮಾತನ್ನು ಹೇಳಿದ್ದೇನೆ. ಇದರ ಬಗ್ಗೆ ಪತ್ರಿಕೆಯಲ್ಲಿಯೂ ಕೂಡ ಬಂದಿದೆ. ಈ ಪೀಠದಲ್ಲಿ ಕುಳಿತುಕೊಂಡಂತಹವರು ಪ್ರಾಮಾಣಿಕವಾಗಿ, ನಿಷ್ಪಕ್ಷಪಾತವಾಗಿ ಕೆಲಸ ಮಾಡಬೇಕು. ಈ ಪೀಠದಲ್ಲಿ ಕುಳಿತವರೇನು ದೇವರಲ್ಲ, ಒಂದೊಂದು ಬಾರಿ ಹೆಚ್ಚು-ಕಡಿಮೆಯಾಗುತ್ತದೆ. ಆದರೂ ಪ್ರತಿಯೊಂದು ಹಂತದಲ್ಲೂ ಎರಡು-ಮೂರು ತಾಸು ಕುಳಿತುಕೊಂಡು ಸಂಬಂಧಪಟ್ಟ ವಿಷಯದ ಬಗ್ಗೆ ಓದಿಕೊಂಡು ಬಂದು, ಯಾರ ಮನಸ್ಸಿಗೂ ನೋವಾಗುವಂತಹದ್ದಾಗಲಿ, ಮತ್ತೊಂದಾಗಲಿ ಆಗದಂತೆ ರೂಲಿಂಗ್ಸ್ ನೀಡುವ ಸತ್ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋಗಬೇಕು. ಉತ್ತಮವಾದಂತಹ ನಡವಳಿಕೆ ಹೊಂದಿದ ಈ ದೇಶದಲ್ಲಿ ಮಾದರಿಯಾದಂತಹ ಸದನವು ನಮ್ಮದಾಗಲಿ. ಕಳೆದ 38 ವರ್ಷಗಳಿಂದ ಈ ಸದನದಲ್ಲಿ ಕುಳಿತಾಗ ಈ ಸದನದ ಬಗ್ಗೆ ಅಪಾರವಾದ ಗೌರವ ಮತ್ತು ಕಾಳಜಿ ನಮಗಿರುವುದರಿಂದ, ಇವತ್ತಿನ ದಿವಸ ಎಲ್ಲಾ ಸದಸ್ಯರು ಸೇರಿಕೊಂಡು ಇದನ್ನು ಎತ್ತಿ ಹಿಡಿದಿದ್ದೀರಿ. ಸಂಪೂರ್ಣವಾಗಿ ಸದನದ ಎಲ್ಲಾ ಸದಸ್ಯರಿಗೆ ನಾನು ಗೌರವಪೂರ್ವಕವಾಗಿ ಅಭಿನಂದನೆಯನ್ನು ಮತ್ತು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಇದೇ ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋಗೋಣವೆಂದು ಹೇಳಿ ತಮಗೆಲ್ಲರಿಗೂ ಅಭಿನಂದನೆಯನ್ನು ಸಲ್ಲಿಸುತ್ತೇನೆ.

## 2. ನಿಯಮ 330ಎ ರ ಮೇರೆಗೆ ವಿಶೇಷ ಪ್ರಸ್ತಾವಗಳು

ಅ) ಚನ್ನಪಟ್ಟಣ ತಾಲ್ಲೂಕಿನ ಕಣ್ವ ಯೋಜನೆಯಲ್ಲಿ ದಶವಾರ ಮಾರ್ಗವಾಗಿ ಹಾದು ಹೋಗುವ ಗ್ರಾಮಗಳ ನೀರಾವರಿ ಕಾಲುವೆ ವ್ಯವಸ್ಥಿತವಾಗಿ ನಿರ್ಮಾಣ ಮಾಡದೇ ಇರುವ ಬಗ್ಗೆ.

***

**ಶ್ರೀ ಕೆ.ಪಿ. ನಂಜುಂಡಿ ವಿಶ್ವಕರ್ಮ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಚನ್ನಪಟ್ಟಣ ತಾಲ್ಲೂಕಿನ ಕಣ್ವ ಯೋಜನೆಯಲ್ಲಿ ಕಣ್ವ ಜಲಾಶಯದಿಂದ ದಶವಾರ ಮಾರ್ಗವಾಗಿ ಚಿಕ್ಕೇನಹಳ್ಳಿ, ನಾಗವಾರ, ಬೇವೂರು ಸೇರಿದಂತೆ ಹತ್ತಾರು ಗ್ರಾಮಗಳನ್ನು ಹಾದು ಹೋಗುವ ಸುಮಾರು 30 ಕಿ.ಮೀ ಅಧಿಕ ದೂರ ನಿರ್ಮಿಸಿರುವ ನೀರಾವರಿ ಕಾಲುವೆ ವ್ಯವಸ್ಥಿತವಾಗಿ ನಿರ್ಮಾಣ ಮಾಡದೇ ಇರುವುದರಿಂದ ಕಾಲುವೆ ಇದ್ದರೂ ಅದರ ಉಪಯೋಗ ಆ ಭಾಗದ ರೈತರಿಗೆ ದೊರೆಯುತ್ತಿಲ್ಲ. ಸಾವಿರಾರು ರೈತ ಕುಟುಂಬಗಳ ವ್ಯವಸಾಯಕ್ಕೆ ಆಧಾರ ಸ್ತಂಭವಾಗಿ ನಿರುಣಿಸುತ್ತಿದ್ದ ಕಾಲುವೆ ಇಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದುರಸ್ತಿಯಿಂದಾಗಿ ತೀರಾ ಅವ್ಯವಸ್ಥೆಯಿಂದ ಕೂಡಿರುವುದು ದುರಂತವೇ ಸರಿ. ಕಣ್ವ ಕಾಲುವೆ ಹಾದು ಹೋಗುವ ದಶವಾರ ಗ್ರಾಮದ ಸೇತುವೆ ಕುಸಿಯುವ ಹಂತದಲ್ಲಿದ್ದು ಈ ಸೇತುವೆಯು ದಶಾವರ-ಕಣ್ವ-ಕ್ಯಾಸಪುರ ಮಾರ್ಗವಾಗಿ ಮಾಗಡಿ ಮತ್ತು ರಾಮನಗರಕ್ಕೆ ಸಂಪರ್ಕ ಕಲ್ಪಿಸುತ್ತಿದ್ದು ಸೇತುವೆಯು ಸಂಪೂರ್ಣ ಅಪಾಯದ ಅಂಚಿನಲ್ಲಿದೆ. ಈ ಸೇತುವೆಯಿಂದ ದುರ್ಘಟನೆ ಸಂಭವಿಸುವ ಮುನ್ನ ದುರಸ್ತಿಗೊಳಿಸುವ ಬಗ್ಗೆ ಮತ್ತು ರೈತ ಪರ ಎಂದು ಹೇಳಿಕೊಳ್ಳುವ ಈ ಸರ್ಕಾರವು ಕೆರೆ ತುಂಬಿಸುವ ಯೋಜನೆಯ ಅಡಿಯಲ್ಲಿ ಕಣ್ವ ಜಲಾಶಯವನ್ನು ಪರಿಗಣಿಸಿ ದುರಸ್ತಿಯಲ್ಲಿರುವ ನೀರಾವರಿ ಕಾಲುವೆಗಳನ್ನು ದುರಸ್ತಿಗೊಳಿಸಿ ಆ ಭಾಗದ ರೈತರಿಗೆ, ಸಾಕು ಪ್ರಾಣಿಗಳಿಗೆ ಅನುಕೂಲ ಮಾಡಿಕೊಡುವಂತೆ ನಿಯಮ 330ಎ ರ ಅನ್ವಯ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಸಿ.ಎಸ್.ಪುಟ್ಟರಾಜು (ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ವಿಷಯವು ಮಾನ್ಯ ಭಾರಿ ನೀರಾವರಿ ಸಚಿವರಿಗೆ ಬರುವಂತಹ ಹಿನ್ನಲೆಯಲ್ಲಿ ಈ ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತಂದು, ಇದರ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಮಾನ್ಯ ಸದಸ್ಯರ ಪರವಾಗಿ ಮಾನ್ಯ ಭಾರಿ ನೀರಾವರಿ ಸಚಿವರಿಗೆ ತಿಳಿಸುತ್ತೇನೆ.

ಆ) ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಆನ್‌ಲೈನ್‌ನಲ್ಲಿ ಆಸ್ತಿ ನೋಂದಣಿ ಪ್ರಕ್ರಿಯೆ ಕುರಿತು.

***

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ರಾಜ್ಯ ಸರ್ಕಾರ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಜಾರಿಗೆ ತಂದಿರುವ ಆನ್‌ಲೈನ್‌ನಲ್ಲಿ ಆಸ್ತಿ ನೋಂದಣಿ ಪ್ರಕ್ರಿಯೆ ರಾಜ್ಯದ ಜನರನ್ನು ದಿಕ್ಕು ತಪ್ಪಿಸುತ್ತಿದೆ. ಆನ್‌ಲೈನ್‌ನಲ್ಲೇ ಆಸ್ತಿ ನೋಂದಣಿ ಮಾಡಲು ನೊಂದಣಿ, ಮತ್ತು ಮುದ್ರಾಂಕ ಇಲಾಖೆಯ ಆಯುಕ್ತರು ಹೊಸ ವೆಬ್‌ಸೈಟ್‌ನ್ನು ಅಳವಡಿಸಿದ್ದು, ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಮತ್ತು ವಂಚನೆ ಕೋರರ ಜಾಲವು ಬೆಂಗಳೂರಿನಾದ್ಯಂತ ಹರಡಿಕೊಂಡಿದ್ದು, ಸಾರ್ವಜನಿಕರ ಆಸ್ತಿ ವಂಚನೆ ಮಾಡಿ ನೋಂದಾಯಿಸುವ ಜಾಲವು ಕಂಡು ಬಂದಿರುವುದು ಬಹಳ ಖೇದಕರ. ವಿಜಯನಗರ ವ್ಯಾಪ್ತಿಯಲ್ಲಿ ಬರುವ ಆಸ್ತಿಯನ್ನು ದಾಸನಪುರ, ನಾಗರಭಾವಿ, ಯಶವಂತಪುರ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ನೊಂದಾಯಿಸುತ್ತಾರೆ. ಈ ಸಂದರ್ಭದಲ್ಲಿ ಕೆಲವು ಸಂಚುಕೋರರು ನಕಲಿ ದಾಖಲೆ ಸೃಷ್ಟಿಸಿ ಬೇರೊಬ್ಬರ ಆಸ್ತಿಯನ್ನು ಇನ್ಯಾರಿಗೋ ನೋಂದಾವಣೆ ಮಾಡಿ ಜನರ ದಾರಿಯನ್ನು ತಪ್ಪಿಸುತ್ತಿದ್ದಾರೆ. ಹೊಸ ವ್ಯವಸ್ಥೆಯಿಂದ ನಾಗರಿಕರಿಗೆ ಸರ್ಕಾರವೇ ಅನ್ಯಾಯ ಮಾಡಲು ಪರೋಕ್ಷವಾಗಿ ವಂಚನೆ ಮಾಡಲು ಸಹಕರಿಸಿದಂತಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೋಂದಣಿ ಕಾಯ್ದೆ 1908ಕ್ಕೆ ಭಾರತ ಸರ್ಕಾರ ತಿದ್ದುಪಡಿ ತರಬೇಕು, ಆದರೂ ರಾಜ್ಯ ಸರ್ಕಾರ ಕೆಲವೊಂದು ನಿಯಮಗಳನ್ನು ಕಠಿಣ ಮಾಡದೇ ತನ್ನ ಅನುಕೂಲಕ್ಕೆ ತಕ್ಕಂತೆ ಡವಲಪರ್ ಮತ್ತು ಖಾಸಗಿ ವ್ಯಕ್ತಿಗಳಿಗೆ ಅನುಕೂಲವಾಗಲು ಆನ್‌ಲೈನ್ ವ್ಯವಸ್ಥೆ ಜಾರಿಗೆ ತಂದಿರುತ್ತಾರೆ. ಈ ಪ್ರಕ್ರಿಯೆಯಲ್ಲಿ ಆಧಾರ್ ಕಾರ್ಡ್, ಪಾನ್ ಕಾರ್ಡ್, ಚುನಾವಣೆ ಗುರುತಿನ ಚೀಟಿ, ಪಾಸ್‌ಪೋರ್ಟ್ ಅಥವಾ ಇತರೆ ದಾಖಲೆಗಳನ್ನು ನೋಂದಣಿ ಮಾಡುವಾಗ ಜೋಡಣೆ ಮಾಡಿದರೆ ಸಾರ್ವಜನಿಕರಿಗೆ ವಂಚನೆಯಾಗುವುದನ್ನು ತಪ್ಪಿಸಬಹುದು.

ಈಗಾಗಲೇ ಬೆಂಗಳೂರಿನಲ್ಲಿ ಒಬ್ಬ ವ್ಯಕ್ತಿಯು ಒಂದು ಆಸ್ತಿಯನ್ನು ಮೂರು ಬಾರಿ ನೋಂದಣಿಯನ್ನು ಆನ್‌ಲೈನ್‌ನಲ್ಲಿ ಮಾಡಿರುತ್ತಾರೆ. ಆದುದರಿಂದ ಆನ್‌ಲೈನ್‌ನಲ್ಲಿ ಆಸ್ತಿ ನೋಂದಣಿ ಮಾಡುವಾಗ, ಸಾರ್ವಜನಿಕರು ವಂಚನೆಗೆ ಒಳಗಾಗದಂತೆ ಪೂರಕ ದಾಖಲೆಗಳನ್ನು ಜೋಡಣೆ ಮಾಡಿಕೊಂಡು ಆಸ್ತಿ ನೊಂದಣಿ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳಬೇಕಾಗಿ ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

**ಡಾ|| ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರಿಂದ ಉತ್ತರವನ್ನು ಒದಗಿಸಿಕೊಡುತ್ತೇನೆ.

(ಮುಂದು)

**(108)06/07/2018/ಎಸ್‌ಪಿಆರ್/ಆರ್‌ಎನ್./1:30**

**ಇ) ರಾಜ್ಯದ 27 ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳ ಸಮವಸ್ತ್ರ ವಿತರಣೆ ಕುರಿತು**

* * *

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ 27 ಜಿಲ್ಲೆಗಳಲ್ಲಿ "ಹಳತಪ್ಪಿದ ಸಮವಸ್ತ್ರ ವಿತರಣೆ" "ವಿದ್ಯಾರ್ಥಿಗಳಿಗೆ ಇನ್ನೂ ಸಿಗದ ಯೂನಿಫಾರ್ಮ್" ಎಂಬ ತಲೆಬರಹದಡಿ ಪತ್ರಿಕೆಯೊಂದು ಮುಖಪುಟದಲ್ಲಿ ಶಾಲಾ ಮಕ್ಕಳ ಸಮವಸ್ತ್ರದ ಬಗ್ಗೆ ವರದಿಯೊಂದನ್ನು ಪ್ರಕಟಿಸಿದೆ. ಶಾಲೆ ಪ್ರಾರಂಭವಾಗಿ ಒಂದು ತಿಂಗಳು ಮುಗಿಯುತ್ತಾ ಬಂದರೂ ಪೂರ್ವಭಾವಿ ಸಿದ್ಧತೆಯ ಕೊರತೆಯಿಂದ ಮಕ್ಕಳಿಗೆ ಸಮವಸ್ತ್ರ ವಿತರಣೆ ಮಾಡುತ್ತಿಲ್ಲ. ಕೆಲವು ಜಿಲ್ಲೆಗಳಲ್ಲಿ ಸಮವಸ್ತ್ರ ವಿತರಣೆಯ ಟೆಂಡರ್ ಪ್ರಾರಂಭವಾಗಿಲ್ಲ. ಎಷ್ಟು ನಿರ್ಲಕ್ಷ್ಯ ವಹಿಸಲಾಗುತ್ತಿದೆ ಎಂದರೆ ಶಿವಮೊಗ್ಗ ಜಿಲ್ಲೆಯ ಪ್ರೌಢಶಾಲೆಯ ಬಾಲಕರಿಗೆ ಸಮವಸ್ತ್ರ ನೀಡಲಾಗಿದೆ. ಆದರೆ ಉಳಿದ 17,000 ವಿದ್ಯಾರ್ಥಿಗಳ ಪೈಕಿ ಒಂದೇ ಒಂದು ಮಗುವಿಗೆ ಸಮವಸ್ತ್ರ ನೀಡಿಲ್ಲ. ಕೋಲಾರ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಬಾಲಕಿಯರಿಗೆ ಸಮವಸ್ತ್ರ ನೀಡಲಾಗಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.

ಮೈಸೂರು, ಹಾಸನ, ಮಂಡ್ಯ, ಕೊಡಗು ಮುಂತಾದ 16 ಜಿಲ್ಲೆಗಳಲ್ಲಿ ಸಮವಸ್ತ್ರ ಕೊಡಲು ಪ್ರಾರಂಭವಾಗಿಲ್ಲ. ತುಮಕೂರು, ಕೋಲಾರ, ಬೆಂಗಳೂರು ಗ್ರಾಮಾಂತರ ಸೇರಿದಂತೆ 11 ಜಿಲ್ಲೆಗಳಲ್ಲಿ ಭಾಗಶಃ ಸಮವಸ್ತ್ರ ಕೊಟ್ಟ ಸುದ್ದಿ ಇದೆ. ಒಂದೊಂದು ಜಿಲ್ಲೆಗಳಲ್ಲಿ ಒಂದೊಂದು ಕಾರಣ ಹೇಳುವ ಜಿಲ್ಲಾಧಿಕಾರಿಗಳು ಇನ್ನೂ ಕೂಡ ಸಮವಸ್ತ್ರ ನೀಡುವ ಟೆಂಡರ್ ಪ್ರಕ್ರಿಯೆಯನ್ನು ಮುಗಿಸುವ ಸ್ಥಿತಿಯೂ ಕಂಡು ಬರುತ್ತಿಲ್ಲ. ಪ್ರತಿ ವರ್ಷ ಶಾಲೆ ಆರಂಭವಾಗುವ ಮೊದಲೇ ಪೂರ್ವಸಿದ್ಧತೆ ಮಾಡಿಕೊಂಡು ಸಮವಸ್ತ್ರ ಪೂರೈಸಲಾಗಿದೆ ಎಂದು ಹಿಂದೆ ಘೋಷಿಸಿದ ಸಾರ್ವಜನಿಕ ಶಿಕ್ಷಣ ಇಲಾಖೆ ಈ ಹಿಂದೆಯೂ ಮಾತನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಇಲಾಖೆಯಲ್ಲಿನ ಸಮವಸ್ತ್ರ ಕೊರತೆ ಮತ್ತು ಸಮವಸ್ತ್ರ ವಿತರಣೆಯಲ್ಲಿ ಅಡಗಿರುವ ವ್ಯವಹಾರದ ಹೊಸಕ್ರಮ ಏನೆಂದು ಗೊತ್ತಾಗುತ್ತಿಲ್ಲ. ಇಂದು ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳು ಕಳೆದ ವರ್ಷ ನೀಡಿದ್ದ ಹಳೆಯದಾದ ಹರಿದುಹೋದ ಸಮವಸ್ತ್ರವನ್ನು ಧರಿಸಿ ಶಾಲೆಗೆ ಹೋಗುತ್ತಿದ್ದಾರೆ. ರಾಜ್ಯದ ಸುಮಾರು ಒಂದು ಕೋಟಿ ಶಾಲಾ ಮಕ್ಕಳಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಕಲಿಯುತ್ತಿರುವ 66 ಲಕ್ಷ ವಿದ್ಯಾರ್ಥಿಗಳ ಸಮವಸ್ತ್ರದ ನಿರೀಕ್ಷೆಯಲ್ಲಿದ್ದರೆ ಇನ್ನೂ ಬಡ ವಿದ್ಯಾರ್ಥಿಗಳ ಮಕ್ಕಳ ಬೇಡಿಕೆ ಈಡೇರಿಲ್ಲ.

ತಕ್ಷಣ ಈ ಬಗ್ಗೆ ಶಿಕ್ಷಣ ಇಲಾಖೆ ತುರ್ತು ಕ್ರಮ ಕೈಗೊಳ್ಳಬೇಕು ಮತ್ತು ವರದಿಯಲ್ಲಿ ತಿಳಿಸಿರುವಂತೆ ವ್ಯವಹಾರಿಕ ಯೋಜನೆಯನ್ನು ಬಿಟ್ಟು ಶಾಲಾ ಮಕ್ಕಳಿಗೆ ಸಮವಸ್ತ್ರ ನೀಡಬೇಕೆಂದು ಈ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಎನ್.ಮಹೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**:-ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯವು ಈಗ ನನ್ನ ಗಮನಕ್ಕೆ ಬಂದಿರುವುದರಿಂದ, ಮಾಹಿತಿಯನ್ನು ಸಂಗ್ರಹಿಸಿ ಉತ್ತರವನ್ನು ಒದಗಿಸಲಾಗುವುದು.

**ಈ) ಶ್ರೀ ಕೃಷ್ಣೇಗೌಡ, ಇಲಿಯಾಜ್ ನಗರ, ಬೆಂಗಳೂರು ಶಾಶ್ವತವಾಗಿ ಅಂಗವಿಕಲನಾಗಿರುವುದರಿಂದ ಜೀವನೋಪಾಯಕ್ಕೆ ಬನಶಂಕರಿ 2ನೇ ಹಂತದಲ್ಲಿರುವ ಬಿಡಿಎ ಸಂಕೀರ್ಣದಲ್ಲಿ ಮಳಿಗೆ ಹಂಚಿಕೆ ಮಾಡುವ ಬಗ್ಗೆ**

* * *

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ತಾರಾಅನೂರಾಧ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಬಿಡಿಎ ಯಲ್ಲಿ ಅಂಗವಿಕಲರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಬೆಳಕನ್ನು ಚೆಲ್ಲಲು ಅವಕಾಶವನ್ನು ನೀಡಿದ್ದಕ್ಕಾಗಿ ಧನ್ಯವಾದಗಳು.

ಶ್ರೀ ಕೃಷ್ಣೇಗೌಡ ಎಂಬ ವ್ಯಕ್ತಿ 10 ವರ್ಷಗಳ ಹಿಂದೆ ಅಪಘಾತದಲ್ಲಿ ಎರಡೂ ಕಾಲುಗಳನ್ನು ಕಳೆದುಕೊಂಡು ಶಾಶ್ವತವಾಗಿ ಅಂಗವಿಕಲನಾಗಿದ್ದು, ಜೀವನೋಪಾಯಕ್ಕಾಗಿ ಮಾನವೀಯತೆ ದೃಷ್ಟಿಯಿಂದ ಒಂದು ಮಳಿಗೆ ನೀಡಬೇಕೆಂದು ಕೋರಿ, ಬಿಡಿಎ ಗೆ ದಿನಾಂಕ 25/04/2011 ರಂದು ಅರ್ಜಿ ಸಲ್ಲಿಸಿದ್ದರು. ಮೂಲತಃ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನವರಾದ ಕೃಷ್ಣೇಗೌಡ ಹುಟ್ಟು ಅಂಗವಿಕಲರಲ್ಲ. ಅವರು ಪ್ರಸ್ತುತ ಬೆಂಗಳೂರು ನಗರದ ಇಲಿಯಾಜ್ ನಗರದಲ್ಲಿ ವಾಸಿಸುತ್ತಿದ್ದಾರೆ. 10 ವರ್ಷಗಳ ಹಿಂದೆ ನಡೆದ ರಸ್ತೆ ಅಪಘಾತದಲ್ಲಿ ಅವರು ತಮ್ಮ ಎರಡೂ ಕಾಲುಗಳನ್ನು ಕಳೆದು ಕೊಳ್ಳುವಂತಾಯಿತು. ಇದರಿಂದಾಗಿ ಮಗಳು ಶಾಲೆ ಬಿಟ್ಟಳು, ಮಗನು ಕಷ್ಟಪಟ್ಟು ಎಸ್.ಎಸ್.ಎಲ್.ಸಿ. ವ್ಯಾಸಂಗ ಮಾಡುತ್ತಿದ್ದಾನೆ. ಪತ್ನಿ ಕೂಲಿ ಮಾಡಿ ಬಂದ ಆದಾಯದಲ್ಲಿ ಜೀವನ ಮಾಡುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಶ್ರೀ ಯಡ್ಡಿಯೂರಪ್ಪನವರು ಮುಖ್ಯ ಮಂತ್ರಿಯಾಗಿದ್ದಾಗ ಕೃಷ್ಣೇಗೌಡ ಅವರ ಜೀವನೋಪಾಯಕ್ಕಾಗಿ ಬಿಡಿಎಯಲ್ಲಿ ಲಭ್ಯವಿರುವ ಸಣ್ಣ ಮಳಿಗೆಯೊಂದನ್ನು ಹಂಚಿಕೆ ಮಾಡಲು ಸೂಚಿಸಿದ್ದರು. ಬಿಡಿಎ ಸಭೆ ನಡೆಸಿ ಕೃಷ್ಣೇಗೌಡರಿಗೆ ಬನಶಂಕರಿ 2ನೇ ಹಂತದ ಬಿಡಿಎ ಸಂಕೀರ್ಣದ 81 ನಂಬರ್ ಮಳಿಗೆಯನ್ನು ಗುರುತಿಸಿ, ಶೇಕಡ 80 ರಷ್ಟು ಅಂಗವಿಕಲರಾಗಿರುವ ಇವರಿಗೆ ಬಾಡಿಗೆ ದರದಲ್ಲಿ ಶೇಕಡ 10 ರಷ್ಟು ರಿಯಾಯಿತಿ ದರದಲ್ಲಿ ನೀಡುವಂತೆ ತೀರ್ಮಾನಿಸಿತು. ಆದರೆ ಇವರು ಶೇಕಡ 25 ರಷ್ಟು ರಿಯಾಯಿತಿ ನೀಡುವಂತೆ ಮನವಿ ಮಾಡಿದ್ದರು. ಆದರೆ ಇವರ ಅರ್ಜಿಯನ್ನು ಪರಿಶೀಲಿಸುವ ಹಂತದಲ್ಲೇ ಸದರಿ ಮಳಿಗೆಯನ್ನು ಮತ್ತೊಬ್ಬ ಆರ್ಥಿಕವಾಗಿ ಅನುಕೂಲಸ್ಥನಾದ ವ್ಯಕ್ತಿಗೆ ಹಂಚಿಕೆ ಮಾಡಿ ಬಿಡಿಎ ಕೈತೊಳೆದುಕೊಂಡಿತು. ಇವರಿಗೆ ಸದರಿ ಮಳಿಗೆ ಖಾಲಿ ಇಲ್ಲ, ಖಾಲಿಯಾದ ನಂತರ ನೋಡೋಣ ಎಂಬ ಬೇಜವಾಬ್ದಾರಿ ಉತ್ತರ ನೀಡುತ್ತಾ, ಏಳು ವರ್ಷಗಳ ಕಾಲ ತಳ್ಳಿದರು.

ಈ ನಡುವೆ ಕೃಷ್ಣೇಗೌಡರ ಸಂಬಂಧಿಕರೆ ಹೆಚ್.ಎಸ್.ಆರ್. ಬಡಾವಣೆಯ ಬಿಡಿಎ ಕಾಂಪ್ಲೆಕ್ಸ್‌ನಲ್ಲಿ 26ನೇ ಸಂಖ್ಯೆಯ ಮಳಿಗೆ ಖಾಲಿ ಇರುವುದು ಪತ್ತೆ ಮಾಡಿ ಪುನಃ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿದರು. ಈ ಮಳಿಗೆಯ ವಿಷಯಕ್ಕೆ ಸಂಬಂಧಿಸಿದಂತೆ "ಕೂಲ್ ಜಾಯಿಂಟ್ ಫಾಸ್ಟ್‌ಫುಡ್" ಎಂಬ ಸಂಸ್ಥೆಯು ತಮಗೆ ಆ ಮಳಿಗೆ ಹಂಚಿ ಮಾಡಬೇಕೆಂದು ಬಿಡಿಎ ವಿರುದ್ಧ ಕೋರ್ಟ್‌ನಲ್ಲಿ ದಾವೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೂಡಿದ್ದರು. ಆದರೆ ಈ ಪ್ರಕರಣದಲ್ಲಿ ಬಿಡಿಎ ಪರವಾಗಿಯೆ ದಿನಾಂಕ 21/10/2017 ರಂದು ಕೋರ್ಟ್‌ನಿಂದ ತೀರ್ಪು ಬಂದಿತು. ಆದುದರಿಂದ ಈ ಮಳಿಗೆ ಈಗಲೂ ಖಾಲಿ ಇದ್ದು ಇದನ್ನು ಬಾಡಿಗೆ ಕೊಟ್ಟಿದ್ದರೆ ಸುಮಾರು ಮೂರು ಲಕ್ಷ ರೂಪಾಯಿಗಳಷ್ಟು ಬಾಡಿಗೆ ಬಿಡಿಎಗೆ ಸಂದಾಯವಾಗುತ್ತಿತ್ತು. ಆದರೆ ಸದರಿ ಮಳಿಗೆಯನ್ನು ಈವರೆಗೆ ಯಾರಿಗೂ ಹಂಚಿಕೆ ಮಾಡದಿರುವುದು ಬಿಡಿಎ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಕನ್ನಡಿ ಹಿಡಿದಂತಾಗಿದೆ ಹಾಗೂ ಶೇಕಡ 80 ರಷ್ಟು ಅಂಗವಿಕಲನಾಗಿರುವ ವ್ಯಕ್ತಿಯೊಬ್ಬರಿಗೆ ಜೀವನ ಕಲ್ಪಿಸುವ ನಿಟ್ಟಿನಲ್ಲಿ ಮಾನವೀಯ ದೃಷ್ಟಿಯನ್ನು ತಾಳದೇ ಇರುವುದು ವಿಷಾದನೀಯ ಸಂಗತಿಯಾಗಿದೆ. ಇಂತಹ ಪ್ರಕರಣ ಒಂದು ಉದಾಹರಣೆ ಅಷ್ಟೇ.

ಆದುದರಿಂದ ಈ ವಿಷಯವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ, ಸದರಿ ಮಳಿಗೆಯನ್ನು ಅಂಗವಿಕಲ ವ್ಯಕ್ತಿಗೆ ಹಂಚಿಕೆ ಮಾಡಲು ಸರ್ಕಾರವನ್ನು ಆಗ್ರಹಪೂರ್ವಕವಾಗಿ ಒತ್ತಾಯಿಸುತ್ತೇನೆ ಹಾಗೂ ಇಂತಹ ಎಷ್ಟೋ ಪ್ರಕರಣಗಳು ಬಿಡಿಎಯಲ್ಲಿ ಇತ್ಯಾರ್ಥವಾಗದೇ ಉಳಿದಿದ್ದು, ಅವುಗಳ ಬಗೆಗೂ ಗಮನಹರಿಸಿ, ಅಂಗವಿಕಲರೆಲ್ಲರಿಗೂ ನ್ಯಾಯ ಒದಗಿಸಬೇಕೆಂದು ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

**ಡಾ|| ಜಯಮಾಲ ರಾಮಚಂದ್ರ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಂದ ಈ ವಿಚಾರದಲ್ಲಿ ಉತ್ತರವನ್ನು ತರಿಸಿ ಕೊಡಲಾಗುವುದು.

## 3.ಸಭೆಯ ಮುಂದಿಡಲಾದ ಕಾಗದ ಪತ್ರಗಳು

**(ಪಟ್ಟಿಯನ್ನು ಲಗತ್ತಿಸಿದೆ)**

## 4.*ವರದಿಗಳನ್ನೊಪ್ಪಿಸುವುದು*

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,

(1) ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯ ಸದಸ್ಯನಾದ ನಾನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 215 ರ ರೀತ್ಯ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ಭರವಸೆ ಸಂಖ್ಯೆ: 5356/2015 "ಬೆಂಗಳೂರು ನಗರದಲ್ಲಿ ದಿನಂಪ್ರತಿ ಸಂಗ್ರಹವಾಗುವ ತ್ಯಾಜ್ಯದ ವಿಂಗಡಣಾ ಕಾರ್ಯಕ್ಕೆ ಒತ್ತು ನೀಡಿ ತ್ಯಾಜ್ಯಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ಮರು ಬಳಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಳ್ಳುವ ನಿಟ್ಟಿನಲ್ಲಿ ಶಾಶ್ವತ ಪರಿಹಾರ ಕ್ರಮ ಕೈಗೊಳ್ಳುವ ಬಗ್ಗೆ" 2016-17 ನೇ ಸಾಲಿನ ಸರ್ಕಾರಿ ಭರವಸೆಗಳ ಸಮಿತಿಯ ವಿಶೇಷ ವರದಿ-1 ನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

(2)ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯ ಸದಸ್ಯನಾದ ನಾನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 215 ರ ರೀತ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ ಸಂಬಂಧಪಟ್ಟ ಭರವಸೆ ಸಂಖ್ಯೆ 5424/2014 "ಗದಗ ಜಿಲ್ಲೆಯ ಕಪ್ಪತ್ತಗುಡ್ಡದಲ್ಲಿ ವನ್ಯಜೀವಿಧಾಮ ಸ್ಥಾಪಿಸುವ ಬಗ್ಗೆ" 2016-17 ನೇ ಸಾಲಿನ ಸರ್ಕಾರಿ ಭರವಸೆಗಳ ಸಮಿತಿಯ ವಿಶೇಷ ವರದಿ-2 ನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು) (ಶ್ರೀ ಕೆ.ಬಿ.ಶಾಣಪ್ಪ ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, 2016-2017 ಹಾಗೂ 2017-2018 ನೇ ಸಾಲಿನ ಅಧೀನ ಶಾಸನ ರಚನಾ ಸಮಿತಿಯ 46 ನೇ ವರದಿಯನ್ನು ಈ ಸದನದ ಮುಂದೆ ಒಪ್ಪಿಸುತ್ತಿದ್ದೇನೆ.

**(ಮುಂದು)**

(109) 06-07-2018 01.40 ಬಿಎಸ್‌ಡಿ/ಆರ್‌ಎನ್

**5.ಚುನಾವಣಾ ಪ್ರಸ್ತಾವಗಳು**

**ಡಾ।। ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ,

ಅ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 259(1)ನೇ ನಿಯಮದ ಅನುಸಾರವಾಗಿ ಈ ಸಭೆ ಸರ್ಕಾರಿ ಭರವಸೆಗಳ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುವುದು.

ಆ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 250(1)ನೇ ನಿಯಮದ ಅನುಸಾರವಾಗಿ ಈ ಸಭೆ ಹಕ್ಕುಬಾಧ್ಯತಾ ಸಮಿತಿಗೆ ಏಳು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುವುದು.

ಇ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 349(2)ನೇ ನಿಯಮದ ಅನುಸಾರವಾಗಿ ಈ ಸಭೆ ವಸತಿ ಸಮಿತಿಗೆ ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುವುದು.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 259(1)ನೇ ನಿಯಮದ ಅನುಸಾರವಾಗಿ ಈ ಸಭೆ ಸದಸ್ಯರುಗಳ ಖಾಸಗಿ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುವುದು.

ಉ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 259(1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುವುದು.

ಊ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 259(1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಉದ್ಯಮಗಳ ಸಮಿತಿಗೆ ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುವುದು.

ಋ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 259(1)ನೇ ನಿಯಮದ ಅನುಸಾರವಾಗಿ ಈ ಸಭೆ ಅಧೀನ ಶಾಸನ ರಚನಾ ಸಮಿತಿಗೆ ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುವುದು.

ಎ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 259(1)ನೇ ನಿಯಮದ ಅನುಸಾರವಾಗಿ ಈ ಸಭೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುವುದು.

ಏ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 259(1)ನೇ ನಿಯಮದ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಗೆ ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 6. ಗಮನ ಸೆಳೆಯುವ ಸೂಚನೆಗಳು

ವಿಷಯಃ- ರಾಜ್ಯ ಸರ್ಕಾರವು ಹಿಂದುಳಿದ ವರ್ಗಗಳ ಇಲಾಖೆಗಳ ಮೂಲಕ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಜಾತಿ ಜನಗಣತಿ ನಡೆಸಿ ವರದಿಯನ್ನು ತಯಾರಿಸಿದ್ದು, ಸದರಿ ವರದಿಯನ್ನು ಬಿಡುಗಡೆ ಮಾಡಲು ವಿಳಂಬ ಮಾಡುತ್ತಿರುವ ಬಗ್ಗೆ

**ಶ್ರೀ ಕೆ.ಪಿ. ನಂಜುಂಡಿ ವಿಶ್ವಕರ್ಮ (ವಿಧಾನಸಭಾ ಕ್ಷೇತ್ರ) :–** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರವು ಹಿಂದುಳಿದ ವರ್ಗಗಳ ಇಲಾಖೆಗಳ ಮೂಲಕ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಜಾತಿ ಜನಗಣತಿ ನಡೆಸಿ ವರದಿಯನ್ನು ತಯಾರಿಸಿದ್ದು, ಸದರಿ ವರದಿಯನ್ನು ಬಿಡುಗಡೆ ಮಾಡಲು ವಿಳಂಬ ಮಾಡುತ್ತಿರುವ ಬಗ್ಗೆ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

**ಶ್ರೀ ಸಿ. ಪುಟ್ಟರಂಗಶೆಟ್ಟಿ (ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ,

(ಹೇಳಿಕೆಯನ್ನು ಲಗತ್ತಿಸಲಾಗಿದೆ)

**ಶ್ರೀ ಕೆ.ಪಿ. ನಂಜುಂಡಿ ವಿಶ್ವಕರ್ಮ :–** ಮಾನ್ಯ ಸಭಾಪತಿಯವರೇ, ತಮಗೆಲ್ಲರಿಗೂ ಗೊತ್ತಿರುವ ಹಾಗೆ ಹಿಂದುಳಿದ ವರ್ಗಗಳಲ್ಲಿ 102 ಜಾತಿಗಳಿದ್ದು, ಇವುಗಳಲ್ಲಿ ಕೆಲವು ಜಾತಿಗಳು ಮಾತ್ರ ಎಲ್ಲರ ಬಾಯಲ್ಲಿ ಬರುತ್ತವೆ. ಉದಾಹರಣೆಗೆ ಅಗಸರು, ಸವಿತಾ ಸಮಾಜ, ಭಜಂತ್ರಿ, ದೇವಾಡಿಗರು, ಕುಂಬಾರರು, ಕಂಬಾರರು, ಕುರುಬರು, ವಿಶ್ವಕರ್ಮರು, ತಿಗಳರು, ಹೂವಾಡಿಗರು, ದರ್ಜಿ, ದೇವಾಂಗದವರು, ಪಟ್ಟೆಗಾರರು, ಕ್ಷತ್ರಿಯರು, ಕುರುಹೀನ ಶೆಟ್ಟರು, ಗಾಣಿಗರು ಸೇರಿದಂತೆ ಕೆಲವೇ ಜಾತಿಗಳು ಮಾತ್ರ ಎಲ್ಲರ ಗಮನ ಸೆಳೆಯುತ್ತಿವೆ. ಆದರೆ ಜಾತಿ ಮೇಲೆ ಆರೋಪ ಮಾಡುವುದಕ್ಕೆ ಈ ವಿಚಾರವನ್ನು ಎತ್ತಿ ಮಾತನಾಡುತ್ತಿಲ್ಲ. ಸಂವಿಧಾನದಂತೆ ಎಲ್ಲರಿಗೂ ಸಾಮಾಜಿಕ ನ್ಯಾಯ ಸಿಗಬೇಕೆಂಬ ವಿಚಾರದಲ್ಲಿ ಒಂದಷ್ಟು ಜಾತಿಗಳು ಮಾತ್ರ ಸವಲತ್ತುಗಳನ್ನು ತೆಗೆದುಕೊಳ್ಳುತ್ತಿವೆ. ಜನಸಂಖ್ಯೆಗೆ ಅನುಗುಣವಾಗಿ ಜಾತಿಗಳಿಗೆ ಸವಲತ್ತು ಸಿಗಬೇಕೆಂದು ಎಲ್ಲರೂ ಬಯಸುತ್ತಾರೆ. 102 ಜಾತಿಗಳಿಗೂ ಸಾಮಾಜಿಕ ನ್ಯಾಯ ಸಿಗಬೇಕು. ಈ 102 ಜಾತಿಗಳನ್ನು ರಾಜ್ಯದಲ್ಲಿ ಕಾಯಕ ಸಮಾಜಗಳು ಎಂದು ಕರೆಯುತ್ತಾರೆ. ಆಯಾ ಜಾತಿಯವರು ಅವರವರ ವೃತ್ತಿಗಳನ್ನು ಅವಲಂಬಿಸಿಕೊಂಡು ದೇಶ ಕಟ್ಟುವುದರಲ್ಲಿ ಸಹಕರಿಸುತ್ತಿದ್ದಾರೆ. ಇವತ್ತಿಗೂ ಹಿಂದುಳಿದ ವರ್ಗದಲ್ಲಿ ಅನೇಕ ಸಮಾಜಗಳು ಅವರವರ ಕೆಲಸಗಳನ್ನು ಮಾಡಿಕೊಂಡು ಬದುಕನ್ನು ಸವೆಸುತ್ತಿದ್ದಾರೆ. ಆದರೆ ಕೆಲವೇ ಕೆಲವು ಜಾತಿಗಳು ಮಾತ್ರ ಸರ್ಕಾರದ ಸವಲತ್ತುಗಳನ್ನು ಪಡೆಯುತ್ತಿವೆ. ಆದರೆ 15% ಮೀಸಲಾತಿ 102 ಜಾತಿಗಳಿಗೂ ಹಂಚಿಕೆಯಾಗಬೇಕೆಂದು ಸರ್ಕಾರದ ಉದ್ದೇಶವಾಗಿದೆ. 102 ಜಾತಿಗಳಲ್ಲಿರುವ ಎಲ್ಲಾ ಮಕ್ಕಳು ವಿದ್ಯಾವಂತರಾಗಬೇಕು, ಸಾಮಾಜಿಕ ನ್ಯಾಯ ಎಲ್ಲರಿಗೂ ಸಿಗಬೇಕು. ಎಲ್ಲಾ ಜಾತಿಗಳವರು ಅವರವರ ಕೆಲಸಗಳನ್ನು ಗಟ್ಟಿಯಾಗಿ ನಿಲ್ಲಿಸಿಕೊಳ್ಳುವ ರಾಜಕೀಯ ಶಕ್ತಿಯನ್ನು ಪಡೆಯಬೇಕು. ಈ ಎಲ್ಲಾ ವಿಚಾರಗಳು ಸರ್ಕಾರಕ್ಕೆ ತಿಳಿದಿದೆ. ನಾನು 102 ಜಾತಿಗಳ ಹೆಸರುಗಳನ್ನು ಹೇಳದೇ ನಾಲ್ಕಾರು ಜಾತಿಗಳ ಹೆಸರುಗಳನ್ನು ಮಾತ್ರ ಹೇಳುತ್ತೇನೆ. ಆ ನಾಲ್ಕಾರು ಜಾತಿಗಳ ಹೆಸರುಗಳನ್ನು ಕೇಳಿದಾಗ ನಾವು ಎಲ್ಲಿದ್ದೇವೆ ಎಂದು ಗೊತ್ತಾಗುತ್ತದೆ. ಎಷ್ಟೋ ಜಾತಿಗಳು ನಮ್ಮಲ್ಲಿ ಇದ್ದರೂ ಯಾವ ಜಾತಿಯವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವ ಕೆಲಸ ಮಾಡುತ್ತಿದ್ದಾರೆ ಎಂದು ಗೊತ್ತಾಗುವುದಿಲ್ಲ. ಬಿಂಗಿ, ಅಜ್ಞಾನಿ, ನಾಲ್ಕಿ, ಗುಳ್ಳಿ, ಬಾಂದಿ ಎಂಬ ಜಾತಿಗಳಿದ್ದು, ಇವರು ಏನು ಕೆಲಸ ಮಾಡುತ್ತಿದ್ದಾರೆಂದು ಇವತ್ತಿಗೂ ಗೊತ್ತಿಲ್ಲ. ಆದರೆ ಅವರೆಲ್ಲರೂ ನಮ್ಮ ಜೊತೆಯಲ್ಲಿಯೇ ಇದ್ದಾರೆ. ಏಕೆಂದರೆ ಆ ಜಾತಿಗಳ ವಿಚಾರವನ್ನು ಹೇಳುವವರೂ ಯಾರೂ ಇಲ್ಲ. ಈ ಜಾತಿಗಳಿಗೆ ನ್ಯಾಯ ಸಿಗಬೇಕು ಮತ್ತು ಎಲ್ಲರೂ ಬದುಕಬೇಕೆಂದರೆ ಜಾತಿ ಗಣತಿಯಲ್ಲಿ ಎಷ್ಟೆಷ್ಟು ಸಂಖ್ಯೆಯಲ್ಲಿದ್ದಾರೆ ಎಂದು ನಿಖರವಾಗಿ ತಿಳಿಯಬೇಕು. ಶ್ರೀ ದ್ವಾರಕನಾಥ್ ಆಯೋಗದವರು ರೂ.21 ಕೋಟಿಗಳನ್ನು ಜಾತಿ ಗಣತಿಗೆ ಖರ್ಚು ಮಾಡಿದ್ದಾರೆ. ಕಳೆದ ಸರ್ಕಾರ ಜಾತಿ ಗಣತಿಗೆ ರೂ.175 ಕೋಟಿಗಳನ್ನು ಖರ್ಚು ಮಾಡಿದೆ. ಕಾರಣ ಏನೇ ಇದ್ದರೂ ಯಾವ ಯಾವ ಜಾತಿಗಳಿಗೆ ಶಕ್ತಿ ಇದೆಯೋ, ಅವರು ಹೆಚ್ಚು ಅವಕಾಶಗಳನ್ನು ಪಡೆದುಕೊಳ್ಳುವುದು ಪ್ರಜಾಪ್ರಭುತ್ವದಲ್ಲಿ ಇರುವ ವ್ಯವಸ್ಥೆಯಾಗಿದೆ. ಆದರೆ ಕಾಯಕವನ್ನೇ ನಂಬಿಕೊಂಡು ಬದುಕುತ್ತಿರುವ ಜಾತಿಗಳವರನ್ನು ಬದುಕುವುದಕ್ಕೆ ಬಿಡಬೇಕಲ್ಲವೇ? ಸರ್ಕಾರದ ಸವಲತ್ತುಗಳು ಅವರಿಗೂ ತಲುಪಬೇಕಲ್ಲವೇ? ಅವರ ಮಕ್ಕಳು ಸಹ ವಿದ್ಯಾವಂತರಾಗಿ ಯಾವತ್ತೋ ಒಂದು ದಿನ ಇಲ್ಲಿ ಕುಳಿತುಕೊಂಡು ಅವರ ಸಮಾಜದ ಬಗ್ಗೆ ಹೇಳುವ ಅವಕಾಶಗಳು ಸಿಗಬೇಕಲ್ಲವೇ? ಆ ರೀತಿ ಸಿಗಬೇಕು ಎನ್ನುವ ಸಂದರ್ಭಗಳು ಬಂದಾಗ ಯಾವುದೋ ನೆಪಗಳನ್ನು ಒಡ್ಡಿ ಜಾತಿ ಜನಗಣತಿಯನ್ನು ಮುಂದಕ್ಕೆ ಹಾಕಿಕೊಂಡು ಹೋಗುತ್ತಿದ್ದಾರೆ. ಈ ರೀತಿಯಾದರೆ ಅಸಲಿಗೆ ಯಾವ ಜಾತಿಯಲ್ಲಿ ಎಷ್ಟು ಸಂಖ್ಯೆಯಲ್ಲಿದ್ದಾರೆ ಎಂದು ಗೊತ್ತಾಗಬೇಕಲ್ಲವೇ? ವಿಶ್ವಕರ್ಮ ಸಮಾಜದಲ್ಲಿ ಐದು ರೀತಿಯ ಕೆಲಸ ಮಾಡುವವರಿದ್ದು, ಸುಮಾರು 40-50 ಲಕ್ಷ ಜನರಿದ್ದಾರೆ ಎಂದು ಹೇಳುತ್ತೇವೆ. ಆ ರೀತಿ ಒಂದೊಂದು ಜಾತಿಯವರು 40-50 ಲಕ್ಷ ಎಂದು ಹೇಳುತ್ತಾ ಹೋದರೆ ಕರ್ನಾಟಕ ರಾಜ್ಯದ ಜನಸಂಖ್ಯೆ 12 ಕೋಟಿ ಆಗುತ್ತದೆ. ಆದರೆ ಇಷ್ಟೊಂದು ಸೂಕ್ಷ್ಮವಾದ ವಿಚಾರವನ್ನು ತಡ ಮಾಡದೇ ಮಾಡಿದ್ದರೆ ಯಾವ ಯಾವ ಸಮಾಜದವರು ಎಷ್ಟು ಸವಲತ್ತುಗಳನ್ನು ಪಡೆದುಕೊಂಡಿದ್ದಾರೆ. ರಾಜಕೀಯವಾಗಿ ಯಾವ ಸಮಾಜ ಎಲ್ಲೆಲ್ಲಿ ಇದೆ ಎಂದು ರಾಜ್ಯದ ಜನತೆಗೆ ಗೊತ್ತಾಗುತ್ತಿತ್ತು. ಇದನ್ನು ಇಲ್ಲಿಯವರೆಗೂ ಮಾಡಲಿಲ್ಲ. ನಾನು ಎಲ್ಲಾ ಸದಸ್ಯರಲ್ಲಿ ಮನವಿ ಮಾಡುವುದೇನೆಂದರೆ, ನಾನು ಯಾವ ಜಾತಿ ಪರವಾಗಿ ಹೋರಾಟ ಮಾಡುವುದಿಲ್ಲ. ಕಾಯಕ ಸಮಾಜವನ್ನು ಉಳಿಸುವಂತಹ ಕೆಲಸವನ್ನು ತಾವೆಲ್ಲರೂ ನನ್ನ ಜೊತೆಯಲ್ಲಿ ಸೇರಿ ಸಹಮತ ವ್ಯಕ್ತಪಡಿಸಬೇಕು. ಜಾತಿ ಜನಗಣತಿಯನ್ನು ಆದಷ್ಟು ಬೇಗ ತರಬೇಕು. ರಾಜಕೀಯ ಶಕ್ತಿ 102 ಜಾತಿಗಳವರಿಗೆ ಸಿಗಬೇಕು. ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಹೇಳಿದಂತೆ ನಮ್ಮ ನಮ್ಮ ಕಾಯಕ ಸಮಾಜಗಳನ್ನು ಉಳಿಸಿಕೊಳ್ಳುವುದಕ್ಕೆ ರಾಜಕೀಯದ ಅಧಿಕಾರ ಬೇಕು. ಇದು ಪ್ರತಿಯೊಬ್ಬರಿಗೂ ಅನ್ವಯಿಸುವ ಮಾತಾಗಿದೆ. ಆದ್ದರಿಂದ ದಯಮಾಡಿ ತಡ ಮಾಡಬಾರದು. ನಾನು ಯಾರ ವಿರುದ್ಧವೂ ಇಲ್ಲ. ಕೆಲವು ಜಾತಿಯವರು ಜಾಸ್ತಿ ತೆಗೆದುಕೊಂಡು ನಮಗೆ ಕೊಡುತ್ತಿಲ್ಲ ಎಂದು ಆರೋಪ ಮಾಡುತ್ತಿಲ್ಲ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

110/06.07.2018/1.50/ಹೆಚ್‌ವಿಃವಿಕೆ

**ಶ್ರೀ ಕೆ.ಪಿ.ನಂಜುಂಡಿ(ಮುಂದು...)ಃ-**

ಸನ್ಮಾನ್ಯ ಸಭಾಪತಿಯವರೇ, ಏನು ನಡೆದು ಹೋಗಿದೆ. ಅದು ನಡೆದು ಹೋಗಿದೆ. ಮುಂಬರುವ ದಿನಗಳಲ್ಲಿ 102 ಜಾತಿಯವರಿಗೂ ಸಾಮಾಜಿಕ ನ್ಯಾಯ ಒದಗಿಸಿಕೊಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ. ಇನ್ನೂ ಎಷ್ಟು ದಿನಗಳ ಕಾಲ ನಾವು ದೇವರುಗಳನ್ನು ಮಾಡಿಕೊಟ್ಟು, ಗರ್ಭಗುಡಿಗಳಿಂದ ಹೊರಗೆ ನಿಲ್ಲುವುದು? ಇನ್ನೂ ಎಷ್ಟು ದಿನಗಳ ಕಾಲ ಬೋವಿಗಳು ಬಂಡೆ ಹೊಡೆದು ದೇವಾಲಯಗಳನ್ನು ಕಟ್ಟಿಕೊಟ್ಟು ದೇವಾಲಯಗಳಿಂದ ಹೊರಗೆ ನಿಲ್ಲುವುದು? ಇನ್ನೂ ಎಷ್ಟು ದಿನಗಳ ಕಾಲ ನಮ್ಮಗಳ ಮೇಲೆ ಅನ್ಯಾಯ ದೌರ್ಜನ್ಯಗಳು ನಡೆಯುವುದು?

ಸನ್ಮಾನ್ಯ ಸಭಾಪತಿಯವರೇ, ನ್ಯಾಯ ಒದಗಿಸಿಕೊಡುವಂತಹ ಜಾಗದಲ್ಲಿ ತಾವಿದ್ದೀರಿ, ಎಲ್ಲರೂ ಇದ್ದಾರೆ. ಇಲ್ಲಿ ಜಾತಿ ವಿಚಾರ ಹೇಳೋಲ್ಲ, ಬದಲಿಗೆ ನಮ್ಮನ್ನು ಬದುಕಿಸುವಂತಹ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸುಮಾರು 16 ವರ್ಷಗಳ ಕಾಲ ಹೋರಾಟ ಮಾಡಿ, ಇವತ್ತು ನಾನು ಈ ಸ್ಥಾನದಲ್ಲಿ ಬಂದು ನಿಂತಿದ್ದೇನೆ. ಯಾರು ಏನು ಮಾಡಿದರು ಎಂದು ನಾನು ಹೇಳುವುದಿಲ್ಲ. ಭಾರತೀಯ ಜನತಾ ಪಕ್ಷ ಮತ್ತು ಮಾನ್ಯ ಬಿ.ಎಸ್.ಯಡಿಯೂರಪ್ಪನವರು ನನಗೊಂದು ಸ್ಥಾನಮಾನವನ್ನು ಕೊಟ್ಟಿದ್ದಾರೆ. ನಾನು ಯಾರ ಮೇಲೂ ಆರೋಪ ಮಾಡುತ್ತಿಲ್ಲ. ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ಃ-** ಸನ್ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನ ಸದಸ್ಯರಾಗಿರುವ ಶ್ರೀ ಕೆ.ಪಿ.ನುಂಜುಂಡಿಯವರು ಪ್ರಥಮ ಬಾರಿಗೆ ಈ ಸದನವನ್ನು ಪ್ರವೇಶಿಸಿದ್ದರೂ ಹಿಂದುಳಿದ ವರ್ಗಗಳು ಮತ್ತು ಜಾತಿ ಗಣತಿಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ನೇಕಾರರು ಹಿಂದುಳಿದ ವರ್ಗಕ್ಕೆ ಸೇರಿದ್ದು, ಸುಮಾರು 47 ಉಪ ಜಾತಿಗಳಿವೆ. ಆದರೆ, ಇಲ್ಲಿಯವರೆಗೆ ಯಾವ ಉಪ ಜಾತಿಯಲ್ಲಿ ಎಷ್ಟು ಜನರಿದ್ದಾರೆ ಎನ್ನುವುದು ಗೊತ್ತಿಲ್ಲ. ಈ ಸದನದಲ್ಲಿ, ನಮ್ಮಲ್ಲಿ 'ನೇಕಾರ' ಎನ್ನುವ ಒಂದು ಉಪ ಜಾತಿಯಿದೆ. ಆ ಉಪ ಜಾತಿಯಲ್ಲಿ ಎಷ್ಟು ಜನರಿದ್ದಾರೆ ಎನ್ನುವ ಪ್ರಶ್ನೆಯನ್ನು ಕೇಳಿದಾಗ ಸುಮಾರು 2.5 ಲಕ್ಷ ಜನರಿದ್ದಾರೆ ಎನ್ನುವ ಉತ್ತರವನ್ನು ನೀಡಲಾಗಿತ್ತು.

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ, ಶ್ರೀಮತಿ ಉಮಾಶ್ರೀಯವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾಗಿದ್ದಾಗ, ಅವರು ನಮ್ಮ ನೇಕಾರರು ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭಕ್ಕೆ ಬಂದಿದ್ದರು. ಆಗ, 'ನೇಕಾರರ ಸಮಸ್ಯೆಗಳೇನು?' ಎಂದು ಕೇಳಿದ್ದರು. ನಾವು ನಮ್ಮ ಸಮಸ್ಯೆಗಳನ್ನು ಹೇಳಿದಾಗ, ಮಾನ್ಯ ಮುಖ್ಯಮಂತ್ರಿಗಳು 'ನಾನು ದ್ವಾರಕಾನಾಥ್‌ರವರ ನೇತೃತ್ವದಲ್ಲಿ ಒಂದು ಆಯೋಗವನ್ನು ರಚನೆ ಮಾಡಿ ಅದಕ್ಕೆ ಸುಮಾರು 25 ಕೋಟಿ ರೂಪಾಯಿಗಳ ಅನುದಾನವನ್ನು ಸಹ ನೀಡಲಾಗಿತ್ತು. ಆದರೆ, ಅದು ಸರಿಯಾಗಿ ಕಾರ್ಯನಿರ್ವಹಿಸಲಿಲ್ಲ. ಈ ಬಾರಿ ಎಷ್ಟೇ ಖರ್ಚಾದರೂ ಜಾತಿ ಗಣತಿಯನ್ನು ಮಾಡಿಯೇ ಮಾಡಿಸುತ್ತೇನೆ' ಎಂದು ಹೇಳಿ ಅವರು ಹೆಚ್.ಕಾಂತರಾಜು ಅವರ ನೇತೃತ್ವದಲ್ಲಿ ಒಂದು ಆಯೋಗವನ್ನು ರಚನೆ ಮಾಡಿ ಜನಗಣತಿ ಕಾರ್ಯವನ್ನು ಪ್ರಾರಂಭಿಸಿದರು. ಅದು ಉತ್ತಮವಾಗಿ ಕಾರ್ಯನಿರ್ವಹಿಸಿದೆ. ಪ್ರತಿ ಜಿಲ್ಲೆಯಲ್ಲಿಯೂ ಬಹಿರಂಗವಾಗಿ ಮೀಟಿಂಗ್‌ಗಳನ್ನು ಮಾಡಿ ಯಾವ್ಯಾವ ಜಾತಿಗಳಿವೆ ಅದನ್ನು ನೋಂದಾಣಿ ಮಾಡಿಕೊಳ್ಳಿ ಎಂದು ಹೇಳಿದ್ದರು. ಅದರಂತೆ ಕರ್ನಾಟಕ ರಾಜ್ಯದಲ್ಲಿ ಸುಮಾರು 1350 ಜಾತಿಗಳಿವೆ ಎಂದು ಗುರುತಿಸಿ ಅವರುಗಳಿಗೆ ಒಂದು ಪ್ರತ್ಯೇಕವಾದ ಕೋಡ್‌ಗಳನ್ನು ನೀಡಲಾಗಿದೆ. ಆ ಕೋಡ್‌ಗಳ ಪ್ರಕಾರ ಪ್ರತಿ ಕುಟುಂಬಕ್ಕೆ 55 ಪ್ರಶ್ನೆಗಳನ್ನೊಳಗೊಂಡ ಬುಕ್‌ಲೆಟ್‌ಗಳನ್ನು ಕೊಟ್ಟು ಸರ್ವೆ ಮಾಡಿಸಿದ್ದಾರೆ. ಸುಮಾರು 150 ಮನೆಗಳಿಗೆ ಒಬ್ಬ Enumerator fix ಫಿಕ್ಸ್ ಮಾಡಿ ಸರ್ವೆ ಮಾಡಿಸಿದ್ದಾರೆ. ಸರ್ವೆ ಕಾರ್ಯದಲ್ಲಿ ಸಾಕಷ್ಟು ಪ್ರಗತಿಯಾಗಿದೆ ಮತ್ತು ಸರ್ವೆ ಕಾರ್ಯ ಮುಕ್ತಾಯಗೊಂಡಿದೆ. ಆದರೆ, ಆಯೋಗದ ವರದಿಯನ್ನು ಬಿಡುಗಡೆ ಮಾಡುವುದಕ್ಕೆ ಸರ್ಕಾರ ಏಕೆ ಮುಜುಗರ ಪಟ್ಟುಕೊಳ್ಳುತ್ತಿದೆ ಎನ್ನುವುದು ನನಗೆ ಗೊತ್ತಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಪಿ.ನುಂಜುಂಡಿಯವರು ವಿಶ್ವಕರ್ಮ ಜನಾಂಗದವರ ಬಗ್ಗೆ ಮಾತನಾಡಿದರು. ನಾನು ನೇಕಾರರ ಬಗ್ಗೆ ಮಾತನಾಡುತ್ತಿದ್ದೇನೆ. ನೇಕಾರರಲ್ಲಿರುವ 47 ಉಪ ಜಾತಿಗಳು ತಮ್ಮ ಹೆಸರುಗಳನ್ನು ಬರೆಸಿದ್ದರೆ, ಆ ಉಪ ಜಾತಿಗಳಲ್ಲಿ ಎಷ್ಟು ಜನಸಂಖ್ಯೆ ಇದೆ ಎನ್ನುವುದು ಗೊತ್ತಾಗುತ್ತದೆ. ಸರ್ಕಾರ ಅವರಿಗೆ ಏನೇನು ಸವಲತ್ತುಗಳನ್ನು ಕೊಡುತ್ತದೆ ಎನ್ನುವುದು ನಂತರದ ವಿಚಾರವಾಗಿದೆ. ಪೂರ್ಣಗೊಂಡಿರುವ ಆಯೋಗದ ವರದಿಯನ್ನು ಸರ್ಕಾರ ಏಕೆ ತಡೆಹಿಡಿದಿದೆ ಎನ್ನುವುದು ನನಗೆ ಗೊತ್ತಿಲ್ಲ. ಈಗ ಮಾನ್ಯ ಸಚಿವರು ಹೊಸದಾಗಿ ಈ ಖಾತೆಯನ್ನು ವಹಿಸಿಕೊಂಡಿದ್ದಾರೆ. ಅವರು ಕೊಟ್ಟಿರುವಂತಹ ಲಿಖಿತ ರೂಪದ ಉತ್ತರದಲ್ಲಿ, 'ವರದಿ ತಯಾರು ಮಾಡುವ ಕಾರ್ಯವು ಅಂತಿಮ ಹಂತದಲ್ಲಿದೆ' ಎಂದು ತಿಳಿಸಿದ್ದಾರೆ. ಇದು ತಪ್ಪು ಮಾಹಿತಿಯಾಗಿದೆ. ಅಧಿಕಾರಿಗಳನ್ನು ಕೇಳಿದರೆ ಅವರು ಮಾಹಿತಿ ಕೊಡುತ್ತಾರೆ. ಅನಧಿಕೃತವಾಗಿ ನನಗಿರುವ ಮಾಹಿತಿಯ ಪ್ರಕಾರ ವರದಿ ಅಂತಿಮಗೊಂಡಿದೆ ಪ್ರಿಂಟ್ ಸಹ ಆಗಿದೆ ಮತ್ತು ಸಚಿವ ಸಂಪುಟದ ಮುಂದೆಯೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದಿದೆ. ಆದರೆ, ಅದನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುವುದು ಬಾಕಿ ಇದೆ. ಇವತ್ತು transformation of profession ಆಗಿದೆ. ವ್ಯಕ್ತಿಯು ಕೈಗೊಳ್ಳುವ ವೃತ್ತಿಯ ಆಧಾರದ ಮೇಲೆ ಜಾತಿಗಳು ಹುಟ್ಟಿಕೊಂಡಿವೆ. ನೇಕಾರಿಗೆ ಮಾಡುವವರನ್ನು ನೇಕಾರರು ಎಂದು ಕರೆಯಲಾಯಿತು. ಈಗ ನೇಕಾರಿಕೆ ಬಿಟ್ಟಿರುವವರು ಎಲ್ಲಿದ್ದಾರೆ ಯಾವ ಕೆಲಸ ಮಾಡುತ್ತಿದ್ದಾರೆ ಎನ್ನುವ ಅಂಶ Family Census ನಿಂದ ಹೊರಬರುತ್ತದೆ. ಆಗ ಅವರಿಗೆ ಏನು ಸವಲತ್ತುಗಳನ್ನು ಕೊಡಬೇಕು ಎನ್ನುವುದು ಮುಂದಿನ ಅಂಶವಾಗಿದೆ. ಸುಮಾರು 230 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿ ಜಾತಿ ಜನಗಣತಿ ಮಾಡಲಾಗಿದೆ. ಆ ಗಣತಿಯ ವರದಿಯನ್ನು ಯಾಕೆ ತಡೆಹಿಡಿಯಲಾಗಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಕೆಲವು ಸಂಘಸಂಸ್ಥೆಗಳು ಈ ವರದಿಯನ್ನು ತಡೆಹಿಡಿದಿವೆ. ಅವರಿಗೆ ಇರುವಂತಹ apprehension ಏನೆಂದರೆ, ಜನಗಣತಿಯ ವರದಿಯಲ್ಲಿರುವ ಅಂಶಗಳು ಹೊರಬಂದರೆ, ಜನಸಂಖ್ಯೆಯ ಆಧಾರದ ಮೇಲೆ ಎಂ.ಎಲ್.ಎ. ಟಿಕೆಟ್ ಆಗಲೀ ಅಥವಾ ಅಧಿಕಾರವನ್ನಾಗಲೀ ಕೊಡುತ್ತಾರೆ ಎನ್ನುವ ಉದ್ದೇಶವಿದೆ. ನಮಗೆ ಸ್ವಾತಂತ್ರ್ಯ ಬಂದಾಗಿನಿಂದ ಕೆಲವು ವರ್ಗಗಳು ಮಾತ್ರ ರಾಜಕೀಯ ಲಾಭವನ್ನು ಪಡೆದಿವೆ. ಹಳ್ಳಿಗಳಲ್ಲಿರುವ ಗೌಡರು ಮತ್ತಿತರ ಪ್ರಭಾವಿಶಾಲಿಗಳು ರಾಜಕೀಯಕ್ಕೆ ಬರುತ್ತಿದ್ದರು. ಶಿಕ್ಷಕರು ಮತ್ತು ವಕೀಲರುಗಳು ಮಾತ್ರ ಎಂ.ಎಲ್.ಎ.ಗಳಾಗುತ್ತಿದ್ದರು. ನಂತರ ಆದಂತಹ ಸುಧಾರಣೆಗಳ ಹಿನ್ನೆಲೆಯಲ್ಲಿ ಶೇಕಡಾ 50ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮೀಸಲಾತಿಯನ್ನು ನೀಡಲಾಗುತ್ತಿದೆ. ಅದೇ ರೀತಿಯಲ್ಲಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಲ್ಲಿ ಶೇಕಡಾ 50ರಷ್ಟು ಮಹಿಳೆಯರಿಗೆ ಮೀಸಲಾತಿ ನೀಡಲಾಗಿದೆ. ರಾಜಕೀಯವಾಗಿ ಕೊಡಿ ಎಂದು ಕೇಳುತ್ತಿಲ್ಲ. ಜಾತಿ ಜನಗಣತಿಯ ಅಂಕಿಅಂಶಗಳು ಹೊರಬಿದ್ದರೆ, ಯಾವಯಾವ ಜಾತಿಯಲ್ಲಿ ಎಷ್ಟೆಷ್ಟು ಜನಸಂಖ್ಯೆ ಇದೆ ಎನ್ನುವುದು ಹೊರಬೀಳುತ್ತದೆ. ಆದ್ದರಿಂದ ಮಾನ್ಯ ನಂಜುಂಡಿಯವರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ನಾನು ಸಹ ಧ್ವನಿಗೂಡಿಸುತ್ತಿದ್ದೇನೆ. ತಕ್ಷಣವೇ ಜಾತಿ ಜನಗಣತಿ ಸಮೀಕ್ಷೆಯ ವರದಿಯನ್ನು ಈ ಸದನದ ಮುಂದಿಟ್ಟು ಅದನ್ನು ಅನುಷ್ಠಾನಗೊಳಿಸಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಪಿ.ನಂಜುಂಡಿಯವರು ಈ ಸದನಕ್ಕೆ ಇತ್ತೀಚೆಗೆ ಪ್ರವೇಶಿಸಿದ್ದರೂ ಸಹ ಅತ್ಯಂತ ಸಮಾಜಮುಖಿಯಾಗಿರುವ ವಿಚಾರವನ್ನು ಪ್ರಸ್ತಾಪ ಮಾಡಿರುವುದಕ್ಕೆ ನಾನು ಅವರನ್ನು ಅಭಿನಂದಿಸುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ಧರಾಮಯ್ಯನವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ, ಈ ರಾಜ್ಯದಲ್ಲಿರುವ ಆರೂವರೆ ಕೋಟಿ ಜನರಿಗೆ ಸಾಮಾಜಿಕ ನ್ಯಾಯವನ್ನು ಜನಸಂಖ್ಯೆಗೆ ಅನುಗುಣವಾಗಿ ನೀಡಲು ಮತ್ತು ನಮ್ಮ ಸಂವಿಧಾನದ preamble ನಲ್ಲಿ ಹೇಳಿರುವಂತೆ ಸರ್ವರಿಗೂ ಸಮ ಪಾಲು, ಸರ್ವರಿಗೂ ಸಮ ಬಾಳು ಮತ್ತು ಸಮಾನ ಅವಕಾಶಗಳನ್ನು ನೀಡುವ ಉದ್ದೇಶದಿಂದ ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಕ್ಕೆ ಸೇರಿದ ಜನರು ಎಷ್ಟಿದ್ದಾರೆ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಮುಂದುವರೆದಿರುವವರ ಸಂಖ್ಯೆ ಎಷ್ಟಿದೆ ಎನ್ನುವುದರ ನಿಖರವಾಗಿರುವ ಮಾಹಿತಿಯನ್ನು ಪಡೆದುಕೊಂಡು, ಆ ಮಾಹಿತಿಯ ಆಧಾರದ ಮೇಲೆ ಕಾರ್ಯಕ್ರಮಗಳನ್ನು ರೂಪಿಸಬೇಕು ಮತ್ತು ಆ ಜನರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಬೇಕೆಂದು 1992ರಲ್ಲಿ Indra sawhney Etc, vs Union Of India and Others ಪ್ರಕರಣದಲ್ಲಿ ಸುಪ್ರೀಂ ಕೋರ್ಟಿನ 9 ಜನ ನ್ಯಾಯಮೂರ್ತಿಗಳನ್ನು ಒಳಗೊಂಡ ಸಂವಿಧಾನಿಕ ಪೀಠವು "each and every state has to have a permanent Backward Classes Commission" ಎಂದು ಆದೇಶ ಮಾಡಿರುವ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳ ಆಯೋಗದ ಮೂಲಕ ಈ ರಾಜ್ಯದ ಜನಸಂಖ್ಯೆಯ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯನ್ನು ಮಾಡುವುದಕ್ಕಾಗಿ ಸುಮಾರು 200 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಮಾಹಿತಿ ಪಡೆಯುವಂತಹ ಉದ್ದೇಶದಿಂದ ಆಯೋಗಕ್ಕೆ ಈ ಜವಾಬ್ದಾರಿಯನ್ನು ವಹಿಸಲಾಗಿತ್ತು. 1901ರಲ್ಲಿ ಮತ್ತು 1931ರಲ್ಲಿ ಈ ರಾಜ್ಯದಲ್ಲಿ ಜನಸಂಖ್ಯೆಯ ಅಧಾರದ ಮೇಲೆ ಜಾತಿ ಜನಗಣತಿಯಿಂದ ಲಭ್ಯವಾಗಿರುವ ಅಂಕಿಅಂಶಗಳ ಆಧಾರದ ಮೇಲೆ ಹೇಳುವುದಾದರೆ, ಸುಮಾರು 101 ಜಾತಿಗಳಿರುವ ಪರಿಶಿಷ್ಟ ಜಾತಿಯವರು ಶೇಕಡಾ 17.1ರಷ್ಟು, ವೀರಶೈವ ಜನಾಂಗಕ್ಕೆ ಸೇರಿದವರು ಶೇಕಡಾ 16ರಷ್ಟು, ಅಲ್ಪ ಸಂಖ್ಯಾತರು ಸುಮಾರು ಶೇಕಡಾ 14ರಷ್ಟಿದ್ದಾರೆ, ಒಕ್ಕಲಿಗ ಜನಾಂಗಕ್ಕೆ ಸೇರಿದವರು ಸುಮಾರು ಶೇಕಡಾ 11ರಷ್ಟಿದ್ದಾರೆ, ಪರಿಶಿಷ್ಟ ಪಂಗಡಕ್ಕೆ ಸೇರಿದವರು ಸುಮಾರು ಶೇಕಡಾ 7.5 ರಷ್ಟಿದ್ದಾರೆ ಮತ್ತು ಬ್ರಾಹ್ಮಣರು ಸುಮಾರು ಶೇಕಡಾ 3.8 ರಷ್ಟಿದ್ದಾರೆ. ಇದರ ಜೊತೆಗೆ as early as 1919ನಲ್ಲಿ ನ್ಯಾ॥ ಲೆಸ್ಲಿ ಮಿಲ್ಲರ್ ಆಯೋಗದ ವರದಿ 1916ರಲ್ಲಿ ನ್ಯಾ॥ಆರ್.ನಾಗನಗೌಡರ ಆಯೋಗದ ವರದಿ ಮತ್ತು 1974-75ರಲ್ಲಿ ನ್ಯಾ॥ಎಲ್.ಜಿ.ಹಾವನೂರು ಆಯೋಗದ ವರದಿ ಆನಂತರ ನ್ಯಾ॥ಓ.ಚಿನ್ನಪ್ಪರೆಡ್ಡಿ ಆಯೋಗ, ನ್ಯಾ॥ವೆಂಕಟಸ್ವಾಮಿ ಆಯೋಗ, ಪ್ರೊ॥ರವಿವರ್ಮಕುಮಾರ್ ಆಯೋಗದ ವರದಿ ಇರಬಹುದು ಈ ರೀತಿ ಅನೇಕ ವರದಿಗಳು ಬಂದಿದ್ದರೂ ಸಹ ನಿಖರವಾಗಿರುವ ಜಾತಿ ಜನಸಂಖ್ಯೆಯ ಅಂಕಿಅಂಶಗಳನ್ನು ಪಡೆದುಕೊಳ್ಳುವುದರಲ್ಲಿ ಸರ್ಕಾರಕ್ಕೆ ಸರಿಯಾದ ಮಾಹಿತಿ ಲಭ್ಯವಾಗುತ್ತಿಲ್ಲ ಎನ್ನುವ ಹಿನ್ನೆಲೆಯಲ್ಲಿ ಈ ಜವಾಬ್ದಾರಿಯನ್ನು ಹೆಚ್.ಕಾಂತರಾಜು ಆಯೋಗದವರಿಗೆ ಸರ್ಕಾರವು ವಹಿಸಿಕೊಟ್ಟಿತ್ತು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದುವರೆದಿದೆ)

**(111) 6.7.2018 :2.00 ಪಿಕೆ:ವಿಕೆ**

ಶ್ರೀ ವಿ.ಎಸ್. ಉಗ್ರಪ್ಪ(ಮುಂದುವರೆದಿದೆ

ಹೀಗೆ ಅನೇಕ ವರದಿಗಳು ಬಂದಿದ್ದರೂ ಸಹ ಜನಸಂಖ್ಯೆಗೆ ಸಂಬಂಧಪಟ್ಟಂತೆ ನಿಖರವಾಗಿರುವಂತಹ ಮಾಹಿತಿ ಸರ್ಕಾರಕ್ಕೆ ಲಭ್ಯವಾಗುತ್ತಿಲ್ಲ ಎಂದು ಆ ಜವಾಬ್ದಾರಿಯನ್ನು ಮಾನ್ಯ ಕಾಂತರಾಜ್ ಅವರ ಕಮಿಷನ್‌ಗೆ ಕೊಟ್ಟಿತ್ತು. ಮಾನ್ಯ ಕಾಂತರಾಜ್‌ರವರು ವಕೀಲರು ಹಾಗೂ ನನ್ನ ಸ್ನೇಹಿತರೂ ಆಗಿದ್ದಾರೆ. ನಾನು, ಮಾನ್ಯ ರೇವಣ್ಣ ಮತ್ತು ಇನ್ನಿತರ ಸ್ನೇಹಿತರು ಅವರ ಜೊತೆ ಚರ್ಚೆ ಮಾಡಿದ್ದೇವೆ. ನನಗೆ ಲಭ್ಯವಾಗಿರುವ ಮಾಹಿತಿ ಪ್ರಕಾರ ಆ ವರದಿ ಕಂಪ್ಲೀಟ್ ಆಗಿ ಅದನ್ನು ರಾಜ್ಯ ಸರ್ಕಾರಕ್ಕೆ ಕೊಟ್ಟಿದ್ದಾರೆ. ರಾಜ್ಯ ಸರ್ಕಾರಕ್ಕೆ ಕೊಟ್ಟಿದ್ದರೂ ಅದನ್ನು ಏಕೆ ಹೊರಗಡೆ ತರುತ್ತಿಲ್ಲ? ನಾನು ಈ ಕುರಿತು ಎಲ್ಲಾ ವಿಚಾರಗಳ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಭಾಪತಿಯವರೇ, ನಾನು ಒಂದು ಉದಾಹರಣೆ ಕೊಡುತ್ತೇನೆ. ಆರ್ಟಿಕಲ್ 16 (4) ಅಥವಾ ಆರ್ಟಿಕಲ್ 16(14)(ಎ), . . .ಈಗಲೂ ಕೂಡ, ಪರಿಶಿಷ್ಟ ಜಾತಿಯ ಜನಾಂಗಕ್ಕೆ ಪ್ರಮೋಷನ್ ಕೊಟ್ಟಿರುವುದು ಸರಿಯೋ ತಪ್ಪೋ ಎನ್ನುವುದರ ಬಗ್ಗೆ ಚರ್ಚೆ ಆಗುತ್ತಿದೆ. ಒಂದು ಕಡೆ ಸುಪ್ರೀಂ ಕೋರ್ಟ್ ಆದೇಶ ಇದ್ದರೂ ರಾಜ್ಯ ಸರ್ಕಾರ ಒಂದು ಕಾನೂನನ್ನು ಮಾಡಿತ್ತು ಮತ್ತು ಅದಕ್ಕೆ ಇತ್ತೀಚೆಗೆ ಭಾರತದ ರಾಷ್ಟ್ರಪತಿಗಳು assent ಕೊಟ್ಟಿರುವಂಥದ್ದೂ ಇದೆ. Adequate representation ಅನ್ನು backward classes ಗೆ, Scheduled Castes and Scheduled Tribes ಗೆ ಸರ್ಕಾರಿ ಹುದ್ದೆಗಳಲ್ಲಿ ಇದೆಯೋ ಇಲ್ಲವೋ ಎನ್ನುವುದನ್ನು ಯಾವ ಆಧಾರದ ಮೇಲೆ ಲೆಕ್ಕ ಹಾಕುವುದಕ್ಕೆ ಆಗುತ್ತದೆ? ಆ ಜನಸಂಖ್ಯೆಯ ನಿಖರವಾದ ಮಾಹಿತಿ ಇದ್ದಾಗ ಮಾತ್ರ adequate representation ಇದೆಯೋ ಇಲ್ಲವೋ ಎಂದು ನೋಡಿ ಮಾಡುವ ಸಾಧ್ಯತೆ ಇದೆ. ಎರಡನೆಯದಾಗಿ, local authorities ನಲ್ಲಿ, A category, B category, SC category, ST category, General category ಇವೆ. ಇವುಗಳೆಲ್ಲದರ ಮೀಸಲಾತಿಯನ್ನು ಅವರ ಜನಸಂಖ್ಯೆಯ ಆಧಾರದ ಮೇಲೆ ಹೇಳಲಾಗುತ್ತದೆ. ಗ್ರಾಮ ಪಂಚಾಯಿತಿ ಇರಬಹುದು, ತಾಲ್ಲೂಕು ಪಂಚಾಯಿತಿ ಇರಬಹುದು, ಜಿಲ್ಲಾ ಪಂಚಾಯಿತಿ ಇರಬಹುದು, ಮುನಿಸಿಪಾಲಿಟಿ ಇರಬಹುದು ಅಥವಾ ಮತ್ತೊಂದು ಇರಬಹುದು, ಇಲ್ಲೆಲ್ಲಾ, ಆರ್ಥಿಕವಾಗಿ ಯಾರು ತೊಂದರೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೋ, ಬಡತನ ರೇಖೆಗಿಂತ ಕೆಳಗಡೆ ಇದ್ದಾರೋ ಅವರಿಗೋಸ್ಕರ ಕಾರ್ಯಕ್ರಮ ರೂಪಿಸಬೇಕು ಎಂದರೆ ಅದಕ್ಕೆ ನಿಖರವಾದ ಜನಸಂಖ್ಯೆಯ ಮಾಹಿತಿ ಇರಬೇಕಾಗುತ್ತದೆ. ನಿನ್ನೆ ಮಂಡಿಸಿದ ಬಜೆಟ್‌ನಲ್ಲಿ ಮಠಗಳಿಗೆ, ಕೆಲವು ಜಾತಿಗಳಿಗೆ ಇಂತಿಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಹಣ ಕೊಟ್ಟಿದ್ದಾರೆ. ಆದರೆ ನಿಖರವಾಗಿ ಇಂಥಿಂಥ ಸಮಾಜದ ಜನಸಂಖ್ಯೆ ಇಷ್ಟಿದೆ, ಅವರ ಟ್ಠಾಜಡಿಚಿಛಿಥಿ ಡಿಚಿಣಜ ಇಷ್ಟಿದೆ, ಅವರು ಇಂತಿಷ್ಟು ಆಸ್ತಿಯನ್ನು ಹೊಂದಿದ್ದಾರೆ ಅಥವಾ ಇಂತಿಷ್ಟು ಉದ್ಯೋಗ ಅವರಿಗೆ ಸಿಕ್ಕಿದೆ, ಸರ್ಕಾರಿ ನೌಕರಿಯಲ್ಲಿ ಇಷ್ಟು ಕೆಲಸ ಸಿಕ್ಕಿದೆ ಎಂಬ ಎಲ್ಲಾ ಮಾಹಿತಿಗಳನ್ನು ರಾಜ್ಯದ ಜನತೆಯ ಮುಂದೆ ಇಡುವುದು ಅತ್ಯಂತ ಆವಶ್ಯಕವಾಗಿದೆ. ಮಾನ್ಯ ಸಭಾಪತಿಯವರೇ, ಈಗಾಗಲೇ ಸರ್ಕಾರಕ್ಕೆ ಆ ವರದಿ ಬಂದಿದೆ ಎನ್ನುವ ಮಾಹಿತಿ ನಮ್ಮಲ್ಲಿದೆ. ಆ ಆಯೋಗದಲ್ಲಿ ಇದ್ದಂಥವರು ನನಗೆ ಈ ಮಾಹಿತಿ ಕೊಟ್ಟಿದ್ದಾರೆ.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ನಿಖರವಾದಂತಹ ಮಾಹಿತಿಯೇ ಬಂದಿರುತ್ತದೆ. ಆದ್ದರಿಂದ ಸರ್ಕಾರ ಈಗ ಕೊಟ್ಟಿರುವ ಉತ್ತರವನ್ನು ಹಿಂಪಡೆಯಬೇಕಾಗಿರುತ್ತದೆ.

**ಶ್ರೀ ವಿ.ಎಸ್. ಉಗ್ರಪ್ಪ** :- ಮಾನ್ಯ ಸಭಾಪತಿಯವರೇ, ಸರ್ಕಾರ ಆ ವರದಿಯನ್ನು ಮಂಡಿಸಲು ಏಕೆ ಮೀನ-ಮೇಷ ಎಣಿಸುತ್ತಿದೆ ಎನ್ನುವುದು ಗೊತ್ತಾಗುತ್ತಿಲ್ಲ. ಇವತ್ತಲ್ಲ ನಾಳೆ, ಯಾವ ಯಾವ ಸಮಾಜದವರ ಜನಸಂಖ್ಯೆ ಎಷ್ಟಿದೆ, ಪರಿಶಿಷ್ಟ ಜಾತಿಯಲ್ಲಿ 101 ಉಪಜಾತಿಗಳ ಒಟ್ಟು ಜನಸಂಖ್ಯೆ ಎಷ್ಟು, ಪರಿಶಿಷ್ಟ ಪಂಗಡದಲ್ಲಿರುವ 51 ಜಾತಿಗಳ ಜನಸಂಖ್ಯೆ ಎಷ್ಟಿದೆ, ಹಿಂದುಳಿದ ಮತ್ತು ಇನ್ನಿತರ ಪಂಗಡಗಳ ಸುಮಾರು 900 ಜಾತಿಗಳ ಜನಸಂಖ್ಯೆ ಎಷ್ಟಿದೆ ಎಂಬುದನ್ನು ತಿಳಿಸಲೇಬೇಕಾಗುತ್ತದೆ. ಶ್ರೀ ಓ.ಚಿನ್ನಪ್ಪರೆಡ್ಡಿ ಕಮಿಷನ್‌ನ ವಾಲ್ಯೂಮ್ ಒಂದರಲ್ಲಿ, ಯಾವ ಯಾವ ಜಾತಿಯವರು ಎಷ್ಟೆಷ್ಟು ಜನ ಇದ್ದಾರೆ ಎನ್ನುವುದರ ಅಂಕಿಅಂಶಗಳು 1987ರ Socio Economic Survey ಆಧಾರದ ಹಿನ್ನೆಲೆಯಲ್ಲಿ, 1901ರ ಸೆನ್ಸಸ್‌ನ ಆಧಾರದ ಹಿನ್ನೆಲೆಯಲ್ಲಿ reflect ಆಗುತ್ತದೆ. ಆದರೆ ನಿಖರತೆ ಇಲ್ಲದೇ ಇರುವ ಹಿನ್ನೆಲೆಯಲ್ಲಿ ಸುಮಾರು ರೂ. 200 ಕೋಟಿಗಳನ್ನು ಖರ್ಚು ಮಾಡಿ ಈ ವರದಿಯನ್ನು ತಯಾರಿಸಲಾಗಿದೆ. ಈ ವರದಿಯಲ್ಲಿ, in fact Article 340 ಅಡಿಯಲ್ಲಿ, ಹಿಂದುಳಿದ ಆಯೋಗವನ್ನು ರಚಿಸುವುದಕ್ಕೆ ಅವಕಾಶವಿದ್ದು, ಅದರಲ್ಲಿ, ಪ್ರತಿವರ್ಷವೂ ರಿಪೋರ್ಟ್ ಕೊಡಬೇಕು ಎಂಬ ಅಂಶ ಇದೆ. ನಾವು ಪ್ರಸ್ತಾಪಿಸುತ್ತಿರುವ ವರದಿ 2015ರಲ್ಲಿ ಆಗಿರುವಂಥದ್ದು, ಈಗ ನಾವು 2018ನೇ ಇಸವಿಯಲ್ಲಿದ್ದೇವೆ. ಮಾನ್ಯ ಸಭಾಪತಿಯವರೇ, ಸಾಮಾಜಿಕ ನ್ಯಾಯ ಒದಗಿಸಿ ಕೊಡುವ ನಿಟ್ಟಿನಲ್ಲಿ ಬದ್ಧತೆ ಹೊಂದಿರುವ ಕಾಂಗ್ರೆಸ್ ಮತ್ತು ಜನತಾದಳದ ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿರುವಾಗ ಈ ರೀತಿ ವರದಿ ಹೊರಗೆ ಬರದೇ ಇದ್ದರೆ, ಈ ವರದಿಯ ಆಧಾರದ ಮೇಲೆ ಸಾಮಾಜಿಕ ನ್ಯಾಯ ಕೊಡುವ ದಿಸೆಯಲ್ಲಿ ಕೆಲಸ ಮಾಡದೇ ಇದ್ದರೆ ಇನ್ಯಾವಾಗ ಈ ಕೆಲಸ ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನು ಕೇಳಬಯಸುತ್ತೇನೆ. ಈ ನಿಟ್ಟಿನಲ್ಲಿ ಸರ್ಕಾರ ಮೀನ-ಮೇಷ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಣಿಸದೇ ವರದಿಯನ್ನು ಕೂಡಲೇ ಜನತೆಯ ಮುಂದೆ, ಸದನದ ಮುಂದೆ ಇಡಬೇಕೆಂದು ಹೇಳಿ ಆಗ್ರಹಿಸಿ, ಆ ವರದಿಯ ಆಧಾರದ ಮೇಲೆ ಸಾಮಾಜಿಕ ಕಾರ್ಯಕ್ರಮಗಳನ್ನು ರೂಪಿಸಿಬೇಕೆಂದು ಒತ್ತಾಯ ಮಾಡಬಯಸುತ್ತೇನೆ.

**ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭೆಯಿಂದ ಆಯ್ಕೆಯಾದವರು)** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ಮಾನ್ಯ ಕೆ.ಪಿ.ನಂಜುಂಡಿಯವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಬಹಳ ವರ್ಷಗಳಿಂದ ಹೋರಾಟ ಮಾಡಿಕೊಂಡು ಬಂದ ಮಾನ್ಯ ಸದಸ್ಯರು ಸದನದಲ್ಲಿ ಈ ಕುರಿತು ಚರ್ಚೆ ಮಾಡಲು ಕಾರಣರಾಗಿದ್ದಾರೆ. ಈ ರಾಜ್ಯದಲ್ಲಿ ಅನೇಕ ರೀತಿಯಲ್ಲಿ ಪರಿವರ್ತನೆ ಆಗುವುದಕ್ಕೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ದುಡಿದಂಥವರು ಬಹಳ ಜನ ಇದ್ದಾರೆ. ಮೊದಲನೆಯದಾಗಿ, ಶ್ರೀ ಕೃಷ್ಣರಾಜ ಒಡೆಯರ್‌ರವರು Brahmin vs Others ಎಂದು ಮೊದಲನೆ ಸಲ reservation ತಂದಂಥ ಕೀರ್ತಿ ಅವರಿಗೆ ಸಲ್ಲುತ್ತದೆ. ತದನಂತರ ನಾವು ದಿವಂಗತ ಮಾನ್ಯ ದೇವರಾಜ್ ಅರಸರವರನ್ನು ನೆನಸಿಕೊಳ್ಳುತ್ತೇವೆ. ಇವರು ಹಾವನೂರು ಕಮಿಷನ್ ತರುವುದರ ಮೂಲಕ ರಾಜ್ಯದಲ್ಲಿ ಧ್ವನಿ ಇಲ್ಲದ ಸಮಾಜಗಳಿಗೆ ಧ್ವನಿ ಕೊಟ್ಟಿದ್ದರಿಂದ ನಾವೆಲ್ಲರೂ ಮಾತನಾಡುವಂತಹ ಅವಕಾಶ ಸಿಕ್ಕಿದೆ. ನಂತರದ ದಿನಗಳಲ್ಲಿ, ಮಾನ್ಯ ಉಗ್ರಪ್ಪನವರು ಹೇಳಿದ ಹಾಗೆ ಅನೇಕ ಪರಿವರ್ತನೆಗಳು ಆಗಿವೆ. Indra Sawhney vs Central Government ಕೇಸ್‌ನಲ್ಲಿ ಶಾಶ್ವತವಾದ ಹಿಂದುಳಿದ ಆಯೋಗ ರಾಜ್ಯದಲ್ಲಿ ಆಗಬೇಕು, judicial power ಕೊಡಬೇಕು, ತನ್ಮೂಲಕ ಈ ರಾಜ್ಯದ ಜನತೆಯಲ್ಲಿ ಸಾಮಾಜಿಕ ನ್ಯಾಯವನ್ನು ಮೂಡಿಸಬೇಕು ಎನ್ನುವ ಆಧಾರದ ಮೇಲೆ ಅನೇಕ ಕಾರ್ಯಗಳು ನಡೆದಿವೆ. 10 ವರ್ಷಕ್ಕೊಮ್ಮೆ ಜನಗಣತಿ ಆಗುತ್ತದೆ. ಆದರೆ 1931ರಲ್ಲಿ ಜಾತಿ ಜನಗಣತಿ ಆಗಿತ್ತು. ಅಲ್ಲಿಂದ ಇಲ್ಲಿಯವರೆಗೆ ಈ ಗಣತಿ ಕಾರ್ಯ ಆಗಲಿಲ್ಲ. ನಮ್ಮ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ಧರಾಮಯ್ಯನವರು ಚಿಂತನೆ ಮಾಡಿ ಜಾತಿ ಗಣತಿ ಕಾರ್ಯಕ್ಕೆ ಚಾಲನೆ ಕೊಟ್ಟರು. ಇಡೀ ಭಾರತದಲ್ಲಿ ಪ್ರಥಮ ಬಾರಿಗೆ ಕರ್ನಾಟಕದಲ್ಲಿ ಈ ಕೆಲಸ ಆಯಿತು. ಶಾಶ್ವತ ಹಿಂದುಳಿದ ಆಯೋಗ ನಿಂತ ನೀರಲ್ಲ. ಮಾನ್ಯ ಕೆ.ಪಿ.ನಂಜುಂಡಿಯವರು ಹೇಳಿದ ಹಾಗೆ, ಅವಕಾಶ ವಂಚಿತರಾದಂತಹ ಜಾತಿಗಳನ್ನು ಆಗಿಂದ್ದಾಗ್ಗೆ ಗುರುತಿಸಿ ಅವರನ್ನೂ ಮುಖ್ಯವಾಹಿನಿಗೆ ತರಬೇಕು ಎನ್ನುವುದು ಶಾಶ್ವತ ಹಿಂದುಳಿದ ಆಯೋಗದ ಉದ್ದೇಶ. ಆ ಉದ್ದೇಶ ಪರಿಪೂರ್ಣವಾಗಬೇಕಾದರೆ, ಯಾವರೀತಿ ಅಳತೆ ಮಾಡಬೇಕು ಎನ್ನುವುದರ ಬಗ್ಗೆ ಒಂದು ಮಾನದಂಡ ಇರಬೇಕಾಗುತ್ತದೆ. ಈ ಹಿಂದೆ ಶ್ರೀ ಚಿನ್ನಪ್ಪರೆಡ್ಡಿ ಆಯೋಗ ಮತ್ತು ಶ್ರೀ ವೆಂಕಟಸ್ವಾಮಿ ಆಯೋಗವು ಬಹಳ ಉತ್ತಮ ರೀತಿಯಲ್ಲಿ ಕೆಲಸ ಮಾಡಿತ್ತು. ಆದರೆ ಅಂದಿನ ಸರ್ಕಾರ ಅದನ್ನು ಜಾರಿಗೊಳಿಸಲಿಲ್ಲ. ಜಾರಿಗೊಳಿಸುವುದಕ್ಕೆ ಬದ್ಧತೆ ಬೇಕು. ಆ ಬದ್ಧತೆ ಈಗಿನ ಸರ್ಕಾರದಲ್ಲಿದೆ ಎಂದು ನಾವು ಭಾವಿಸುತ್ತೇವೆ. ಈ ಸರ್ಕಾರದ ಮೇಲೆ ನಮಗೆ ನಂಬಿಕೆ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿವಂಗತ ಮಾನ್ಯ ದೇವರಾಜ್ ಅರಸುರವರು ನೇಮಿಸಿದ ಹಾವನೂರ ಕಮಿಷನ್ನನ್ನು ಹೇಗೆ ನೆನಪಿಸಿಕೊಳ್ಳುತ್ತೇವೆಯೋ ಅದೇರೀತಿ ಮಾನ್ಯ ಸಿದ್ದರಾಮಯ್ಯನವರ ಅವಧಿಯಲ್ಲಾದ ಈ ಕಮಿಷನ್ ರಚನೆ ಆಯಿತು ಎಂದು ಹೇಳಿದರೆ ತಪ್ಪಾಗಲಾರದು. ಇದರಿಂದ ಜನರ ಬೇಡಿಕೆಗಳು ಈಡೇರುವುದಕ್ಕೆ ಅವಕಾಶ ಸಿಗುತ್ತದೆ. ನಾವು ಅನೇಕ ಕಾರ್ಯಕ್ರಮಗಳನ್ನು ರೂಪಿಸುತ್ತೇವೆ. ಆ ಸಂದರ್ಭದಲ್ಲಿ ನಮ್ಮ ಹತ್ತಿರ ಮಾಹಿತಿ ಇದ್ದರೆ, ಆ ಮಾಹಿತಿಗೆ ಅನುಗುಣವಾಗಿ ಅವರನ್ನು ಮುಖ್ಯವಾಹಿನಿಗೆ ತರಬಹುದು. ಅದು ನಮಗೆ ಮೂಲ ಗ್ರಂಥದಂತಾಗುತ್ತದೆ. ನಾನಿರಬಹುದು, ಮಾನ್ಯ ಉಗ್ರಪ್ಪನವರಿರಬಹುದು, ಮಾನ್ಯ ಭೋಸರಾಜುರವರಿರಬಹುದು ಅಥವಾ ಮಾನ್ಯ ಕೆ.ಪಿ.ನಂಜುಂಡಿಯವರಿರಬಹುದು, ನಾವುಗಳು ಅನೇಕ ಸಂಘಟನೆಗಳನ್ನು ಕಟ್ಟಿ ಆ ಮೂಲಕ ಒತ್ತಾಯ ಮಾಡಿದ್ದೇವೆ. ಇವತ್ತು ಆ ವರದಿ ಕೊನೆಯ ಹಂತಕ್ಕೆ ಬಂದಿದೆ. ಚುನಾವಣೆ ಸಮಯವಾಗಿದ್ದರಿಂದ ಈ ಕೆಲಸ ಆಗಲಿಲ್ಲ ಎಂದು ನಾವು ಭಾವಿಸಿದ್ದೇವೆ. ಈಗ ಕಾಲ ಪರಿಪಕ್ವವಾಗಿದೆ. ಮಾನ್ಯ ಸಚಿವರೂ ಕೂಡ ಹಿಂದುಳಿದ ಸಮಾಜದಿಂದ ಬಂದಿದ್ದಾರೆ, ಅವರಿಗೆ ಮಾನ್ಯತೆ ಸಿಕ್ಕಿದೆ. ಸದರಿ ವರದಿಯನ್ನು ಮಂಡಿಸುವ ಬಗ್ಗೆ ಗಮನಹರಿಸಿ. ಮಾನ್ಯ ಸಭಾಪತಿಯವರೇ, ಜಾತಿಗಣತಿಯ ಪ್ರಕ್ರಿಯೆಯ ಬಗ್ಗೆ ಚರ್ಚೆ ಆದಾಗ ಹಿಂದುಳಿದ ವರ್ಗದಿಂದ ಬಂದ ಮಾನ್ಯ ಈಶ್ವರಪ್ಪ ಮತ್ತು ನಮ್ಮ ಮಧ್ಯೆ ಸಾಕಷ್ಟು ಘರ್ಷಣೆಯಾಯಿತು.

(ಮುಂದು . . .)

(112)06.07.2018 ಬಿಕೆಪಿ/ಬಿಎನ್ಎಸ್ 2.10

**ಶ್ರೀ ಹೆಚ್.ಎಂ. ರೇವಣ್ಣ(ಮುಂದು. .)**

ಅವರ ಹೆಸರನ್ನು ತೆಗೆದುಕೊಳ್ಳಬಾರದು ಎಂದೇನೂ ಇಲ್ಲ, ಹೇಳುತ್ತೇನೆ. ಏಕೆಂದರೆ, ನಮ್ಮಲ್ಲಿ ಜಾತಿಗಳನ್ನು ಹೇಳುವಲ್ಲಿ ಎಷ್ಟು ಕಷ್ಟವಾಗುತ್ತದೆ ಎಂದರೆ ಒಂದು ಜಾತಿಯಿಂದ ಪರಿವರ್ತನೆಯಾದಂತಹ ಜಾತಿಗಳನ್ನು original ಗೆ ಹಾಕಬೇಕೋ, ಮತ್ತೆ ಎಲ್ಲಿಗೆ ಹಾಕಬೇಕೆನ್ನುವ ಚರ್ಚೆಗಳು ಸಹ ಆದವು. ಇದರ ಬಗ್ಗೆ ಬಹಳಷ್ಟು exercise ಮಾಡಿ, ಚರ್ಚೆ ಮಾಡಿ, ಕೊನೆಗೆ ಇದಕ್ಕೆ ಒಪ್ಪಿಗೆಯನ್ನು ಕೊಟ್ಟರು. ನಾವು ಅದಕ್ಕೆ ಒಂದು ಸಮಿತಿಯನ್ನು ಸಹ ರಚನೆ ಮಾಡಿದೆವು. ವಿರೋಧ ಪಕ್ಷದವರು ಮತ್ತು ನಾವುಗಳೆಲ್ಲರೂ ಅಂದು ಈ ಕೆಲಸ ಆಗುವಂತೆ ತೀರ್ಮಾನ ಮಾಡಬೇಕೆಂಬ ಉದ್ದೇಶದಿಂದ ಹೇಳಿ, ಅದಕ್ಕೆ ಅಧಿಕಾರವನ್ನು ಕೊಟ್ಟಿದ್ದರಿಂದಾಗಿ ಈ ಒಂದು ಕೆಲಸ ಆಗಿದ್ದು, ಇದು ತಡವಾಗಬಾರದು, ತಕ್ಷಣ ಇದನ್ನು ಜಾರಿಗೊಳಿಸಬೇಕು. 102 ಜಾತಿಗಳಲ್ಲಿ ಯಾವುದೋ ಕೆಲವು ಜಾತಿಗಳಿಗೆ ಅವಕಾಶ ಸಿಕ್ಕುತ್ತದೆ ಎನ್ನುವುದರಲ್ಲಿ ತಪ್ಪೇನೂ ಇಲ್ಲ. ಆದರೆ, ಇದನ್ನು ಹೇಗೆ ಮಾಡಬೇಕೆನ್ನುವುದನ್ನು ತೋರಿಸಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ ದೃಷ್ಟಿಯಲ್ಲಿ ಅಳತೆಗೋಲು (yardstick) ಏನು ಎನ್ನುವುದರ ಬಗ್ಗೆ ಅದರ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಡುವುದಕ್ಕೋಸ್ಕರವೇ 54 Questionnaire ಗಳ ದೊಡ್ಡ ಪಟ್ಟಿ ಇದೆ. ಅದರಲ್ಲೂ ಆ ಸಮಯದಲ್ಲಿ ಈ ಕೆಲಸ ಮಾಡುವಲ್ಲಿ ಬೆಂಗಳೂರಿನ ಕೆಲವು ಕಡೆ ಬಾಗಿಲುಗಳನ್ನು ತೆಗೆಯಲಿಲ್ಲ. ವಿಳಂಬವಾಗುವುದಕ್ಕೆ ಅದು ಸಹ ಒಂದು ಕಾರಣ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ಇದರ ಬಗ್ಗೆ ಹೆಚ್ಚು ಆದ್ಯತೆ ಬಂತು. ಬೆಂಗಳೂರಿನಲ್ಲಿ ಬಾಗಿಲುಗಳನ್ನು ತೆರೆಯದ ಕಾರಣ ಬಹಳಷ್ಟು ಬಾರಿ ಹೋಗಿ ಅವರೊಂದಿಗೆ ಜಗಳ ಮಾಡಿದ್ದೇವೆ. ಅವರುಗಳು ಬಾಗಿಲುಗಳನ್ನೇ ತೆರೆಯುತ್ತಿರಲಿಲ್ಲ, ನಾಯಿಗಳನ್ನು ಬಿಡುತ್ತಿದ್ದರು. ಇದೆಲ್ಲವೂ ನಡೆದಿದೆ. ಹೀಗಾಗಿ, ಬಹಳಷ್ಟು ಕಷ್ಟ ಪಟ್ಟು ಜನಗಣತಿ ಕೆಲಸ ನಡೆದಿದೆ. ಅದರ Tabulation ಕೆಲಸವನ್ನು B.E.L. ನವರಿಗೆ ಕೊಟ್ಟಿದ್ದು, ಆ ಕೆಲಸವನ್ನೂ ಸಹ ಅವರು ಮಾಡಿದ್ದಾರೆ. ಈ ವಿಚಾರದಲ್ಲಿ ನಾವು ಖಂಡಿತವಾಗಿಯೂ ಸಹ ಒತ್ತಾಯ ಮಾಡುತ್ತೇವೆ. ಈ ವಿಚಾರದಲ್ಲಿ ನಾವು ಇಲ್ಲಿ ಮಾತನಾಡಿದವರು ಮಾತ್ರವಲ್ಲದೇ, ಈ ಸದನವೇ ಇದಕ್ಕೆ ಬೆಂಬಲವಿದೆ ಎಂದು ಭಾವಿಸುತ್ತೇನೆ.

ಮಾನ್ಯ ಸದಸ್ಯರಾದ ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ ರವರು ತಂದಿರುವಂತಹ ಗಮನ ಸೆಳೆಯುವ ಸೂಚನೆ ಬಗ್ಗೆ ಇಡೀ ಸದನವೇ ಇದರ ಪರವಾಗಿದೆ. ಯಾವುದೇ ಒಂದು ಜಾತಿಯ ವಿರುದ್ಧವಾಗಲಿ, ಈ ವಿಚಾರ ಇನ್ನೊಂದು ಜಾತಿಯ ಪರವಾಗಿ ಆಗಲಿ ಇಲ್ಲದೇ ಇರುವಂತಹದ್ದಾಗಿದೆ. ಸಾಮಾಜಿಕ ನ್ಯಾಯಕ್ಕೆ ಕಳಕಳಿ ಇರುವಂತಹ ವಿಷಯ ಇದಾಗಿದೆ. ಆದ್ದರಿಂದ, ತಮ್ಮ ಮೂಲಕ ಈ ವಿಚಾರವಾಗಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇದನ್ನು ಅತಿ ಶೀಘ್ರವಾಗಿ ಕಾರ್ಯರೂಪಕ್ಕೆ ತರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ಮಾನ್ಯ ಸಚಿವರು time bound ಇಟ್ಟುಕೊಂಡು ಹೇಳಬೇಕು. ಈ ಹಿಂದೆಯೂ ಸಹ ಈ ವಿಚಾರವಾಗಿ ವರದಿಗಳು ಬಂದಿವೆ. ವರದಿಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಇಚ್ಛಾಶಕ್ತಿಯನ್ನು ತೋರಿಸಿದವರು ಶ್ರೀಮಾನ್ ದೇವರಾಜ್ ಅರಸ್ ರವರು ಒಬ್ಬರೆ. ಅದರ ನಂತರ ಬಂದವರು ಅದನ್ನು twists ಮಾಡಿ ಅನ್ಯಾಯ ಮಾಡಿದ್ದಾರೆ. ಆ ಬದ್ಧತೆಯನ್ನೇ ಇಟ್ಟುಕೊಂಡಿರುವ ನಮ್ಮ ನಾಯಕರಾದ ಶ್ರೀ ಕುಮಾರಸ್ವಾಮಿಯವರು ಈ ಕೆಲಸವನ್ನು ಮಾಡುತ್ತಾರೆ. ಈ ಸರ್ಕಾರ ಸಹ ಈ ನಿಟ್ಟಿನಲ್ಲಿ ಬದ್ಧತೆಯಿಂದ ಕೆಲಸವನ್ನು ಮಾಡಬೇಕೆಂದು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಸಿ. ಪುಟ್ಟರಂಗಶೆಟ್ಟಿ(ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು 3ನೇ ಬಾರಿ ಶಾಸಕನಾಗಿದ್ದೇನೆ. ನಾನು ಸಹ ಹಿಂದುಳಿದ ಜನಾಂಗಕ್ಕೆ ಸೇರಿದವನಾಗಿದ್ದು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರವರ್ಗ-1 ರಲ್ಲಿ ಬರುತ್ತೇನೆ. ಈ ವಿಚಾರದಲ್ಲಿ ನನಗೂ ಬಹಳ ಆಸಕ್ತಿ ಇದ್ದು, ಇದನ್ನು ನೋಡಬೇಕೆಂದು ಮೊದಲಿನಿಂದಲೂ ಆಸೆ ಪಟ್ಟಿದ್ದೆ. ಈ ಒಂದು ಸುಯೋಗವು ನನಗೆ ಈಗ ಸಿಕ್ಕಿದೆ ಎಂದು ತಿಳಿದುಕೊಂಡಿದ್ದೇನೆ. ಹೀಗಾಗಿ, ಆದಷ್ಟು ಬೇಗ ಇದನ್ನು ಖಂಡಿತವಾಗಿಯೂ ಸಹ ಬಿಡುಗಡೆ ಮಾಡುವಂತಹ ಪ್ರಯತ್ನವನ್ನು ನಾನು ಮಾಡುತ್ತೇನೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾನು ಒಂದೇ ವಿಷಯವನ್ನು ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಮಂತ್ರಿಗಳು ಇಲ್ಲಿ ಗಮನಿಸಬೇಕು. ಈ ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗದವರಿಗೆ ಯಾರಾದರೂ ಸಹಾಯ ಮಾಡುವಂತಹ ಶಕ್ತಿ ಇದ್ದರೆ ಅಥವಾ ಕಷ್ಟದಲ್ಲಿ ಇರುವಂತಹ ಹಿಂದುಳಿದ ವರ್ಗದವರು ನಮಗೆ ನ್ಯಾಯ ಕೊಡಬಲ್ಲರು ಎಂದು ಯಾರನ್ನಾದರೂ ಆಶಿಸುವುದಿದ್ದರೆ ಅದು ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಮಂತ್ರಿಗಳಾದ ಶ್ರೀಯುತ ಪುಟ್ಟರಂಗಶೆಟ್ಟಿಯವರು ಎಂದು ನಾನು ತಿಳಿದುಕೊಂಡಿದ್ದೆ. ಮೊದಲು ಮುಖ್ಯಮಂತ್ರಿಗಳಾಗಿ ಶ್ರೀಮಾನ್ ಸಿದ್ದರಾಮಯ್ಯನವರು ಇದ್ದರು. ಅದಕ್ಕೆ ವಿರೋಧಗಳು ಇರಲಿಲ್ಲ. ದಿನಾಂಕ: 11-04-2015 ರಿಂದ ಈ ಜಾತಿ ಜನಗಣತಿ ಕೆಲಸ ಪ್ರಾರಂಭವಾಗಿದೆ. ಈ ಸಂಬಂಧ ನನ್ನನ್ನು ಶ್ರೀ ವಿ.ಎಸ್.ಉಗ್ರಪ್ಪನವರನ್ನು, ಶ್ರೀ ಕೆ.ಎಸ್.ಈಶ್ವರಪ್ಪನವರನ್ನು ಒಂದು ಬಾರಿ ಶ್ರೀ ಕಾಂತರಾಜು ರವರು ಕರೆದಿದ್ದರು. ಕರೆದು ಚರ್ಚೆ ಮಾಡಿ ಕೆಲವೊಂದು ಸಣ್ಣ-ಪುಟ್ಟ ವಿಚಾರಗಳಿಗೆ ನಾವೆಲ್ಲರೂ ಒಂದೇ ನಿರ್ಣಯ ತೆಗೆದುಕೊಂಡಿದ್ದೇವೆ; ಎಲ್ಲಾ ಪಕ್ಷಗಳವರು ಒಂದೇ ನಿರ್ಣಯವನ್ನು ತೆಗೆದುಕೊಂಡಿದ್ದೆವು. ಏಕೆಂದರೆ, ಜಾತಿ ಗಣತಿ ಕೆಲಸ ಆಗಬೇಕೆಂದು ಆ ಒಂದು ನಿರ್ಣಯ ತೆಗೆದುಕೊಂಡಿದ್ದೆವು. ನಮಗೆ ಪೂರ್ಣವಾಗಿ ಸರಿ ಎನಿಸಿರಲಿಲ್ಲ. ಆದರೆ, ಆ ಸಂದರ್ಭದಲ್ಲಿ ಒಂದು ನಿರ್ಧಾರ ಬೇಕಾಗಿದ್ದರಿಂದ ಆ ಒಂದು ನಿರ್ಣಯ ತೆಗೆದುಕೊಂಡಿದ್ದೆವು. ಚುನಾವಣೆಗೆ ಮೊದಲು ಜಾತಿ ಗಣತಿ ಬಗ್ಗೆ ನಿರ್ಣಯ ತೆಗೆದುಕೊಳ್ಳಲಾಗಿತ್ತು. ಈಗ ಸಮಾಜ ಕಲ್ಯಾಣಕ್ಕೆ ಒಬ್ಬರು ಸಚಿವರು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಒಬ್ಬರು ಸಚಿವರು ಸೇರಿ ಇಬ್ಬರು ಸಚಿವರಿದ್ದಾರೆ. ಮೊದಲು ಈ ಎರಡು ಇಲಾಖೆಗಳಿಗೂ ಒಬ್ಬರೇ ಸಚಿವರಾಗಿ ಶ್ರೀಯುತ ಆಂಜನೇಯ ರವರು ಇದ್ದರು. ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾಗಿದ್ದ ಶ್ರೀಯುತ ಹೆಚ್. ಆಂಜನೇಯ ರವರು ನಮಗೆ ಏನು ಹೇಳಿದ್ದರು ಎಂದರೆ, ಈ ಚುನಾವಣೆಗಿಂತ ಮೊದಲು ವರದಿಯನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರು. ಚುನಾವಣೆಯಲ್ಲಿ ಶ್ರೀಯುತ ಆಂಜನೇಯ ರವರು ಆಯ್ಕೆಯಾಗಲಿಲ್ಲ. ಈಗ ನಾವು ನಿಮ್ಮ ಹತ್ತಿರ ಕೇಳಲಿಕ್ಕೆ ಬಯಸುತ್ತೇನೆ. ಯಾವ ರೀತಿಯಲ್ಲಿ ಮಾನ್ಯ ಸದಸ್ಯರಾದ ಶ್ರೀ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿ.ಎಸ್.ಉಗ್ರಪ್ಪನವರು ಹೇಳಿದ್ದಾರೆ, ಯಾವ ರೀತಿಯಲ್ಲಿ ಶ್ರೀ ಹೆಚ್.ಎಂ. ರೇವಣ್ಣನವರು ಹೇಳಿದ್ದಾರೆ, ಅದೇ ಮಾದರಿಯಲ್ಲಿ ಪತ್ರಿಕೆಗಳು ಹೇಳಿವೆ. ಹಿಂದುಳಿದ ವರ್ಗಗಳ ಆಯೋಗ ಸಿದ್ದಪಡಿಸಿದ ವರದಿ ಸದ್ದಿಲ್ಲದೇ ಸರ್ಕಾರದ ಕೈ ಸೇರಿತು, ಎಂದು ಹೇಳಿವೆ. ಸರ್ಕಾರವನ್ನು ನಡೆಸುವಂತಹ ಮಂತ್ರಿಗಳ ಗಮನಕ್ಕೆ ಈ ವಿಚಾರ ಬಂದಿಲ್ಲ ಎಂದರೆ ನಂಬುವವರು ಯಾರು?

**ಶ್ರೀ ಸಿ.ಪುಟ್ಟರಂಗಶೆಟ್ಟಿ(ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಚಾರ ನನ್ನ ಗಮನಕ್ಕೆ ಬಂದಿಲ್ಲವೆಂದು ಹೇಳಿಲ್ಲ.

**ಸಭಾಪತಿಯವರು:-** ಮಂತ್ರಿಗಳೇ ತಾವು ನಂತರ ಉತ್ತರಿಸಿ, ವಿರೋಧ ಪಕ್ಷದ ನಾಯಕರೇ ತಾವು ಭಾಷಣವನ್ನು ಮುಂದುವರಿಸಬೇಕು.

(ಗೊಂದಲ)

**ಶ್ರೀ ಸಿ.ಪುಟ್ಟರಂಗಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ತಕ್ಷಣವೇ ವರದಿಯನ್ನು ಬಿಡುಗಡೆ ಮಾಡಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಪ್ಪಿಕೊಂಡಿದ್ದಾಯಿತು. ಹೀಗಾಗಿ, ನಾನು ಅದರ ಬಗ್ಗೆ ಹೆಚ್ಚಿಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. 200 ಕೋಟಿ ರೂಪಾಯಿಗಳ ಒಂದು ಯೋಜನೆ ಇತ್ತು. ಆ ಯೋಜನೆಗೆ ಸಂಬಂಧಪಟ್ಟಂತೆ ಹೆಚ್ಚು ಕಡಿಮೆ 175 ರಿಂದ 180 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ಅಂಶವನ್ನು ತಾವು ಗಮನಿಸಬೇಕು. ಎಂತಹ ಅಗಾಧವಾದಂತಹ ವ್ಯವಸ್ಥೆ. ಶ್ರೀಮಾನ್ ಸಿದ್ದರಾಮಯ್ಯನವರಿಗೆ ಈ ಬಗ್ಗೆ ತಾವು ಕೇಳಬೇಕು. ಬಹಳ ದಿನಗಳ ನಂತರ ಈ ಒಂದು ಕೆಲಸವನ್ನು ಮಾಡಿದ್ದೀರಿ ಎಂದು ಹೇಳಿ ಶ್ರೀ ಸಿದ್ದರಾಮಯ್ಯನವರಿಗೆ ಮತ್ತು ಶ್ರೀ ಹೆಚ್.ಆಂಜನೇಯರವರಿಗೆ ನಾನು ಅಭಿನಂದನೆಯನ್ನು ಸಲ್ಲಿಸಿದ್ದೆ. ಇವತ್ತು ಈ ಸಂಬಂಧ ವರದಿ ತಮ್ಮ ಹತ್ತಿರ ಇದೆ. ಇದು ಏನು ಸಣ್ಣ ಕೆಲಸವಲ್ಲ. ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಜಾತಿಗಳು, ಎಲ್ಲಾ ಧರ್ಮಗಳು ಸೇರಿ ಆರೂವರೆ ಕೋಟಿ ಜನಸಂಖ್ಯೆ ಇದೆ. ವರದಿಯ ಪ್ರಕಾರ 1,31,00,000 ಗಣತಿಗೆ ಒಳಗಾಗಿರುವಂತಹ ಕುಟುಂಬಗಳಿವೆ. 1,27,000 ಏರಿಯಾಗಳನ್ನು/ಬ್ಲಾಕ್‌ಗಳನ್ನು ಗುರುತಿಸಲಾಗಿದೆ. ಜಾತಿ ಗಣತಿ ಸಮೀಕ್ಷೆಯಲ್ಲಿ ಪಾಲ್ಗೊಂಡು ಗಣತಿದಾರರ ಸಂಖ್ಯೆ 1,33,000. ಹಿಂದುಳಿದ ವರ್ಗಗಳ ಮಂತ್ರಿಗಳು ಈ ಬಗ್ಗೆ ಕೇಳಬೇಕು. ಗಣತಿಯಲ್ಲಿ ಪಾಲ್ಗೊಂಡ ಸಿಬ್ಬಂದಿಗಳ ಸಂಖ್ಯೆ 1,33,000. ಇದು ಎಷ್ಟು ಅಗಾಧವೆಂಬುದನ್ನು ಮಂತ್ರಿಗಳು ಗಮನಿಸಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರು, ತಾವು ಬೇಗ ಮುಗಿಸಬೇಕು. ಏಕೆಂದರೆ, ಮಾನ್ಯ ಸದಸ್ಯರೊಬ್ಬರು ಊಟಕ್ಕೆ ಸಮಯವಾಯಿತು ಎಂದು ಹೇಳಿ ನನಗೆ ಒಂದು ಚೀಟಿಯನ್ನು ಕಳುಹಿಸಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಾವು ಗಮನಿಸಬೇಕು. ನಾನೇನೂ ಹೆಚ್ಚು ಮಾತನಾಡುವುದಿಲ್ಲ. 76 ಮಂದಿ A.C.(Assistant Commissioner) ಗಳು 176 ತಹಶೀಲ್ದಾರ್‌ಗಳು. 551 ಸ್ಥಳೀಯ ಸಂಸ್ಥೆಗಳ ಆಯುಕ್ತರ ಮೇಲ್ವಿಚಾರಣೆ, ಇಷ್ಟೊಂದು ಅಗಾಧವಾಗಿರುವಂತಹ ಒಂದು ವ್ಯವಸ್ಥೆ. 750 ಜನರಿಗೆ, 120 ರಿಂದ 150 ಕುಟುಂಬಗಳಿಗೆ ಒಬ್ಬ ಗಣತಿದಾರರು ಇದ್ದರು. ನೀವು ಈ ಗಣತಿಯನ್ನು ಊಹೆ ಸಹ ಮಾಡಲಿಕ್ಕೆ ಸಾಧ್ಯವಿಲ್ಲ. ಮಾಧ್ಯಮಗಳಲ್ಲಿ, ಪತ್ರಿಕೆಗಳಲ್ಲಿ ಈ ವಿಚಾರವಾಗಿ ಏನು ವರದಿ ಬರುತ್ತದೆ; ವರದಿಯನ್ನು ಶಾಸನ ಸಭೆಯಲ್ಲಿ ಮಂಡನೆ ಮಾಡಬೇಕೇ ಅಥವಾ ಇನ್ನಷ್ಟು ದಿವಸ ಅದನ್ನು ಬಹಿರಂಗ ಪಡಿಸದೇ ಹಾಗೆಯೇ ಉಳಿಸಿಕೊಳ್ಳಬೇಕೇ ಎನ್ನುವ ವಿಚಾರದಲ್ಲಿ ಸರ್ಕಾರ ಇನ್ನೂ ತೀರ್ಮಾನಕ್ಕೆ ಬಂದಿಲ್ಲ. ನಮಗೆ ಸ್ಪಷ್ಟವಾದ ಮಾಹಿತಿ ಸಿಕ್ಕಿರುವುದೇನೆಂದರೆ ಹಿಂದುಳಿದ ವರ್ಗಗಳ ಆಯೋಗದ ವರದಿ, ಜನ ಗಣತಿಯ ವರದಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಕಡೆ ಇದೆ. ಈ ಸಾಲ ಮನ್ನಾವೂ ಸೇರಿದಂತೆ ಅಗತ್ಯ ಬಿದ್ದಾಗಲೆಲ್ಲಾ, ಸರ್ಕಾರವೂ ಆ ವರದಿಯ ಮಾಹಿತಿಯನ್ನು ಪಡೆಯುತ್ತದೆ. ಅದು ಸರಿಯೋ ತಪ್ಪೋ ಗೊತ್ತಿಲ್ಲ. ಸರ್ಕಾರ ಅದನ್ನು ಮಂಡಿಸಲಿಕ್ಕೆ ಇರುವಂತಹ ತೊಂದರೆ ಏನು? ಯಾರದ್ದಾದರೂ ಆತಂಕ ಇದೆಯೇ? ಯಾವುದಾದರೂ ಸಣ್ಣ ಜಾತಿ ಮತ್ತು ದೊಡ್ಡ ಜಾತಿಯವರ ಮಧ್ಯೆ ಸಂಘರ್ಷ ಆಗುತ್ತದೆ ಎಂದು ಹೇಳಿ ನಿಮಗೆ ಆತಂಕ ಇದೆಯೇ? ಇದಕ್ಕೆ ಹಣ ಖರ್ಚು ಮಾಡಿಯಾಯಿತು, ಲಕ್ಷಾಂತರ ಜನರನ್ನು ಅವರು ಆಗ ಉಪಯೋಗಿಸಿಕೊಂಡಿದ್ದಾರೆ. ಜನಗಣತಿಯ ವರದಿಯನ್ನು ನೀವು ಮಂಡನೆ ಮಾಡದೇ ಇದ್ದರೆ ಹಿಂದುಳಿದ ವರ್ಗಕ್ಕೆ ದ್ರೋಹ ಮಾಡಿದಂತಾಗುತ್ತದೆ. ಈ ಬಗ್ಗೆ ಮಂತ್ರಿಗಳು ಹೇಳಬೇಕು. ಮೊನ್ನೆ ತಾನೇ ಮಂತ್ರಿಗಳಾಗಿ ಬಂದಿರುವವರನ್ನು ಇದಕ್ಕೆ ಅವರೇ ಹೊಣೆ ಎಂದು ಹೇಳುವುದಕ್ಕಾಗುತ್ತದೆಯೇ? ಖಂಡಿತವಾಗಿಯೂ ಇಲ್ಲ. ಆದರೆ, ಹೊಸದಾಗಿ ಬಂದಿರುವಂತಹ ಮಂತ್ರಿಗಳಿಗೆ ಈ ಬಗ್ಗೆ ಜವಾಬ್ದಾರಿ ಇದೆ. ಇದು ಸರಿ ಇದೆಯೇ ಎನ್ನುವುದನ್ನು ಶ್ರೀಯುತ ಕೃಷ್ಣ ಬೈರೇಗೌಡರು ಹೇಳಬೇಕು. ಇದಕ್ಕೆ ಅವರು ಹೊಣೆಗಾರರಲ್ಲ. ಆದರೆ, ಇವತ್ತು ಇವರಿಗೆ ಈ ವಿಚಾರದಲ್ಲಿ ಜವಾಬ್ದಾರಿ ಇದೆ. ಹೊಸದಾಗಿ ಬಂದಿರುವಂತಹ ಮಂತ್ರಿಗಳು ಈ ಬಗ್ಗೆ ಏನು ಹೇಳಬೇಕಾಗಿತ್ತು ಎಂದರೆ, ಇನ್ನು 4-5 ದಿವಸಗಳಲ್ಲಿ ಈ ವರದಿಯನ್ನು ಪೂರ್ಣ ಪ್ರಮಾಣದಲ್ಲಿ ಸದನದಲ್ಲಿ ಮಂಡಿಸುತ್ತೇನೆ ಎಂದು ಹೇಳಿದ್ದರೆ ನಾವು ಮಾನ್ಯ ಸಚಿವರ ತಾಕತ್ತಿಗೆ ಗೌರವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಬೇಕಾಗಿತ್ತು. ಅದನ್ನು ಬಿಟ್ಟು, ಅತಿ ಶೀಘ್ರದಲ್ಲಿ, ಅತಿ ಶೀಘ್ರದಲ್ಲಿ ಎಂದು ಹೇಳಿದರೆ ಅದು ಆಗುವುದಿಲ್ಲವೆಂದು ಮಾನ್ಯ ಸಭಾಪತಿಯವರ ಗಮನಕ್ಕೆ ತರಬಯಸುತ್ತೇನೆ. ಸರ್ಕಾರ ಏನು ಉತ್ತರ ಕೊಡಬೇಕೆಂದರೆ ಈ ವರದಿಯನ್ನು ಯಾವತ್ತು ಮಂಡಿಸುತ್ತೀರಿ ಅಥವಾ ಈ ಸದನ ನಡೆಯುವಂತಹ ಅಂತಿಮ ದಿವಸದಲ್ಲಿಯಾದರೂ ಈ ವರದಿಯನ್ನು ಮಂಡಿಸುತ್ತೇನೆಂದು ಹೇಳದೇ ಇದ್ದರೆ ನಾವು ಹೋಗಿ ಧರಣಿಗೆ ಕುಳಿತುಕೊಳ್ಳುತ್ತೇವೆ. ಏಕೆಂದರೆ, ಇದಕ್ಕೆ ನಮಗೆ ಬೇರೆ ದಾರಿಯೇ ಇರುವುದಿಲ್ಲ. ಇದು ನಮ್ಮ ಪ್ರಶ್ನೆಯಲ್ಲ. ಇದು ರಾಜ್ಯದ ಜನರ ಪ್ರಶ್ನೆ. 186 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ.

ಮಾನ್ಯ ಸದಸ್ಯರಾದ ಶ್ರೀಯುತ ವಿ.ಎಸ್. ಉಗ್ರಪ್ಪನವರು ಸಹ ಯಾವತ್ತೂ ಸಹ ಒಂದು ಚೌಕಟ್ಟನ್ನು ಮೀರಿ ಮಾತನಾಡುವುದಿಲ್ಲ. ಅಂಥವರು ಸಹ ಬಹಳ ನೋವಿನಿಂದ ಮಾತನಾಡಿದ್ದಾರೆ. ಅಲ್ಲದೆ ಶ್ರೀಯತ ಹೆಚ್.ಎಂ. ರೇವಣ್ಣನವರು ಸಹ ಈ ವಿಚಾರದಲ್ಲಿ ಸಂಕೋಚ ಬಿಟ್ಟು ಮಾತನಾಡಿದ್ದಾರೆ. ನಮ್ಮ ಹೊಸ ಸದಸ್ಯರಾದ ಶ್ರೀಯುತ ಕೆ.ಪಿ.ನಂಜುಂಡಿ ವಿಶ್ವಕರ್ಮ ರವರು ಹಿಂದುಳಿದ ವರ್ಗಗಳ ಬಗ್ಗೆ ಹೇಳಿದ್ದು, ಈ ಸದನಕ್ಕೆ ಸದಸ್ಯನಾಗಿ ಬಂದಿದ್ದು ಸಾರ್ಥಕವಾಯಿತು ಎಂದು ನಮಗೆ ಅನಿಸಿತು. ಹೀಗಾಗಿ, ಈ ವಿಚಾರದಲ್ಲಿ ನಮಗೆ ಪಕ್ಷ ಬೇಧವಿಲ್ಲ. ದಯವಿಟ್ಟು ಸದನದ ಅಂತಿಮ ದಿವಸದೊಳಗೆ ಈ ವರದಿಯನ್ನು ಮಂಡನೆ ಮಾಡುವುದಾಗಿ ಹೇಳಿದರೆ ನಾವು ಸರ್ಕಾರಕ್ಕೆ ಗೌರವ ಕೊಡುತ್ತೇವೆ. ಇಲ್ಲದೇ ಹೋದರೆ ನಾವು ಬಾವಿಯಲ್ಲಿ ಹೋಗಿ ಧರಣಿ ಕುಳಿತುಕೊಳ್ಳುತ್ತೇವೆ. ಈ ಬಗ್ಗೆ ತೀರ್ಮಾನ ಸರ್ಕಾರದ್ದು.

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಈ ಒಂದು ಜನಗಣತಿ ಕಾರ್ಯ ಮಾಡಿರುವಂತಹುದು ಬಹಳ ಶ್ಲಾಘನೀಯವಾದಂತಹ ಕೆಲಸವಾಗಿದೆ. ಹೀಗಾಗಿ, ನಾನು ಈ ವಿಚಾರದಲ್ಲಿ ವಿಶೇಷವಾಗಿ ಮಾಜಿ ಮುಖ್ಯಮಂತ್ರಿಗಳಾದಂತಹ ಶ್ರೀಮಾನ್ ಸಿದ್ದರಾಮಯ್ಯನವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಸಮಯವನ್ನು ನೋಡಿಕೊಳ್ಳಲಿಕ್ಕೆ ನಮ್ಮೆಲ್ಲರಿಗೂ ವಾಚ್ ಇರುತ್ತದೆ. ಎಲ್ಲರೂ ಸಹ ನಾವು ವೈಯಕ್ತಿಕವಾಗಿ ವಾಚ್ ಕಟ್ಟಿಕೊಂಡಿರುತ್ತೇವೆ. ನಾವು ವೈಯಕ್ತಿಕವಾಗಿ ಒಂದು ವರ್ಷದ ಟೈಮ್ ಟೇಬಲ್ ಹಾಕಿಕೊಳ್ಳುತ್ತೇವೆ. ಆದರೆ, ಹಿಂದುಳಿದಂತಹವರಿಗೆ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಯಾರು ಇವತ್ತು ಬಹಳಷ್ಟು ಸಮುದಾಯದವರು ಸಮಾಜದಲ್ಲಿ ಮನುಷ್ಯರಂತೆಯೇ ಬದುಕುತ್ತಿಲ್ಲ.

**ಮುಂದು. . .**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(113) 06.07.2018 02.20 ಎಸ್‌ವಿ-ಬಿಎನ್‌ಎಸ್

**ಶ್ರೀ ಎನ್.ರವಿಕುಮಾರ್ (ಮುಂದು):-**

ಅವರಿಗೂ ಕೂಡ ಸಾಮಾಜಿಕ ನ್ಯಾಯವನ್ನು ಕೊಡಬೇಕು ಎನ್ನುವ ಕಾರಣಕ್ಕಾಗಿ ಇದನ್ನು ಮಾಡಿದ್ದು, ಅದಕ್ಕೆ ನನ್ನ ಶ್ಲಾಘನೆಯನ್ನು ವ್ಯಕ್ತಪಡಿಸುತ್ತೇನೆ. ಎರಡು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ವರದಿ ಸಿದ್ಧವಾಗಿದೆ, ಬಿಡುಗಡೆಯಾಗಬೇಕು ಎಂದು ಮಾನ್ಯ ಉಗ್ರಪ್ಪನವರು ಹೇಳಿದರು. ವರದಿ ಸಿದ್ಧತೆಯಾಗುತ್ತಿದೆ ಎಂಬ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದು, ಅದರ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಿದರು. ಮಾನ್ಯ ಉಗ್ರಪ್ಪನವರು, ಮಾನ್ಯ ರೇವಣ್ಣನವರು ಹಾಗೂ ಇತರ ಮಾನ್ಯ ಸದಸ್ಯರು ಹೇಳಿದ ಮೇಲೆ ವರದಿ ಈಗಾಗಲೇ ಸಿದ್ಧವಿದ್ದು, ಅದನ್ನು ಬಿಡುಗಡೆ ಮಾಡುವ ಇಚ್ಛಾಶಕ್ತಿಯನ್ನು ತೋರಿಸುತ್ತಿಲ್ಲ ಎಂಬುದು ನನಗೆ ಈಗ ಮನವರಿಕೆಯಾಗುತ್ತಿದೆ. ಯಾರಿಗೆ ಇಚ್ಛಾಶಕ್ತಿಯ ಕೊರತೆ ಇದೆ? ಮಾನ್ಯ ರೇವಣ್ಣನವರು, ಮಾನ್ಯ ಉಗ್ರಪ್ಪನವರು ಬಿಡುಗಡೆ ಮಾಡಬೇಕೆಂದು ಹೇಳುತ್ತಿದ್ದಾರೆ. ವಿರೋಧಪಕ್ಷದವರಾದ ನಾವೂ ಸಹ ವರದಿಯನ್ನು ಬಿಡುಗಡೆ ಮಾಡಬೇಕೆಂದು ಹೇಳುತ್ತಿದ್ದೇವೆ. ಇದಕ್ಕೆ ಇಲ್ಲಿ ಯಾರು ಅಡ್ಡಿ ಇದ್ದಾರೆ? ಆದ್ದರಿಂದ ಇದನ್ನು ಯಾವತ್ತು ಬಿಡುಗಡೆ ಮಾಡಲಾಗುವುದು ಎಂದು ಒಂದು ದಿನಾಂಕವನ್ನು ನಿಗದಿ ಪಡಿಸಲಿ. ಅಥವಾ ಒಂದು ವಾರದಲ್ಲಿ, ಎರಡು ವಾರದಲ್ಲಿ ಬಿಡುಗಡೆ ಮಾಡುತ್ತೇವೆಂದು ನಿಶ್ಚಯ ಪಡಿಸಲಿ. ಸದನದ ಒಳಗೆ ಬಿಡುಗಡೆ ಮಾಡಲಿ.

**ಸಭಾಪತಿಯವರು:-** ಮಾನ್ಯ ರವಿಕುಮಾರ್ ಅವರೆ, ಬೇಗ ಮುಗಿಸಿ, ಸಮಯವಾಯಿತು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ಕೆ.ಪಿ.ಎಸ್.ಸಿ.ಯಿಂದ ಒಂದು ಡಿ-ದರ್ಜೆ ನೌಕರರಾಗಿಯೂ ಸಹ ನೇಮಕಗೊಳ್ಳದಂತಹ ಅನೇಕ ಸಮುದಾಯಗಳಿವೆ. ಅವರು ಯಾವಾಗ ಶೈಕ್ಷಣಿಕವಾಗಿ, ವೈಜ್ಞಾನಿಕವಾಗಿ ಮುಂದೆ ಬರಬೇಕು? ಅವರಿಗೂ ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ನ್ಯಾಯ ಸಿಗಬೇಕೆಂದಾದರೆ ನಮಗೆ ಯಾವುದಾದರೊಂದು ಮೂಲ ಬೇಕಾಗಿದೆ. ಆದ್ದರಿಂದ ಆ ವರದಿಯನ್ನು ಕೂಡಲೇ ಬಿಡುಗಡೆ ಮಾಡಬೇಕು. ಆ ಇಚ್ಛಾಶಕ್ತಿಯನ್ನು ಸರ್ಕಾರ ಮತ್ತು ಸಚಿವರು ಪ್ರಕಟಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಆಗ್ರಹಿಸುತ್ತೇನೆ.

**ಶ್ರೀ ಪಿ.ಆರ್.ರಮೇಶ್ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರದಲ್ಲಿ ಜಾತಿ ಸಮೀಕ್ಷೆ ಎಂಬ exercise ಪ್ರಾರಂಭವಾಗಿದ್ದು, ಇದು ಇಡೀ ದೇಶದಲ್ಲಿಯೇ

ತಿದ್ದುಪಡಿಯಾಗದ ಪ್ರತಿ. ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೊಟ್ಟಮೊದಲನೆಯದ್ದಾಗಿ ಆಗಿದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಕೆಲವು ಮಾನ್ಯ ಸದಸ್ಯರು ಪ್ರತಿಭಟನೆಯ ರೀತಿಯಲ್ಲಿ ಮಾತನಾಡಿದುದನ್ನು ಗಮನಿಸಿ ಒಂದು ಮಾತನ್ನು ಹೇಳಬಯಸುತ್ತೇನೆ. 2005ರಲ್ಲಿ ಕಾಂಗ್ರೆಸ್-ಜೆ.ಡಿ.(ಎಸ್) ನೇತೃತ್ವದ ಅಂದಿನ ಸರ್ಕಾರವಿದ್ದಾಗ ಈ ಸಮೀಕ್ಷೆಯನ್ನು ಮಾಡಬೇಕೆಂಬ ಪ್ರಸ್ತಾಪ ಆರಂಭವಾಯಿತು. ಆಗ ಮಾನ್ಯ ಸಿದ್ದರಾಮಯ್ಯನವರು ಹಣವನ್ನು ಇದಕ್ಕಾಗಿ ಮೀಸಲಿರಿಸಿ, ಶ್ರೀ ದ್ವಾರಕಾನಾಥ್ ಅವರ ಅಧ್ಯಕ್ಷತೆಯಲ್ಲಿ exercise ಪ್ರಾರಂಭವಾಯಿತು. ಆದರೆ 2008ರಲ್ಲಿ ಬಿ.ಜೆ.ಪಿ. ಬಂದ ಮೇಲೆ 2013ರವರೆವಿಗೂ ಈ ವಿಷಯವನ್ನು....

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್ ಅವರು ವಿಷಯದ ಬಗ್ಗೆ ಅಷ್ಟೇ ಮಾತನಾಡಲಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವರೇ ಮಾಡಿದ್ದೆಂದೇ ಹೇಳಿದ್ದೇವೆ. ನಾವು ಮಾಡಿದ್ದೇವೆಂದು ಎಲ್ಲಿಯೂ ನಾವು ಹೇಳಿಲ್ಲ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ರಾಜಕೀಯ ಇಚ್ಛಾಶಕ್ತಿಯ ಬಗ್ಗೆ ಅವರು ಮಾತನಾಡಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ರಾಜಕಾರಣವನ್ನು ಬೆರೆಸುವುದು ಬೇಡ.

(ಗೊಂದಲ)

**ಸಭಾಪತಿಯವರು:-** ಮಾನ್ಯ ರಮೇಶ್ ಅವರೇ, ಇದು ಪಕ್ಷಾತೀತವಾದ ವಿಷಯವಾಗಿದೆ.

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರು ನಮಗೆ ಇದೇ ರೀತಿಯಾಗಿ ಮಾತನಾಡಬೇಕೆಂದು dictate ಮಾಡಬಾರದೆಂದು ಕೈಮುಗಿದು ಪ್ರಾರ್ಥಿಸುತ್ತೇನೆ. ಅದನ್ನು ನಮಗೆ ಹೇಳಲು ತಾವಿದ್ದೀರಿ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ನಾನು ಹೀಗೆಯೇ ಮಾತನಾಡಬೇಕೆಂದು ಹೇಳಲಿಲ್ಲ. ನಮಗೂ ಅದರ ಬಗ್ಗೆ ತಿಳಿದಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್**:- ಮಾನ್ಯ ಸಭಾಪತಿಯವರೇ, ಈ ಸಮೀಕ್ಷೆ ಪೂರ್ಣಗೊಂಡು ಸುಮಾರು 10 ವರ್ಷಗಳಾಗಬೇಕಿತ್ತು. ಅಂದು ಆಗದಿದ್ದಂತಹ exercise, 2015ರಲ್ಲಿ ಪ್ರಾರಂಭವಾಗಿ ಇನ್ನು 2-3 ವರ್ಷಗಳು ಮಾತ್ರ ಆಗಿವೆ. ಮಾನ್ಯ ಸಚಿವರು ಕೊಟ್ಟಿರತಕ್ಕಂತಹ ಉತ್ತರ ಸರಿಯಾಗಿದೆ. ಮಾಹಿತಿಯ ಕ್ರೋಢೀಕರಣ ಕಾರ್ಯ ಪೂರ್ಣಗೊಂಡಿರುತ್ತದೆ, ಸಮೀಕ್ಷೆಯ ವಿಶ್ಲೇಷಣಾ ಕಾರ್ಯ ಪ್ರಗತಿಯಲ್ಲಿರುತ್ತದೆ. ಸಮೀಕ್ಷಾ ವರದಿಯ ತಯಾರಿಕೆ ಕಾರ್ಯವು ಅಂತಿಮ ಹಂತದಲ್ಲಿದ್ದು...

**ಸಭಾಪತಿಯವರು**:- ಮಾನ್ಯ ರಮೇಶ್ ಅವರೇ, ಪ್ರಶ್ನೆ ಏನೆಂಬುದನ್ನು ಕೇಳಿ.

**ಶ್ರೀ ಪಿ.ಆರ್.ರಮೇಶ್**:- ಮಾನ್ಯ ಸಭಾಪತಿಯವರೇ, ಈಗ ವರದಿ ತಯಾರಾಗಿದೆ. ಮಂತ್ರಿಗಳು ಅದನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಅದಕ್ಕೆ ಪ್ರತಿಭಟನೆ ಏಕೆ ಮಾಡಬೇಕು. ವಿರೋಧಪಕ್ಷದವರಿಗೆ ಇಚ್ಛಾಶಕ್ತಿಯ ಕೊರತೆ ಇದೆ. ಇಲ್ಲದಿದ್ದಲ್ಲಿ ಈ ಕಾರ್ಯ ಪೂರ್ಣವಾಗಿ 10 ವರ್ಷಗಳಾಗಬೇಕಿತ್ತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಇದರಲ್ಲಿ ರಾಜಕಾರಣವಿಲ್ಲ.

(ಗೊಂದಲ)

**ಶ್ರೀ ಪಿ.ಆರ್.ರಮೇಶ್**:- ಮಾನ್ಯ ಸಭಾಪತಿಯವರೇ, ಇದಕ್ಕೆ ರಾಜಕಾರಣದ ಇಚ್ಛಾಶಕ್ತಿಯ ಕೊರತೆ ಅಲ್ಲ.

**ಸಭಾಪತಿಯವರು**::- ಇದು ಎಲ್ಲರಿಗೂ ಬೇಕಾದಂತಹ ಪಕ್ಷಾತೀತವಾದ ವಿಷಯವಾಗಿದೆ. ಇಷ್ಟು ಹೊತ್ತಿನವರೆವಿಗೂ ಎಲ್ಲರೂ ಮಾತನಾಡಿದ್ದೀರಿ. ಈಗ ಮಾನ್ಯ ಸಚಿವರು ತಮ್ಮ ಉತ್ತರವನ್ನು ನೀಡಬೇಕು.

**ಶ್ರೀ ಸಿ.ಪುಟ್ಟರಂಗಶೆಟ್ಟಿ (ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)**:- ಮಾನ್ಯ ಸಭಾಪತಿಯವರೇ, ನಮ್ಮ ಎಲ್ಲಾ ಸದಸ್ಯರೂ ಬಹಳ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಅವರೂ ಸಹ ಹಿಂದುಳಿದ ಜನಾಂಗಕ್ಕೆ ಸೇರಿದವರೇ ಆಗಿದ್ದು, ಅವರ ಕಳಕಳಿಯನ್ನು ನಾನು ಮೆಚ್ಚುತ್ತೇನೆ. ಆದಷ್ಟು ಶೀಘ್ರವಾಗಿ ವರದಿಯನ್ನು ಬಿಡುಗಡೆ ಮಾಡಲಾಗುವುದು.

**ಶ್ರೀ ವಿ.ಎಸ್.ಉಗ್ರಪ್ಪ**:- ಮಾನ್ಯ ಸಭಾಪತಿಯವರೇ, ಉತ್ತರ ಬಂದಿಲ್ಲವೆಂದು ಅವರು ತಿಳಿಸಿದ್ದಾರೆ. ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿಯೇ ಕೊನೆಯ ಘಟ್ಟದಲ್ಲಿ ವರದಿಯನ್ನು ಸಲ್ಲಿಸಲಾಗಿದೆ ಎಂದು ಅಧಿಕೃತವಾಗಿ ಯಾರು ಸಲ್ಲಿಸುತ್ತಾರೆಯೋ ಅವರೇ ಹೇಳಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಾಜದ ಎಲ್ಲಾ ವರ್ಗಗಳ ಜನರ ಪ್ರಶ್ನೆ ಇದರಲ್ಲಿ ಅಡಕವಾಗಿದೆ. ಅಕಸ್ಮಾತ್ ಅದರಲ್ಲಿ variations ಆದರೆ privilege ಆಗುವ ಎಲ್ಲಾ ಸಾಧ್ಯತೆಗಳಿವೆ. ಇದನ್ನು ಮಾನ್ಯ ಸಚಿವರಿಗೆ ಹೇಳಬಯಸುತ್ತೇನೆ,

**ಸಭಾಪತಿಯವರು:-** ಸದನದಲ್ಲಿ ಮಂತ್ರಿಗಳಿಗೆ ಇದೇ ರೀತಿ ಹೇಳಬೇಕೆಂದು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸಚಿವರು ಆದಷ್ಟು ಬೇಗನೆ ಮಾಡುತ್ತೇವೆಂದು ಹೇಳುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಹಾಗಾದರೆ ಸದನಕ್ಕೆ ಸುಳ್ಳು ಹೇಳುತ್ತಿದ್ದಾರೆಯೇ?

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರೆಲ್ಲರ ಭಾವನೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಕ್ರಮ ಕೈಗೊಳ್ಳಿ.

**ಶ್ರೀ ಸಿ.ಪುಟ್ಟರಂಗಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸಂಬಂಧಪಟ್ಟ ಅಧ್ಯಕ್ಷರೊಂದಿಗೆ ಮಾತನಾಡಿದ್ದೇನೆ. ಮತ್ತೊಂದು ಬಾರಿಗೆ ಸಭೆ ಕರೆಯುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕಳೆದ ಬಾರಿಯೂ ಇದೇ ರೀತಿ ಹೇಳಲಾಗಿತ್ತು. ಈ ರೀತಿ ಹೇಳಿದರೆ ಆಗುವುದಿಲ್ಲ. ಪೀಠ ನಮ್ಮ ರಕ್ಷಣೆಗೆ ಬರಬೇಕು. ಆದಷ್ಟು ಬೇಗ ಎಂದರೆ ಎಷ್ಟು ದಿನ? ಎಷ್ಟು ತಿಂಗಳು ಎಂಬುದನ್ನು ಹೇಳಬೇಕು.

**ಶ್ರೀ ಸಿ.ಪುಟ್ಟರಂಗ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಕೇಳಿರುವವರು ಅವರು. ಅದಕ್ಕೆ ಉತ್ತರವನ್ನು ಕೊಟ್ಟಿದ್ದೇವೆ. ದಿನಾಂಕವನ್ನು ಹೇಳಬೇಕೆಂದು ಅವರು ಕೇಳಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಪ್ರಶ್ನೆಯು ಸದನದ ಸ್ವತ್ತು ಎಂಬುದನ್ನು ಮಾನ್ಯ ಸಚಿವರು ಗಮನಿಸಬೇಕು.

**ಸಭಾಪತಿಯವರು;-** ಮಾನ್ಯ ಸಚಿವರೇ, ಯಾವುದೇ ಪ್ರಶ್ನೆಯನ್ನು ಕೇಳಿದರೂ, it is the property of the House. ದಯಮಾಡಿ ಆದಷ್ಟು ಬೇಗ ಕ್ರಮವನ್ನು ಕೈಗೊಳ್ಳಿ. ಈಗಾಗಲೇ ಸಮಯವಾಗಿದೆ. ಬೇರೆ ಯಾರಿಗೂ ಮಾತನಾಡಲು ಅವಕಾಶ ನೀಡುವುದಿಲ್ಲ. ಮುಂದೆ ಮಾನ್ಯ ಸಂಕನೂರ ಅವರು ಮಾತನಾಡಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ದಿನಾಂಕ 29.06.2017ರಂದು ಹೊರಡಿಸಿರುವ ಆದೇಶದಲ್ಲಿ ವಿಧಿಸಿರುವ ಷರತ್ತುಗಳಲ್ಲಿ "ಅನುದಾನಿತ ಶಾಲೆಯ ಫಲಿತಾಂಶವು ಕಳೆದ 5 ಶೈಕ್ಷಣಿಕ ವರ್ಷಗಳ ಸರಾಸರಿ ಫಲಿತಾಂಶಕ್ಕಿಂತ ಉತ್ತಮವಾಗಿರಬೇಕು" ಎಂಬ ಷರತ್ತನ್ನು ತೆಗೆದು ಹಾಕಬೇಕೆಂಬ ವಿಷಯದ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಗಮನ ಸೆಳೆಯುವುದು.**

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಶಿಕ್ಷಣ ಇಲಾಖೆಯು ದಿನಾಂಕ 29.06.2017ರಂದು ಹೊರಡಿಸಿರುವ ಆದೇಶದಲ್ಲಿ ವಿಧಿಸಿರುವ ಷರತ್ತುಗಳಲ್ಲಿ ಸಂಬಂಧಿಸಿದ ಅನುದಾನಿತ ಶಾಲೆಯ ಫಲಿತಾಂಶವು ಕಳೆದ 5 ಶೈಕ್ಷಣಿಕ ವರ್ಷಗಳ ಸರಾಸರಿ ಫಲಿತಾಂಶಕ್ಕಿಂತ ಉತ್ತಮವಾಗಿರಬೇಕು ಎಂಬ ಷರತ್ತನ್ನು ತೆಗೆದು ಹಾಕಬೇಕೆಂಬ ವಿಷಯದ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

**ಶ್ರೀ ಎನ್.ಮಹೇಶ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ಉತ್ತರವನ್ನು ಒದಗಿಸಲಾಗಿದೆ.

(ಸಚಿವರ ಹೇಳಿಕೆಯನ್ನು ಲಗತ್ತಿಸಿದೆ.)

(...ಮುಂದು)

(114)06.07.2018 2.30 ಕೆಜಿ.ಜಿಆರ್

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರುವಂತಹ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ನಿವೃತ್ತಿಯಿಂದ ತೆರವಾದಂತಹ ಹುದ್ದೆಗಳನ್ನು ತುಂಬಬೇಕಾದರೆ, ಒಂದು ಷರತ್ತನ್ನು ವಿಧಿಸಿದ್ದಾರೆ. ಆಯಾಯಾ ಶಾಲೆಗಳ ಹಿಂದಿನ ಐದು ವರ್ಷಗಳ ಫಲಿತಾಂಶ ಜಿಲ್ಲಾ ಸರಾಸರಿ ಫಲಿತಾಂಶಕ್ಕಿಂತ ಕಡಿಮೆ ಇರಬಾರದೆಂಬ ಷರತ್ತು ಇದೆ. ಫಲಿತಾಂಶ ಹೆಚ್ಚಿಗೆ ಇದ್ದರೆ, ಮಾತ್ರ post permission ಕೊಡುತ್ತೇವೆಂದು ಈ ಕರಾರಿನಲ್ಲಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಈ ಕರಾರು ಹಾಕಿದ್ದೇವೆಂದು ಹೇಳಿದ್ದಾರೆ. ಇದನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೇಳುತ್ತಾರೆ. ಆದರೆ, ಈ post permission ಕೊಡಬೇಕಾದರೆ ಹಿಂದಿನ 5 ವರ್ಷಗಳ ಫಲಿತಾಂಶದ ಮೇಲೆ ಆಯಾಯಾ ಶಾಲೆಯ ಜಿಲ್ಲಾ ಸರಾಸರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಫಲಿತಾಂಶಕ್ಕಿಂತ ಕಡಿಮೆ ಇರಬಾರದೆಂದು ಹಾಕಿರುವ ಷರತ್ತು ತಪ್ಪು ಎಂದು ನಾನು ಹೇಳುತ್ತೇನೆ. ಅದು ಏಕೆ ತಪ್ಪು ಎಂದು ನಾನು ಉದಾಹರಣೆ ಕೊಟ್ಟು ಹೇಳುತ್ತೇನೆ. ಸಾಮಾನ್ಯವಾಗಿ ನಮ್ಮ ರಾಜ್ಯದಲ್ಲಿ ಯಾವುದೇ ಒಂದು ಕಾನೂನನ್ನು ಅಥವಾ ಒಂದು ನಿಯಮವನ್ನು ಜಾರಿಗೆ ತಂದರೆ, ಅದು ಇಡೀ ನಮ್ಮ ರಾಜ್ಯಕ್ಕೆ ಅನ್ವಯಿಸಬೇಕು. ಆದರೆ, ಇವರು ಒಂದೊಂದು ಜಿಲ್ಲೆಗೆ ಒಂದೊಂದು ಷರತ್ತು ಹಾಕಿದ್ದಾರೆ. ಉದಾಹರಣೆಗೆ, ನಮ್ಮ ರಾಜ್ಯದ ಉಡುಪಿ ಮತ್ತು ಮಂಗಳೂರು ಜಿಲ್ಲೆಗಳನ್ನು ತೆಗೆದುಕೊಂಡರೆ, ಉಡುಪಿ ಜಿಲ್ಲೆಯು S.S.L.C., ಫಲಿತಾಂಶದಲ್ಲಿ highest ಇರುತ್ತದೆ. ಅದೇರೀತಿ ಮಂಗಳೂರು ಜಿಲ್ಲೆಯು ಸಹ highest ಇದೆ. ಮಂಗಳೂರು ಜಿಲ್ಲಾ ಸರಾಸರಿ ಫಲಿತಾಂಶ 80% ಇರುತ್ತದೆ. ಯಾದಗಿರಿ ಜಿಲ್ಲೆಯು ಜಿಲ್ಲಾ ಸರಾಸರಿ ಫಲಿತಾಂಶ 50% ಇರುತ್ತದೆ. ಇಲ್ಲಿ ಏನಾಗುತ್ತದೆಂದರೆ, ಮಂಗಳೂರು ಜಿಲ್ಲಾ ಸರಾಸರಿ ಫಲಿತಾಂಶ 80% ಇದ್ದು, ಆ ಜಿಲ್ಲೆಯ ಸರಾಸರಿ ಫಲಿತಾಂಶ 79% ಬಂದರೆ, ಅಲ್ಲಿನ ಯಾವುದೇ ಶಾಲೆಯಿಂದ ನೇಮಕಾತಿಗಾಗಿ proposal for appointment ಬಂದರೆ, post ಕೊಡುವುದಿಲ್ಲವೆಂದು ಹೇಳುತ್ತಾರೆ. ಆದರೆ, ಯಾದಗಿರಿ ಜಿಲ್ಲೆಯ ಸರಾಸರಿ ಫಲಿತಾಂಶ 50% ಇದ್ದು, ಆ ಜಿಲ್ಲೆಯ ಸರಾಸರಿ ಫಲಿತಾಂತ 51% ಬಂದರೆ, ಆ ಜಿಲ್ಲೆಗೆ ಅನುಮತಿ ಕೊಡುತ್ತಾರೆ. ಅಂದರೆ, ಯಾದಗಿರಿ ಜಿಲ್ಲೆಯ ಸರಾಸರಿ ಫಲಿತಾಂಶ 51% ಬಂದರೆ ಅನುಮತಿ ಕೊಡುತ್ತಾರೆ. ಆದರೆ, ಮಂಗಳೂರು ಜಿಲ್ಲೆಯದ್ದು ಸರಾಸರಿ ಫಲಿತಾಂಶ 79% ಬಂದರೆ, reject ಮಾಡುತ್ತಾರೆ. ಇದು ಯಾವ ನ್ಯಾಯ ಸ್ವಾಮಿ? ಯಾದಗಿರಿ ಜಿಲ್ಲೆಗೊಂದು ನ್ಯಾಯ. ಮಂಗಳೂರು ಜಿಲ್ಲೆಗೊಂದು ನ್ಯಾಯ. ಇದು ವೈಜ್ಞಾನಿಕವಾಗಿ ಮಾಡಿರುವಂತಹ ಕರಾರು ಅಲ್ಲ. ಅವೈಜ್ಞಾನಿಕವಾಗಿ ಮಾಡಿರುವಂತಹ ಕರಾರು. ಆದ್ದರಿಂದ, ದಯವಿಟ್ಟು ಈ ಷರತ್ತನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ಶಿಕ್ಷಣದ ಗುಣಮಟ್ಟ ಕಾಯ್ದುಕೊಳ್ಳುವುದಕ್ಕೆ ಷರತ್ತು ಹಾಕಿದ್ದಾರೆ. ಇದಕ್ಕೆ ಒಂದು ಉದಾಹರಣೆಗೆ ಕೊಟ್ಟು ಹೇಳುತ್ತೇನೆ. ಸಾಮಾನ್ಯವಾಗಿ ಒಂದು ಶಾಲೆಯ ಫಲಿತಾಂಶ ಕಡಿಮೆ ಆಯಿತು ಎಂದರೆ, ಗಣಿತ ವಿಷಯ ಬಹಳ ಕಷ್ಟ ಇರುತ್ತದೆ. ಬಹಳ ವಿದ್ಯಾರ್ಥಿಗಳು ಗಣಿತ ವಿಷಯದಲ್ಲಿ ಅನುತ್ತೀರ್ಣರಾಗಿರುತ್ತಾರೆ. ಈ ರೀತಿ ಆದಾಗ ಆ ಶಾಲೆಯ ಒಟ್ಟು ಫಲಿತಾಂಶ ಕಡಿಮೆ ಆಗುತ್ತದೆ. ಅಂತಹ ಶಾಲೆಗಳಲ್ಲಿ ಕನ್ನಡ, Social Studies ಮತ್ತು ಆಂಗ್ಲ ವಿಷಯದ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ಆ ಶಾಲೆಯಲ್ಲಿ ಕನ್ನಡಲ್ಲಿ 100% result, ಆಂಗ್ಲದಲ್ಲಿ 100% result ಮತ್ತು Social Studies ವಿಷಯದಲ್ಲಿ 100% result ಇರುತ್ತದೆ. ಅಂತಹ ಶಾಲೆಯವರು ಕನ್ನಡ, ಆಂಗ್ಲ ಮತ್ತು Social Studies ವಿಷಯಗಳಿಗೆ post permission ಅನ್ನು ಕೇಳುತ್ತಾರೆ. ಅವರದ್ದು 100% ಫಲಿತಾಂಶ ಇರುತ್ತದೆ. ಆ ಶಾಲೆಯಲ್ಲಿ ಗಣಿತ ವಿಷಯದಲ್ಲಿ

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಫಲಿತಾಂಶ ಕಡಿಮೆಯಾಗಿದ್ದಕ್ಕೆ ಆ ಶಾಲೆಯ ಒಟ್ಟು ಫಲಿತಾಂಶ ಕಡಿಮೆಯಾಗಿರುತ್ತದೆ. ಆ ಶಾಲೆಯಲ್ಲಿನ ಯಾರೋ ಒಬ್ಬ ಶಿಕ್ಷಕ ತಪ್ಪು ಮಾಡಿದ್ದಕ್ಕೆ ಇಡೀ ಶಾಲೆಗೆ ಏಕೆ punishment ಕೊಡುತ್ತೀರಿ? ಆ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಏಕೆ punishment ಕೊಡುತ್ತೀರಿ? ಇಂತಹ ಕಾಯಿದೆಯನ್ನು ಬಿಟ್ಟು ಬೇರೆ ಕಾಯಿದೆಯನ್ನು ರೂಪಿಸುವುದಕ್ಕೆ ಆಗುವುದಿಲ್ಲವೇ? ಗಣಿತ ಶಿಕ್ಷಕ ಸರಿಯಾಗಿ ಪಾಠ ಮಾಡಿಲಿಲ್ಲವೆಂದರೆ, ಆತನ ವಿರುದ್ಧ ಕ್ರಮ ತೆಗೆದುಕೊಳ್ಳಿ. ಆದರೆ, ಖಾಲಿಯಾದ ಕನ್ನಡ, ಆಂಗ್ಲ ಮತ್ತು ಸಮಾಜ ವಿಷಯದ ಹುದ್ದೆಗಳಿಗೆ ಏಕೆ ಮಂಜೂರಾತಿ ಕೊಡುವುದಿಲ್ಲ? ಇದು ಯಾವ ನ್ಯಾಯ? ಆ ಹುದ್ದೆಗಳಿಗೆ ಮಂಜೂರಾತಿ ಕೊಡಬೇಕು. ಒಬ್ಬ ಗಣಿತ ವಿಷಯದ ಶಿಕ್ಷಕನ ತಪ್ಪಿನಿಂದ ಇಡೀ ಶಾಲೆಯ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಬಾರದು. ಅದಕ್ಕೆ ಸರ್ಕಾರ ಮಾಡಿರುವಂತಹ ಷರತ್ತು ತಪ್ಪಾಗುತ್ತದೆಂದು ನಾನು ಪದೇ ಪದೇ ಹೇಳುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಇಷ್ಟೆಲ್ಲಾ ಷರತ್ತುಗಳನ್ನು ಹಾಕಿದ್ದಾರೆ. ಇದು ತಮಗೂ ಗೊತ್ತಿದೆ. ಆದರೆ, ನಮ್ಮ ರಾಜ್ಯದಲ್ಲಿರುವ ಸುಮಾರು ಸರ್ಕಾರಿ ಪ್ರೌಢಶಾಲೆಗಳಲ್ಲಿ zero per cent result ಬಂದಿರುತ್ತದೆ. ಆ ಶಾಲೆಗಳ ವಿರುದ್ಧ ಏನು ಕ್ರಮ ತೆಗೆದುಕೊಂಡಿದ್ದಾರೆ? ಏಕೆ ಈ ರೀತಿಯ ತಾರತ್ಯಮ ಮಾಡುತ್ತಾರೆ? ಬರೀ ಖಾಸಗಿ ಶಿಕ್ಷಣ ಸಂಸ್ಥೆಗಳ ವಿರುದ್ಧ ಮಾತ್ರ conditions and punishment ಮಾಡುತ್ತಾರೆ. ಏಕೆ Zero per cent result ಬಂದಿರುವಂತಹ ಸರ್ಕಾರಿ ಪ್ರೌಢಶಾಲೆಗಳ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ? ಅದಕ್ಕೆ ನಾನು ಹೇಳುವುದೇನೆಂದರೆ, ಜಿಲ್ಲಾ ಸರಾಸರಿ ಫಲಿತಾಂಶಕ್ಕಿಂತ ಕಡಿಮೆ ಫಲಿತಾಂಶ ಬಂದರೆ, post permission ಕೊಡುವುದಿಲ್ಲವೆಂದರೆ ಶಿಕ್ಷಣದ ಗುಣಮಟ್ಟ ಇನ್ನೂ ಕಡಿಮೆಯಾಗುತ್ತಾ ಹೋಗುತ್ತದೆ. ಸುಮಾರು ಶಾಲೆಗಳಲ್ಲಿ ಒಬ್ಬ ಶಿಕ್ಷಕ ಮಾತ್ರ ಇದ್ದಾನೆ. ಅಂತಹ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಹೆಚ್ಚಾಗಬೇಕೆಂದರೆ ಯಾವ ರೀತಿ ಆಗುತ್ತದೆ? ಎಲ್ಲಿಯವರೆವಿಗೂ post permission ಕೊಡುವುದಿಲ್ಲವೋ ಅಲ್ಲಿಯವರೆಗೆ ಶಿಕ್ಷಣದ ಗುಣಮಟ್ಟವು ಸಹ ಹೆಚ್ಚುವುದಿಲ್ಲ. ಈ ಹಿಂದೆ ಒಬ್ಬ ಶಿಕ್ಷಕ ನಿವೃತ್ತಿಯಾದ ತಕ್ಷಣವೇ ವ್ಯವಸ್ಥಾಪಕ ಮಂಡಳಿಯವರೇ ಆ ಹುದ್ದೆಯನ್ನು ತುಂಬಿಕೊಳ್ಳುತ್ತಿದ್ದರು. ಇವತ್ತು ಆ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಇಲ್ಲದೇ ಇರುವಂತಹ ಷರತ್ತುಗಳನ್ನು ಹಾಕಿದ್ದಾರೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾವೆಲ್ಲರೂ ಧರಣಿ ಮಾಡಿದ್ದೇವು. ಆಗ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಸಿದ್ಧರಾಮಯ್ಯನವರು ಸಭೆ ಕರೆದು ಈ ಷರತ್ತುಗಳನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂಬ ನಿರ್ಣಯವನ್ನು ಮಾಡಿದ್ದಾರೆ. ಸತತವಾಗ ಅವರು ಸುಮಾರು 6 ಗಂಟೆಗಳ ಕಾಲ ಆ ಸಭೆಗಳನ್ನು ನಡೆಸಿದ್ದಾರೆ. ಅದಕ್ಕೆ ದಯವಿಟ್ಟು ಈ ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ಧರಾಮಯ್ಯನವರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಷರತ್ತನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಅವರು ನಿರ್ಣಯ ಮಾಡಿದ್ದಾರೆ. ಆ ರೀತಿ ಕೈಗೊಂಡ ನಿರ್ಣಯಗಳು ನಡವಳಿಯಲ್ಲಿ ಇದೆ. ಆದ್ದರಿಂದ ದಯವಿಟ್ಟು ಈ ಷರತ್ತುಗಳನ್ನು ವಾಪಸ್ಸು ತೆಗೆದುಕೊಳ್ಳಿ.

**ಸಭಾಪತಿಯವರು:–** ಮಾನ್ಯ ಸಂಕನೂರರವರೇ, ಸಾಕು ಬಿಡಿ. ನಿಮಗೆ ಸಾಕಷ್ಟು ಕಾಲವಕಾಶ ಕೊಟ್ಟಿದ್ದೇನೆ.

**ಶ್ರೀ ಎಸ್.ವ್ಹಿ..ಸಂಕನೂರ:–** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಸಿಗುವುದೇ ಬಹಳ ಕಡಿಮೆ. ಒಂದೇ ಒಂದು ಮಾತಿದೆ. ಅದನ್ನು ಹೇಳಿ ಮುಗಿಸುತ್ತೇನೆ. ದಯವಿಟ್ಟು ಅವಕಾಶ ಕೊಡಿ.

**ಸಭಾಪತಿಯವರು:–** ಮಾನ್ಯ ಸಂಕನೂರರವರೇ, ತಾವು ಬೇಗ ಹೇಳಿ ಮುಗಿಸಿ.

**ಶ್ರೀ ಎಸ್.ವ್ಹಿ..ಸಂಕನೂರ:–** ಮಾನ್ಯ ಸಭಾಪತಿಯವರೇ, ಸರ್ಕಾರ ಒಂದು ವೇಳೆ, ಈ ಷರತ್ತನ್ನು ಹಾಗೆಯೇ ಇಟ್ಟುಕೊಂಡು post permission ಕೊಡಲಿಲ್ಲವೆಂದರೆ, ಆ ಶಾಲೆಯ ಪರಿಸ್ಥಿತಿ ಏನಾಗುತ್ತದೆ? ಇವತ್ತು ಒಂದು ಹುದ್ದೆ ಖಾಲಿಯಾಗುತ್ತದೆ, ಆ ಹುದ್ದೆಗೆ Post permission ಕೊಡುವುದಿಲ್ಲವೆಂದು ಹೇಳುತ್ತಾರೆ. ಅದೇರೀತಿ ಎರಡನೆ ಹುದ್ದೆಯು ಸಹ ಖಾಲಿ ಆಗುತ್ತದೆ. ಆಗಲೂ ಸಹ Post permission ಕೊಡುವುದಿಲ್ಲವೆಂದು ಹೇಳುತ್ತಾರೆ. ಅಂತಹ ಶಾಲೆಗಳಲ್ಲಿ ಗಣಿತ, ವಿಜ್ಞಾನ ಮತ್ತು ಇತರೆ ವಿಷಯಗಳನ್ನು ಹೇಳಿಕೊಡುವಂತಹ ಶಿಕ್ಷಕರು ಇಲ್ಲವೆಂದರೆ, ಅಂತಹ ಶಾಲೆಗಳಿಗೆ ಪೋಷಕರು ಮಕ್ಕಳನ್ನು ಸೇರಿಸುವುದಿಲ್ಲ. ಇಲ್ಲಿ ultimately ಏನಾಗುತ್ತದೆಂದರೆ, ಶಾಲೆಗಳು ಮುಚ್ಚಿ ಹೋಗುತ್ತವೆ. ಶಾಲೆಗಳು ಮುಚ್ಚಿ ಹೋದರೆ, ಆ ಶಾಲೆಯಲ್ಲಿರುವಂತಹ ನೌಕರರ ಪರಿಸ್ಥಿತಿ ಏನಾಗುತ್ತದೆ? ಆ ನೌಕರರು ಬೀದಿಗೆ ಬರಬೇಕೇ? ಆ ನೌಕರರ ಪಾಲಕರ ಪರಿಸ್ಥಿತಿ ಏನು? ಅದಕ್ಕೆ ನಾನು ಹೇಳುವುದೇನೆಂದರೆ, ಅವೈಜ್ಞಾನಿಕವಾಗಿ ಮಾಡಿರುವಂತಹ ಕರಾರನ್ನು ಮಾನ್ಯ ಸಚಿವರು ದಯವಿಟ್ಟು ವಾಪಸ್ಸು ಪಡೆಯಬೇಕೆಂದು ನನ್ನ ಮನವಿ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(115)06.07.2018 ಎಂವಿ/ಜಿಆರ್

**ಶ್ರೀ ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿರುವುದಕ್ಕಾಗಿ ಧನ್ಯವಾದಗಳು. ಕಾಯಿದೆ ಮತ್ತು ಸುತ್ತೋಲೆಗಳನ್ನು ಶಿಕ್ಷಣ ಇಲಾಖೆಯಿಂದ ಮಾಡುವುದು. ಈ ತರಹ ಇದು ಅವೈಜ್ಞಾನಿಕ ತೀರ್ಮಾನವೆಂದು ಮಾನ್ಯ ಸಂಕನೂರರವರು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿರುವುದನ್ನು ನಾನು endorse ಮಾಡುತ್ತೇನೆ. ಇಂತಹ ಅವೈಜ್ಞಾನಿಕ ತೀರ್ಮಾನಗಳನ್ನು ಮಾಡಿ, ಎಲ್ಲರನ್ನೂ ಗೊಂದಲಕ್ಕೆ ಸಿಲುಕಿಸುವಂತಹ ವಿಚಾರ ಗಂಭೀರವಾಗಿರುವಂಥದ್ದು. ನಾನು ಒಂದು ಮಾತನ್ನು ಮಾನ್ಯ ಶಿಕ್ಷಣ ಮಂತ್ರಿಗಳಿಗೆ ಕೇಳಬಯಸುತ್ತೇನೆ. ತಾವು ಈ ಸುತ್ತೋಲೆ ಮತ್ತು ಕಾಯಿದೆಗಳನ್ನು ಮಾಡುವುದು ಇಡೀ ರಾಜ್ಯಕ್ಕೆ ಮಾಡುತ್ತಿರೋ? ತಾಲ್ಲೂಕಿಗೆ ಮಾಡುತ್ತಿರೋ? ಅಥವಾ ಜಿಲ್ಲೆ ಜಿಲ್ಲೆಗೆ ಮಾಡುತ್ತಿರೋ? ಎಂದು ಮೊದಲು ಹೇಳಬೇಕು. ನೀವು ಇಡೀ ರಾಜ್ಯಕ್ಕೆ ಅನ್ವಯಿಸುವಂತಹ ಸುತ್ತೋಲೆ ಮತ್ತು ಕಾಯಿದೆಗಳನ್ನು ಮಾಡುವ ಸಂದರ್ಭದಲ್ಲಿ, ಇದು ಯಾವ ಜಿಲ್ಲೆಯ ಫಲಿತಾಂಶಕ್ಕೆ ಸಂಬಂಧಿಸಿದ್ದು ಎಂದು ಹೇಳಬೇಕೆಂದು. ಮಾನ್ಯ ಸದಸ್ಯರು ಬಹಳ ಗಂಭೀರವಾಗಿರುವಂತಹ ಪಾಯಿಂಟ್ಸ್ ಅನ್ನು ಹೇಳಿದ್ದಾರೆ. ಈಗ 1ನೇ ತರಗತಿಯಿಂದ 9ನೇ ತರಗತಿಯವರೆಗೆ ಪಾಸ್ ಪಾಸ್, ಆಮೇಲೆ 10ನೇ ತರಗತಿಗೆ ಬಂದ ತಕ್ಷಣ ಫಲಿತಾಂಶ ನೀಡಿ ಎಂದು ಹೇಳುತ್ತಾರೆ. ನೀವು ಈ ಶಿಕ್ಷಣ ಕೊಡುವಾಗ 1ನೇ ತರಗತಿಯಿಂದ 9ನೇ ತರಗತಿಯವರೆಗೂ ಏತಕ್ಕೆ ಪಾಸ್ ಮಾಡಬೇಕು? ಈ ರೀತಿ ಪಾಸ್ ಮಾಡಿದ ಮೇಲೆ, ಗುಣಮಟ್ಟದ ಶಿಕ್ಷಣ ಹೇಗೆ ಬರುತ್ತದೆ. ಈಗ ನಿಮ್ಮ ಮನೆಯಲ್ಲಿ ಬೇಳೆ ಮತ್ತು ಸೊಪ್ಪು ಇಟ್ಟು ಸಾಂಬರ್ ಮಾಡು ಎಂದರೆ ಅದು ಸರಿ. ಆದರೆ, ಅಕ್ಕಿ ಇಟ್ಟು ಸಾಂಬರ್ ಮಾಡು ಎನ್ನುವಂತಹ ಪರಿಸ್ಥಿತಿ ಬಂದಿದೆ, ಇದು ಹೇಗೆ ಎಂದು ಕೇಳಿ, ಅದನ್ನು ನಾನು ಹೇಳುತ್ತೇನೆ. ಒಂದು ಶಾಲೆಯಲ್ಲಿ ಸಂಪೂರ್ಣವಾಗಿ full-fledged teachers ಇರಬೇಕು. Full-fledged teachers ಕೊಟ್ಟ ಮೇಲೆ you can expect good result. ನೀವು ಇಂತಹ ಫಲಿತಾಂಶ ನೀಡಿ ಎಂದು ಕೇಳಿ. ನೀವು full-fledged teachersನೇ ಕೊಟ್ಟಿಲ್ಲ, ಮಕ್ಕಳಿಗೆ ಪಾಠ ಮಾಡುವವರು ಯಾರು? ಮೊದಲು ನೀವು infrastructure create ಮಾಡಿ, ಎಲ್ಲಾ ಸೌಲಭ್ಯಗಳನ್ನು ಕೊಡಿ, ಅದನ್ನು ಕೊಟ್ಟ ಮೇಲೆ ಅದು ಐದು ವರ್ಷ ಆಗಬೇಕು. ನೀವು ಈ ವರ್ಷ ಕೊಟ್ಟು, ಐದು ವರ್ಷಗಳ ಹಿಂದಿನದ್ದನ್ನು ತೆಗೆದುಕೊಂಡು ನೀವು ಫಲಿತಾಂಶ ಕೊಡುವುದಿಲ್ಲ ಎಂದರೆ. ಇನ್ನು ಸರ್ಕಾರಿ ಶಾಲೆಗಳ ಬಗ್ಗೆ ಬಹಳ ಗಂಭೀರವಾಗಿ ಹೇಳಿದರು. ಮೊನ್ನೆಯ ನಮ್ಮ ಬಜೆಟ್‌ನಲ್ಲಿ ಹೇಳಿದ್ದಾರೆ. ಹತ್ತಿರದಲ್ಲಿ shortage of students ಇರುವಂತಹ ಸಂದರ್ಭದಲ್ಲಿ ಎಲ್ಲಾ ಅನುದಾನಿತ ಶಾಲೆಗಳನ್ನು ಸರ್ಕಾರಿ ಶಾಲೆಗಳಲ್ಲಿ ವಿಲೀನಗೊಳಿಸುತ್ತೇವೆ ಎನ್ನುವಂತಹ ಬಹಳ ಒಂದು ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಆ ವಿಷಯ ಆಮೇಲೆ. ಆದರೆ, ನೀವು ಸಂಬಳ ಕೊಡವುದಿಲ್ಲವೆಂದು, ಈ ತರಹದ ಎಲ್ಲಾ ಅವೈಜ್ಞಾನಿಕ ತೀರ್ಮಾನಗಳನ್ನು ಮಾಡಿ, ಇದನ್ನು ನಾವು ಮಾಡುತ್ತಿಲ್ಲ, ಅಂದರೆ ಇಲ್ಲಿ ಇರುವವರು ಅದನ್ನು ಮಾಡುತ್ತಿಲ್ಲ. ತಾವು ದಯಮಾಡಿ ಲೆಕ್ಕ ಮಾಡಿ, ಅಲ್ಲಿ ಕುಳಿತ್ತಿದ್ದಾರಲ್ಲ, so-, called ದೊಡ್ಡ ದೊಡ್ಡವರು, ಐ.ಎ.ಎಸ್., ಮಾಡಿದಂತಹ ಅಧಿಕಾರಿಗಳು,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು ಸಾಮಾನ್ಯ ತಿಳುವಳಿಕೆ ಇದ್ದೆ, ಅವರುಗಳು ಐ.ಎ.ಎಸ್., ಆಗಿರುವುದು. ಆದರೆ, practical knowledge ಇಲ್ಲವೆಂದು ನಾನು ಈ ಸದನದಲ್ಲಿ ಹೇಳುತ್ತೇನೆ. Practial knowledge ಏಕೆ ಇರುವುದಿಲ್ಲವೆಂದರೆ, ಎಲ್ಲೋ ಕೆಲವರು ಶೇಕಡ 10ರಷ್ಟು ಜನರು ಹಳ್ಳಿಗಾಡಿನಿಂದ ಹೋಗಿ, ಓದಿ ಐ.ಎ.ಎಸ್., ಆಗಿರುವಂತಹವರು. ಬಾಕಿ ಉಳಿದಿರುವ ಎಲ್ಲಾ ಐ.ಎ.ಎಸ್., ಅಧಿಕಾರಿಗಳ ಮಕ್ಕಳೆ, ಐ.ಎ.ಎಸ್., ಮಾಡಿರುವುದು. ಬೇರೆ ಯಾರು ಐ.ಎ.ಎಸ್., ಆಗಲಿಲ್ಲ. ಅವರಿಗೆ practical difficulty ಗೊತ್ತಿದೆ. ಈ practical difficulty ಗೊತ್ತಿರುವಂತಹ ಹಳ್ಳಿಗಾಡಿನ ಜೀವನದ ಬಗ್ಗೆ ಗೊತ್ತಿರುವಂತಹ ಸಂದರ್ಭದಲ್ಲಿ ಇಂತಹ ಅವೈಜ್ಞಾನಿಕ ತೀರ್ಮಾನಗಳನ್ನು ಮಾಡುವುದಿಲ್ಲ. ಏಕೆಂದರೆ, ಹಳ್ಳಿಗಾಡಿನಲ್ಲಿ ಶಾಲೆಗಳು ಇವೆ. ಆ ಶಾಲೆಗಳಿಗೆ ಹೋಗುವಂತಹ ಮಕ್ಕಳು ಯಾರು ಸ್ವಾಮಿ? ಆ ಮಕ್ಕಳು ಎಲ್ಲೋ ಕದ್ದು ಕದ್ದು ಹೋಗುತ್ತಿರುತ್ತಾರೆ, ಅಂತಹ ಮಕ್ಕಳನ್ನು ಹಿಡಿದುಕೊಂಡು ಬಂದು ಗುಣಮಟ್ಟದ ಶಿಕ್ಷಣ ಮತ್ತು ಕಡ್ಡಾಯ ಶಿಕ್ಷಣ ಕೊಡಬೇಕು ಎಂದು ನೀವೇ ಹೇಳುತ್ತೀರಿ. ಶಾಲೆಯಲ್ಲಿ strength ಮಾಡಬೇಕೆಂದು ಮಾಸ್ಟರ್‌ಗಳು ಹೋಗಿ ಮಕ್ಕಳನ್ನು ಹಿಡಿದುಕೊಂಡು ಬರುತ್ತಾರೆ. ಅಂತಹ ಮಕ್ಕಳಿಗೆ ಕಲ್ಲಿಸುವಂಥದ್ದು ಬಹಳ ದೊಡ್ಡ ವಿಚಾರ. ಅಂತಹ ಮಕ್ಕಳು ಬಂದಾಗ ನೀವು ಈ ರೀತಿಯ ಶಿಕ್ಷಣ ಕೊಡಬೇಕೆಂದು ಹೇಳಿದರೆ. ನೀವು ಉಡುಪಿ ಮತ್ತು ಮಂಗಳೂರನ್ನು ಇಡೀ ರಾಜ್ಯಕ್ಕೆ ಅನ್ವಯಿಸುವಂಥದ್ದಲ್ಲ. ಈಗ ಸುತ್ತೋಲೆ ಮತ್ತು ಕಾಯಿದೆ ಮಾಡಿದ್ದಾರೆ. ರಾಜ್ಯದ ಮೂಲೆ ಮೂಲೆಯ ಸಂಪೂರ್ಣ ಸರಾಸರಿಯನ್ನು ತೆಗೆದು ನೋಡಿ. ಉತ್ತರ ಕರ್ನಾಟಕದ ಒಂದು ಜಿಲ್ಲೆಯಲ್ಲಿ ಶೇಕಡ 54ರಷ್ಟು ಇದೆ. ರಾಜ್ಯಕ್ಕೆ ಕಾಯಿದೆ ಮಾಡುವಂತಹ ಸಂದರ್ಭದಲ್ಲಿ, ಸುತ್ತೋಲೆಯಲ್ಲಿ ಇಡೀ ರಾಜ್ಯಕ್ಕೆ ಒಂದು ಶಿಕ್ಷಣದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಜಿಲ್ಲೆ ಜಿಲ್ಲೆಗೆ ತಾರತಮ್ಯ ಮಾಡಬಾರದು. ದಯವಿಟ್ಟು ಈ ರೀತಿಯ ಕಡ್ಡಾಯ ಮಾಡುವಂತಹ ವಿಚಾರವನ್ನು ಕೂಡಲೇ withdraw ಮಾಡಬೇಕೆಂದು ಮತ್ತು ನಿಮ್ಮ ಐ.ಎ.ಎಸ್., ಅಧಿಕಾರಿಗಳಿಗೆ ನಿರ್ದೇಶನ ಕೊಡಬೇಕೆಂದು ಹೇಳುತ್ತೇನೆ. ಧನ್ಯವಾದಗಳು.

**ಸಭಾಪತಿಯವರು:-** ಅವರು ಹೇಳಿದ್ದನ್ನು ಬಿಟ್ಟು ಮಾತನಾಡಿ. ಆದರೆ ಪ್ರಶ್ನೆ ಕೇಳಬೇಡಿ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಸದನವನ್ನು ಊಟ ಆದ ಮೇಲೆ ಮುಂದುವರೆಸೋಣ. ಈ ವಿಷಯದ ಮೇಲೆ ಎಲ್ಲರೂ ಮಾತನಾಡಬೇಕು. ಇನ್ನು ನಿಯಮ 330ರ ಮೇಲೆ ಚರ್ಚೆ ಇದೆ.

**ಸಭಾಪತಿಯವರು:-** ಈಗ ಊಟ ಆದ ಮೇಲೆ ಮತ್ತೆ ಶುರು ಮಾಡೋಣವೆ?

“ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಈಗ ತಾವು ಇದನ್ನು ಚರ್ಚೆಗೆ ತೆಗೆದುಕೊಂಡಿದ್ದೀರಿ.

**ಶ್ರೀ ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಮುಗಿಸಿದ ಮೇಲೆ adjourn ಮಾಡಿಸಿ, ಇನ್ನು ಉಳಿದಿರುವುದೆಲ್ಲಾ ಸೋಮವಾರ.

**ಸಭಾಪತಿಯವರು:-** ಅದನ್ನು ನನಗೆ ಬಿಡಿ, ನೀವುಗಳು ಏತಕ್ಕೆ ತಲೆ ಕೆಡಿಸಿಕೊಳ್ಳುತ್ತೀರಿ. ನನಗೆ, ನಾನು ಏನು ಮಾಡಬೇಕೆಂದು ಗೊತ್ತಿದೆ.

**ಶ್ರೀ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರದ ಉದ್ದೇಶವನ್ನು ಮಾನ್ಯ ಶಿಕ್ಷಣ ಸಚಿವರು ಬಹಳ ಚೆನ್ನಾಗಿ ಹೇಳಿದ್ದಾರೆ. Ultimate ಆಗಿ ಶಿಕ್ಷಣದ ಗುಣಮಟ್ಟ ಚೆನ್ನಾಗಿರಬೇಕು. ಮಾನ್ಯ ಸಭಾಪತಿಯವರೇ, ನನ್ನ ಮೇಲೆ ಸ್ವಲ್ಪ ಕರುಣೆ ಇರಲಿ. ಮಾನ್ಯ ಶಿಕ್ಷಣ ಸಚಿವರ ಉದ್ದೇಶ ಚೆನ್ನಾಗಿದೆ. ಈ ಆದೇಶ ಇದೆಯಲ್ಲಾ, ಈ ಆದೇಶ ಮಾಡುವುದಕ್ಕೆ ಮೊದಲು ನಮ್ಮ ರಾಜ್ಯದಲ್ಲಿ ಬಹಳಷ್ಟು ಶಿಕ್ಷಣ ತಜ್ಞರು ಮತ್ತು ಬುದ್ಧಿ ಜೀವಿಗಳು ಇದ್ದಾರೆ. Curriculum ತಯಾರು ಮಾಡುವವರು ಇದ್ದಾರೆ. ಮಕ್ಕಳ ಮಾನಸಿಕ ಸ್ಥಿತಿಯನ್ನು ಅರ್ಥಮಾಡಿಕೊಂಡು, ಎಷ್ಟು ಕೊಡಬೇಕು, ಎಷ್ಟು ಕೊಡಬಾರದು, ಎಷ್ಟನ್ನು ತಲೆಗೆ ತುಂಬಬೇಕು ಎನ್ನುವ ಶಕ್ತಿ ಸಾಮರ್ಥ್ಯ ಇರುವ ಒಂದು ವರ್ಗವೇ ಇದೆ. ಅಂತಹವರನ್ನು ನೀವು consult ಮಾಡಿ, ನೀವು ಏನಾದರೂ ಆದೇಶ ಹೊರಡಿಸಿದ್ದರೆ, ಅದಕ್ಕೆ ಬಹಳ ಬೆಲೆ ಇರುತ್ತಿತ್ತು. ಮಾನ್ಯ ಭೋಜೇಗೌಡರು ಹೇಳಿದ ಹಾಗೆ ಅಧಿಕಾರಿಗಳು ಹವಾನಿಯಂತ್ರಿತ ಕೊಠಡಿಗಳಲ್ಲಿ ಕುಳಿತುಕೊಂಡು, ಅವರಿಗೆ ಇಷ್ಟ ಬಂದಹಾಗೆ ದಿನಕ್ಕೊಂದು ಸುತ್ತೋಲೆಯನ್ನು ಕಳುಹಿಸುತ್ತಾರೆ. ಮಾನ್ಯ ಶಿಕ್ಷಣ ಸಚಿವರು ಹೊಸದಾಗಿ ಬಂದಿದ್ದಾರೆ. I appreciate his concentration and determination. ಅವರ ಬದ್ಧತೆಯನ್ನು appreciation ಮಾಡುತ್ತೇನೆ. ಅವರು ಬಂದಾಗಿನಿಂದ ನೋಡುತ್ತಿದ್ದೇನೆ, ಬಹಳ ನೀಟಾಗಿ ಸದನದ ನಡವಳಿಕೆಯನ್ನು ಗಮನಿಸುತ್ತಾರೆ ಮತ್ತು ವಿಷಯವನ್ನು ಬರೆದುಕೊಳ್ಳುತ್ತಾರೆ, ಅದು ನನಗೆ ಚೆನ್ನಾಗಿ ಅರ್ಥವಾಗುತ್ತದೆ. ಮಾನ್ಯ ಸಂಕನೂರರವರು ಹೇಳಿದ ಎಲ್ಲಾ ಮಾತುಗಳನ್ನು endorse ಮಾಡುತ್ತೇನೆ ಮತ್ತು ಮಾನ್ಯ ಭೋಜೇಗೌಡರು ಹೇಳಿರುವುದನ್ನು endorse ಮಾಡುತ್ತೇನೆ. ನಾನು ಏನನ್ನು ಹೊಸದಾಗಿ ಹೇಳುವುದಕ್ಕೆ ಹೋಗುವುದಿಲ್ಲ. ತಾವು ಒಂದು ವಿಷಯವನ್ನು ದಯವಿಟ್ಟು ಗಮನದಲ್ಲಿ ಇಟ್ಟುಕೊಳ್ಳಿ, ಖಾಸಗಿ ಮತ್ತು ಸರ್ಕಾರಿ ಎನ್ನುವಂತಹ ತಾರತಮ್ಯ ಇದೆಯಲ್ಲಾ ಅದು ಮೊದಲು ಹೋಗಬೇಕು. ಅವರು ಒಂದು ಪಾಯಿಂಟ್ ಹೇಳಿದರು, ಸರ್ಕಾರಿ ಶಾಲೆಯಲ್ಲಿ ತಪ್ಪು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದವರಿಗೆ ಶಿಕ್ಷೆ ಇಲ್ಲ. ಆದರೆ, ಖಾಸಗಿ ಸಂಸ್ಥೆಯವರು ತಪ್ಪು ಮಾಡಿದರೆ ಶಿಕ್ಷೆ. ಇದು ನ್ಯಾಯವೆ, ಇದು ನ್ಯಾಯವಲ್ಲ. ಮಾನ್ಯ ಸಭಾಪತಿಯವರೇ, ತಾವು 35 ವರ್ಷಗಳಿಂದ ಈ ಸದನದ ಸದಸ್ಯರಾಗಿದ್ದಿರಿ. ಶಿಕ್ಷಕರ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ಸರ್ಕಾರ ಅನುಮತಿಯನ್ನು ಕೊಟ್ಟ ಮೇಲೆ, ಆ ಹುದ್ದೆಗಳನ್ನು ತುಂಬಲು ಅಧಿಕಾರಿಗಳಿಗೆ ಅನುಮತಿ ಕೊಡುವುದಕ್ಕೆ ಎಷ್ಟು ವರ್ಷಗಳು ಬೇಕು. ಆ ಹುದ್ದೆಗಳನ್ನು ತುಂಬಲು ಅನುಮತಿ ನೀಡಬೇಕು, ಅವರನ್ನು ತುಂಬಿಸಿಕೊಳ್ಳಬೇಕು, approval ಕೊಡಬೇಕು. ಐದಾರು ವರ್ಷ, ಹತ್ತಾರು ವರ್ಷ ಅದಕ್ಕೆ ಅನುಮತಿ ಕೊಡುವುದಿಲ್ಲ ಎಂದ ಮೇಲೆ, ಇನ್ನು ಗುಣಾತ್ಮಕ ಶಿಕ್ಷಣವನ್ನು ಹೇಗೆ ನೀರಿಕ್ಷಿಸುತ್ತೀರಿ. ಶಾಲೆಗಳಲ್ಲಿ ಮೂರರಿಂದ ನಾಲ್ಕು ಜನ ಶಿಕ್ಷಕರು ಇರುವುದೇ ಇಲ್ಲ. ಅವರು ಒಂದು ಬಹಳ ಒಳ್ಳೆಯ ಪಾಯಿಂಟ್ ಅನ್ನು ಹೇಳಿದರು, 'ಎತ್ತಿಗೆ ಜ್ವರ ಬಂದರೆ, ಎಮ್ಮೆಗೆ ಬರೆ' ಎಂದು. ಈಗ mathematicsನಲ್ಲಿ ಕಡಿಮೆ ಪರ್ಸೆಂಟೇಜ್ ಬಂದರೆ ಕನ್ನಡಕ್ಕೆ ಅನುಮತಿ ಇಲ್ಲ. ಮಾನ್ಯ ಸಂಕನೂರರವರು ಬಹಳ ಸೊಗಸಾಗಿ ಹೇಳಿದರು. ಆದುದರಿಂದ ನನ್ನ ಮನವಿ ಇಷ್ಟೆ, ಹಳೇ ಕಾಲದಲ್ಲಿ ಕೃತಯುಗದಲ್ಲಿ ವಿದ್ಯಾರ್ಥಿಗಳನ್ನು ಕೊಂದು ಪಾಠ ಮಾಡುತ್ತಿದ್ದರು ಎಂದು ನಮ್ಮ ಹಿರಿಯರು ಹೇಳುತ್ತಾರೆ. ಕೊಂದು ಮೇಲೆ ಹೇಗೆ ಪಾಠ ಮಾಡಿದರೋ ಎಂದು ನನಗೆ ಗೊತ್ತಿಲ್ಲ. ತ್ರೇತಾಯುಗದಲ್ಲಿ ವಿದ್ಯಾರ್ಥಿಗಳಿಗೆ ಹೊಡೆದು ಪಾಠ ಮಾಡುತ್ತಿದ್ದರು. ದ್ವಾಪರಯುಗದಲ್ಲಿ ವಿದ್ಯಾರ್ಥಿಗಳನ್ನು ದಂಡಿಸಿ ಪಾಠ ಮಾಡುತ್ತಿದ್ದರು. ಕಲಿಯುಗದಲ್ಲಿ ವಿದ್ಯಾರ್ಥಿಗಳಿಗೆ ನಮಸ್ಕಾರ ಮಾಡಿ, ದಯವಿಟ್ಟು ನೀವು ಬರದೇ ಇದ್ದರೆ ನಮಗೆ ಊಟವಿಲ್ಲ. ದಯವಿಟ್ಟು ಶಾಲೆಗೆ ಬನ್ನಿ ಎನ್ನುವಂತಹ ಮಟ್ಟಕ್ಕೆ ಬಂದಿದ್ದೇವೆ. ಅಂದರೆ, ವಿದ್ಯಾರ್ಥಿಗಳನ್ನು ದಂಡಿಸುವ ಹಕ್ಕು ಶಿಕ್ಷಕರಿಗೆ ಇಲ್ಲ. ಹೊಡೆಯುವ ಹಕ್ಕು ಶಿಕ್ಷಕರಿಗೆ ಇಲ್ಲ. ಒಬ್ಬ ಶಿಕ್ಷಕ ಶಾಲೆಗೆ ಕೋಲು ತೆಗೆದುಕೊಂಡು ಹೋದರೆ, ಅವರನ್ನು ನೀವು suspend ಮಾಡುತ್ತೀರಿ. ಇಂತಹ ವ್ಯವಸ್ಥೆಯಲ್ಲಿ, ಏನಾದರೂ ಮಾನದಂಡವನ್ನು fix ಮಾಡಬೇಕಲ್ಲವೆ. ನೀವು ಮಾನದಂಡವನ್ನು fix ಮಾಡದೆ, 1ರಿಂದ 10ನೇ ತರಗತಿಯವರೆಗೂ ಹಾಗೆಯೇ ಹೋಗಿ, promotion ಕೊಟ್ಟು 10ನೇ ತರಗತಿಯಲ್ಲಿ ಎಲ್ಲಾರೂ Distinction ಬರಬೇಕು ಎಂದರೆ ಇದು ಯಾವ ನ್ಯಾಯ. ಇದಕ್ಕೆ ಚರ್ಚೆಯಾಗಬೇಕು, ಚರ್ಚೆಯಾದ ಮೇಲೆ, ಇಂತಹ ವೈಜ್ಞಾನಿಕವಾಗಿ ತರಬೇಕು, ಅಲ್ಲಿಯವರೆಗೂ ಇದನ್ನು ತಡೆಹಿಡಿಯಬೇಕು ಮತ್ತೆ ಹುದ್ದೆಗಳನ್ನು ತುಂಬಲು ಅನುಮತಿ ಕೊಡಬೇಕು ಎನ್ನುವಂತಹ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ತಾವು ಕೂಡ ಶಿಕ್ಷಣ ಇಲಾಖೆಯಲ್ಲಿ ಸಚಿವರಾಗಿ ಕೆಲಸ ಮಾಡಿರುವಂತಹವರು. ನನಗೆ ಸರ್ಕಾರಕ್ಕಿಂತ ಹೆಚ್ಚಾಗಿ ಅಧಿಕಾರಿಗಳ ಧೋರಣೆಯೇ ಅರ್ಥವಾಗುತ್ತಿಲ್ಲ. ನಾವು ಇಲ್ಲಿ ಕೇಳಿರುವುದು ಏನು? ಶಿಕ್ಷಕರನ್ನು

ತುಂಬಿಕೊಳ್ಳುವುದಕ್ಕೆ ಅನುಮತಿ. ತಾವು ಶಿಕ್ಷಕರನ್ನು ತುಂಬಿಕೊಳ್ಳುವುದಕ್ಕೆ ಅನುಮತಿ ಕೊಟ್ಟಿದ್ದೀರಿ. ನೀವು ಇನ್ನು ಶಿಕ್ಷಕರನೇ ಕೊಟ್ಟಿಲ್ಲ, ಫಲಿತಾಂಶವನ್ನು ಏಕೆ ಕೇಳುತ್ತೀರಿ? ಇದು ನನಗೆ ಅರ್ಥವಾಗುತ್ತಿಲ್ಲ. ನೀವು ಶಿಕ್ಷಕರನ್ನು ಕೊಟ್ಟು, ಫಲಿತಾಂಶವನ್ನು ಕೇಳಿ. Aided ನವರಿಗೆ Three-man Committee ಎಂದು grantನ fileಗಳು ಬರುತ್ತವೆ. ಈಗಾಗಲೇ 1985 ರಿಂದ 1995 ರವರೆಗೆ ಬಂದಂತಹ ಎಲ್ಲಾ ಸಂಸ್ಥೆಗಳ ಸುಮಾರು 1400 ಸಂಸ್ಥೆಗಳಿಗೆ ಅನುದಾನವನ್ನು ಕೊಟ್ಟಿದ್ದಾರೆ. ಇನ್ನು ಉಳಿದಿರುವುದು 120 ಫೈಲ್‌ಗಳು. ಅದರಲ್ಲಿ ಅವರ ಮುಂದೆ ಬಂದಿರುವುದು ಸುಮಾರು 82 ಫೈಲ್‌ಗಳು. ಈ 82 ಫೈಲ್‌ಗಳಿಗೆ ಏತಕ್ಕೆ ಷರತ್ತು? 1400 ಫೈಲ್‌ಗಳಿಗೆ ಷರತು ಇಲ್ಲ. ಆದರೆ ಈ 82 ಫೈಲ್‌ಗಳಿಗೆ ಷರತ್ತು. ಮಾನ್ಯ ಸಚಿವರೇ, ದುರಂತವೆನೆಂದು ನಿಮಗೆ ಗೊತ್ತೆ. ಇಲ್ಲಿ ನೀವು grant file ಅನ್ನು move ಮಾಡಿದ ತಕ್ಷಣ. ಮ್ಯಾನೇಜ್‌ಮೆಂಟ್‌ನವರು ಸಂಬಳ ಕೊಡುವುದಿಲ್ಲ, ಇವರು grant ಕೊಡುವುದಿಲ್ಲ. ಹೀಗಾದರೆ ಶಿಕ್ಷಕರ ಏನು ಸಾಯುವುದೆ? ಶಿಕ್ಷಕರು ತಮ್ಮ ಹೆಂಡತಿ ಮಕ್ಕಳ ಒಡವೆಗಳನ್ನು ಅಡವಿಟ್ಟಿದ್ದಾರೆ. ಎಲ್ಲವನ್ನು ತರಬೇಕಾದರೆ ಎಷ್ಟು ಲಕ್ಷ ಖರ್ಚಾಗಿದೆ ಎಂದು ನಿಮಗೆ ಗೊತ್ತಿದೆ. ನೀವು single window system ಮಾಡಿಲ್ಲ. ಎಲ್ಲಾ ಮಾಡಿದರು ಈಗ rejection. ಮಾನ್ಯ ಸಂಕನೂರರವರೇ ತಾವು ಒಂದು condition ಬಗ್ಗೆ ಹೇಳಿದ್ದೀರಿ. ಆದರೆ, 13 condition ಇರುವಂತಹ ಪತ್ರ 15 ದಿನಗಳ ಹಿಂದೆ ಬಂದಿದೆ. ಮಾನ್ಯ ಸಭಾಪತಿಯವರೇ, ತಾವು ಮಂತ್ರಿಗಳಾಗಿದ್ದಾಗ ಅನುದಾನವನ್ನು ನೀಡಿದ್ದೀರಿ. ಮೂರು ವರ್ಷಗಳು ಆದಮೇಲೆ ಷರತ್ತನ್ನು ಹಾಕಿ ಎಂದು ಹೇಳಿದ್ದೀರಿ, ಅದು ಆಗಬೇಕಲ್ಲವೆ? ಇವತ್ತು ಆ 82 ಕಾಲೇಜುಗಳು ಅನುದಾನಕ್ಕೆ Three-man Committee ಹೇಳಿರುವಂತೆ infrastructure ಗಾಗಿ, ನೀವು ಸುಮ್ಮ ಸುಮ್ಮನೆ ಅನುದಾನವನ್ನು ಕೊಡುತ್ತಿಲ್ಲ. 20-25 ವರ್ಷಗಳ ಕಾಲ ಸ್ಥಳ, ಕಟ್ಟಡ ಎಲ್ಲವನ್ನು ಕೊಟ್ಟು ಬೆಳೆಸಿಕೊಂಡು ಬಂದಿದ್ದಾರೆ. ನೀವು ಈಗ grant ಕೊಡುವುದಕ್ಕೆ ತೀರ್ಮಾನವನ್ನು ತೆಗೆದುಕೊಂಡಿದ್ದೀರಿ. ನೀವು grant ಕೊಟ್ಟು, ಆಮೇಲೆ condition ಕೇಳಿ. ಪಾಪ ಶಿಕ್ಷಕರಿಗೆ ಮ್ಯಾನೇಜ್‌ಮೆಂಟ್‌ನವರು ಸಂಬಳ ಕೊಡುವುದಿಲ್ಲ, ನೀವು ಸಂಬಳ ಕೊಡುವುದಿಲ್ಲ ಹಾಗಾದರೆ ಅವರು ಆತ್ಮಹತ್ಯೆ ಮಾಡಿಕೊಳ್ಳುವುದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಮುಂದು...)**

(116) 06.07.2018 2.50 ವೈಎಲ್-ಎಂಡಿ

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು):-** ನೇರವಾಗಿ ಈ ರೀತಿಯ ದುರಂತವನ್ನು ತಪ್ಪಿಸಿ, ಮಾನ್ಯ ಸಚಿವರು ಎಲ್ಲಾ ಷರತ್ತುಗಳನ್ನು ಹೊರತುಪಡಿಸಬೇಕು. ಈ ಹಿಂದೆ ತಾವು ಶಿಕ್ಷಣ ಸಚಿವರಾಗಿದ್ದ ಕಾಲದಲ್ಲಿ ಯಾವ ಸುತ್ತೋಲೆ ಇತ್ತೋ, ಆ ಸುತ್ತೋಲೆ ಪ್ರಕಾರ ತಾವು ನಡೆದುಕೊಳ್ಳಿ. ಅಧಿಕಾರಿಗಳ ಮಾತನ್ನು ಕೇಳಿದರೆ ಇಡೀ ಶಿಕ್ಷಣ ಇಲಾಖೆಯೇ ಹಾಳಾಗುತ್ತದೆ. ದಯಮಾಡಿ ಷರತ್ತಿನಿಂದ ಪಾರು ಮಾಡಿ, ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಉತ್ತರವನ್ನು ವಾಪಸ್ಸು ತೆಗೆದುಕೊಂಡು, ಹಿಂದಿನ ಸುತ್ತೋಲೆ ಪ್ರಕಾರ ಶಿಕ್ಷಕರಿಗೆ ಪರಿಹಾರ ಕೊಡುವಂತಹ ಕೆಲಸವನ್ನು ಮಾಡಬೇಕೆಂದು ಆಗ್ರಹಿಸುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರಾದ ಎಸ್.ವ್ಹಿ.ಸಂಕನೂರುರವರು ತಂದಿರತಕ್ಕ ಗಮನ ಸೆಳೆಯುವ ಸೂಚನೆಯನ್ನು ಸಂಪೂರ್ಣವಾಗಿ ಒಪ್ಪುತ್ತೇನೆ.

**ಸಭಾಪತಿಯವರು:-** ಈಗಾಗಲೇ ಸಮಯವಾಗಿದೆ ಸಲಹೆಯನ್ನು ನೀಡಿ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ನನ್ನ ಸಲಹೆ ಏನೆಂದರೆ, ಮೊದಲನೆಯದಾಗಿ, ಈಗಾಗಲೇ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು 'ಶಿಕ್ಷಕರು ಇಲ್ಲದೇ ಶಾಲೆಯನ್ನು ಹೇಗೆ ನಡೆಸುವುದು. ಫಲಿತಾಂಶವನ್ನು ಹೇಗೆ ಕೊಡುವುದೆಂದು' ಬಹಳ ಚೆನ್ನಾಗಿ ಹೇಳಿದ್ದಾರೆ. ಎರಡನೆಯದಾಗಿ, ಉಡುಪಿ ಮತ್ತು ಯಾದಗಿರಿ ಜಿಲ್ಲೆಗಳ ಫಲಿತಾಂಶವನ್ನು ಹೋಲಿಸಿ ಸಹ ಉದಾಹರಣೆ ನೀಡಿದ್ದರು. ಅದೂ ಕೂಡಾ ಸೂಕ್ತವಾದ ಸಲಹೆಯಾಗಿದ್ದು, ಅದನ್ನು ಸಹ ಮಾನ್ಯ ಸಚಿವರು ಗಮನದಲ್ಲಿಟ್ಟುಕೊಳ್ಳಬೇಕು. 70%, 80% ಫಲಿತಾಂಶವನ್ನು ತೆಗೆದುಕೊಳ್ಳುವ ಭಾಗಗಳ ಶಾಲೆಗಳಿಗೆ ಶಿಕ್ಷಕರನ್ನು ಕೊಡುವುದಿಲ್ಲವೆಂದರೆ, ಯಾದಗಿರಿಯಂತಹ ಪ್ರದೇಶಗಳಲ್ಲಿ ಶೇಕಡ 40 ರಷ್ಟು ಫಲಿತಾಂಶ ಬರುವುದನ್ನೇ ಮಾನದಂಡವಾಗಿ ತೆಗೆದುಕೊಂಡರೆ, ನಮ್ಮಲ್ಲಿ 50 ವರ್ಷವಾದರೂ ಹೆಚ್ಚಿನ ಫಲಿತಾಂಶವನ್ನು ತೆಗೆದುಕೊಳ್ಳುವಂತಹ ವ್ಯವಸ್ಥೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸರ್ಕಾರಿ ಶಾಲೆಗಳಲ್ಲಿ 42 percent vacancy ಇದೆ. ಇನ್ನು ಅನುದಾನಿತ ಶಾಲೆಗಳೆಂದರೆ, ದೇವರೇ ಗತಿಯಂತಾಗುತ್ತದೆ. ಈಗಾಗಲೇ ಬೀದರ್ ಜಿಲ್ಲೆಯ ಬಾಲ್ಕಿಯಲ್ಲಿನ ಸತ್ಯಾನಿಕೇತನ್ ಶಾಲೆಯ ಶಿಕ್ಷಕರಿಗೆ 9 ತಿಂಗಳಿನಿಂದ ಸಂಬಳವನ್ನು ನೀಡಿಲ್ಲ ಎಂಬ ಸಲಹೆಯನ್ನು ಸಭೆಯಲ್ಲಿ ತಮಗೆ ನೀಡಿದ್ದೇನೆ. ಆದರೂ ಸಹ ಇದುವರೆಗೂ ಸಂಬಳವನ್ನು ಬಿಡುಗಡೆ ಮಾಡಿಲ್ಲ. ಕಾರಣ ಅಲ್ಲಿ ಶಿಕ್ಷಕರನ್ನೇ ನೇಮಕ ಮಾಡುವುದಿಲ್ಲ. ಶಿಕ್ಷಣ ಸಚಿವರಾಗಿದ್ದ ಸಮಯದಲ್ಲಿ ತಮಗೂ ಸಹ ಚೆನ್ನಾಗಿ ಗೊತ್ತಿದೆ. 1995ರಲ್ಲಿ ಬ್ಯಾನ್ ಇದ್ದಾಗ, ಆರ್ಥಿಕ ಮಿತವ್ಯಯ ಇದ್ದಾಗ,.... ಮಾನ್ಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿದ್ಧರಾಮಯ್ಯನವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ, ದಿನಾಂಕ 31.12.2012 ರವರೆಗೂ ಹೈಸ್ಕೂಲ್‌ಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ದಿನಾಂಕ 31.12.2014ರವರೆಗೂ ಪಿಯುಸಿ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಅವಕಾಶ ನೀಡಿದ್ದಾರೆ. ದಿನಾಂಕ 31.12.2016 ರವರೆಗೆ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಅವಕಾಶ ನೀಡಿದ್ದರೂ, ಅನುಮೋದನೆ ಮಾಡುವುದಕ್ಕೆ one after the other 13 ಷರತ್ತುಗಳನ್ನು impose ಮಾಡಿದಾಗ ಅದನ್ನು ತಂದು ನಿಮ್ಮ ಬಿಇಒ ಮತ್ತು ಡಿಡಿಪಿಐ ಅಧಿಕಾರಿಗಳು, Divisional Commerssionerate Office, ಈ ಎಲ್ಲಾ ಇಲಾಖೆಯ ಕಡೆ ಹೋಗಿ, ನಿಮ್ಮ ಹತ್ತಿರ ಹಿಂದಿರುಗಿ ಬರುವುದರೊಳಗೆ ಏನು ಕಥೆಯಾಗಿದೆ ಎಂಬುದನ್ನು ದಯಮಾಡಿ ಯಾರಾದರೂ ಒಬ್ಬರನ್ನು ಕರೆಸಿ, you get the practical information and practical difficulties of the Aided Institution's teachers and management. ಮ್ಯಾನೇಜ್‌ಮೆಂಟ್‌ನವರು ಸ್ವಲ್ಪ ಆರಾಮವಾಗಿ building infrastructure ಗೆ donation ತೆಗೆದುಕೊಂಡು ನೇಮಕಾತಿಯನ್ನು ಮಾಡಿಕೊಳ್ಳುತ್ತಾರೆ. ಹತ್ತತ್ತು ವರ್ಷ ಸಂಬಳವಿಲ್ಲದೇ ಒಂದು ದಿನಕ್ಕೆ ಕೇವಲ 100 ರೂಪಾಯಿಯಂತೆ ತಿಂಗಳಿಗೆ 3000 ರೂಪಾಯಿ ಸಂಬಳ ತೆಗೆದುಕೊಂಡು ಸಾಯುತ್ತಿರುವ ಶಿಕ್ಷಕರ ಕಥೆ ಏನು? ಮಾನ್ಯ ಸಚಿವರು ಅನುಮೋದನೆಯನ್ನು ಕೊಡದೆಯೇ ಲಕ್ಷಗಟ್ಟಲೆ ಹಣವನ್ನು ತೆಗೆದುಕೊಂಡು ಖರ್ಚು ಮಾಡುತ್ತಿದ್ದಾರೆ. You kindly look at your office. ದಯಮಾಡಿ ಎಷ್ಟು ಸಲ ತೊಂದರೆ ನೀಡುತ್ತಾರೆ ಎಂಬುದನ್ನು ನೋಡಿ. They are squeezing blood like anything. ಸ್ವಲ್ಪ ಕಛೇರಿಗಳಲ್ಲಿ ನೋಡಿ, ನಾಯಿ ತಿರುಗುವ ಹಾಗೆ ತಿರುಗುತ್ತಿದ್ದಾರೆ, ನಾನು ಇಂತಹ ನೋವಿನ ವಿಚಾರವನ್ನು practically ಫೋಟೋ ಸಮೇತ ಕೊಡುತ್ತೇನೆ. ನನ್ನ ಹತ್ತಿರ ಸಾಕಷ್ಟು ಮಾಹಿತಿ ಇದೆ. ಯಾರೋ ಒಬ್ಬರು ಬೀದರ್ ಜಿಲ್ಲೆಯಿಂದ ಬಂದು, ಸರ್ಕಾರ ಅನುಮೋದನೆ ಕೊಡಿ ಎಂದು ಕೇಳಿದರೆ ಅದಕ್ಕೆ ಒಂದು ಷರತ್ತು ಹಾಕುತ್ತೀರಿ. ಆ ಷರತ್ತನ್ನು ಪೂರೈಸಲು ಸರ್ಟಿಫಿಕೇಟ್ ಕೊಟ್ಟರೆ ಇನ್ನೊಂದು ಷರತ್ತನ್ನು ವಿಧಿಸುತ್ತೀರಿ. ಒಂದು certificate ತಂದಿರುತ್ತಾರೆ, ಆದರೆ ಆತನಿಗೆ ಮತ್ತೊಂದು ಕೇಳುತ್ತಾರೆ. ಹೀಗೆ ಆ ವ್ಯಕ್ತಿಯು 13 ಬಾರಿ ಬಂದಾದ ಮೇಲೆ 14, 15ನೇ condition ನ್ನು ವಿಧಿಸುತ್ತಾರಲ್ಲಾ ಅದು ಸರಿಯೇ ಎಂಬುದನ್ನು ಹೇಳಿ. ಅದಕೋಸ್ಕರ ಮಾನ್ಯ ಸಚಿವರು ಕೂಡಲೇ ಈ ಆದೇಶವನ್ನು ವಾಪಸ್ಸು ತೆಗೆದುಕೊಂಡು, ಶಿಕ್ಷಕರಿಗೆ ಅನುಮೋದನೆ ನೀಡಬೇಕೆಂದು ಮನವಿ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಸ್.ವ್ಹಿ.ಸಂಕನೂರ್‌ರವರು ತಂದಿರತಕ್ಕಂಥ ಗಮನ ಸೆಳೆಯುವ ಸೂಚನೆಯನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಇದು ಒಂದು ಅವೈಜ್ಞಾನಿಕವಾಗಿರತಕ್ಕಂಥದ್ದು. It is against natural justice. ಸರ್ಕಾರಿ ಶಾಲೆಗಳಿಗೆ conditions ಇಲ್ಲ. ಅನುದಾನಿತ ಶಾಲೆಗಳಿಗೆ ನೀವು ಶಿಕ್ಷಕರನ್ನೇ ನೇಮಕ ಮಾಡುವುದಿಲ್ಲ. ನಾನು ಶಿಕ್ಷಕರ ಮತ್ತು ಪದವೀಧರ್ರರ ಕ್ಷೇತ್ರದಲ್ಲಿ ಆಯ್ಕೆಯಾಗಿದ್ದಂತಹ ಸಂದರ್ಭದಲ್ಲಿ ಶಾಲೆಗಳಿಗೆ ಹೋಗುತ್ತಿದ್ದೆ. ಅಲ್ಲಿಗೆ ಹೋದಾಗ ಯಾವುದೇ ರೀತಿಯಲ್ಲಿ ಶಿಕ್ಷಕರನ್ನು ನೇಮಕ ಮಾಡದೇ ಫಲಿತಾಂಶ ನೀಡಿ ಎಂದರೆ ಹೇಗೆ? ಸರ್ಕಾರ ಏನು ಕೆಲಸ ಮಾಡಬೇಕಾಗಿತ್ತೋ, ಆ ಕೆಲಸವನ್ನು ಅನುದಾನಿತ ಶಾಲೆಗಳು ಮಾಡುತ್ತಿವೆ. ಅನುದಾನಿತ ಶಾಲೆಯಲ್ಲಿರುವವರು ಶಿಕ್ಷಕರು, ಅತಿಥಿ ಉಪನ್ಯಾಸಕರನ್ನು ನೇಮಿಸಿ, ಶಾಲೆಯನ್ನು ನಡೆಸುತ್ತಿದ್ದಾರೆ. ಅವರಿಗೆ ಮತ್ತೆ ಷರತ್ತನ್ನು ವಿಧಿಸಿ ತೊಂದರೆಯನ್ನು ಕೊಡುವುದು ಸರಿಯಾದ ಕ್ರಮವಲ್ಲ. ಹೆಚ್ಚಿನ ಫಲಿತಾಂಶ ಬರದೇ ಇರುವ ಶಾಲೆಯ ಎಷ್ಟೋ ಮಕ್ಕಳು ಇವತ್ತು ಉದ್ಯೋಗವನ್ನು ಪಡೆದುಕೊಂಡಿದ್ದಾರೆ. ಹಾಗಾಗಿ ತಂದಿರತಕ್ಕಂಥ ಪ್ರಸ್ತುತ ವಿಷಯವನ್ನು ಮಾಡುವುದಕ್ಕೆ ಹೋಗುವುದು ಬೇಡ. ಅದು ಸರಿಯಲ್ಲ. ಇದನ್ನು withdraw ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಎನ್.ಮಹೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಅಭಿಪ್ರಾಯಪಟ್ಟಂತಹ ಅನೇಕ.....

**ಸಭಾಪತಿಯವರು:-** ಮಾನ್ಯ ಸಚಿವರೆ, ನಿಮ್ಮ ಪರಿಸ್ಥಿತಿ ಬಹಳ ಕಷ್ಟದಲ್ಲಿದೆ.

**ಶ್ರೀ ಎನ್.ಮಹೇಶ್:-** ಮಾನ್ಯ ಸಭಾಪತಿಯವರೇ, ಇರಲಿ. ನನ್ನ ಪ್ರಕಾರ ಗೌರವಾನ್ವಿತ ಸದಸ್ಯರುಗಳು ಕೊಟ್ಟಿರತಕ್ಕಂಥ ಅನೇಕ ಅಭಿಪ್ರಾಯಗಳು ಸ್ವಲ್ಪ sensible ಎಂದು ಅನ್ನಿಸುತ್ತಿದೆ. ಶಿಕ್ಷಣ ಇಲಾಖೆಯು ಪೊಲೀಸ್ ಇಲಾಖೆ ಮತ್ತು ರೆವಿನ್ಯೂ ಇಲಾಖೆಯ ರೀತಿ ಇಲ್ಲ. ತುಂಬಾ democratic ಆಗಿ ಕೆಲಸ ಮಾಡಬೇಕಾಗಿದೆ. ನನಗೆ ಆ ಒಂದು ಕನಿಷ್ಠ ಪ್ರಜ್ಞೆ ಇದೆ. ನಾನು policy ಮಾಡುವಾಗ ಶಿಕ್ಷಣ ತಜ್ಞರ ಅಭಿಪ್ರಾಯ ಪಡೆಯಬೇಕೆಂಬುದನ್ನು ಒಪ್ಪುತ್ತೇನೆ. ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರು ಇದ್ದಂತಹ ಸಂದರ್ಭದಲ್ಲಿ ಹೋರಾಟ ಮಾಡಿ, ಒಂದು ನಿರ್ಣಯವಾಗಿದೆ ಎಂಬ ಅಭಿಪ್ರಾಯವನ್ನು ಹೇಳಿದ್ದಾರೆ. ಅದನ್ನು ಸಹ ಪರಿಗಣನೆಗೆ ತೆಗೆದುಕೊಳ್ಳೋಣ. ಹಾಗೆಯೇ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸದೆಯೇ ಫಲಿತಾಂಶವನ್ನು ಹೇಗೇ ನಿರೀಕ್ಷೆ ಮಾಡುತ್ತೀರಿ ಎಂಬುದು ಮಾನ್ಯ ಸದಸ್ಯರುಗಳ ಅಭಿಪ್ರಾಯವಾಗಿದೆ. ಇದೆಲ್ಲವನ್ನೂ ಗಣನೆಗೆ ತೆಗೆದುಕೊಂಡು, ಈಗ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರತಕ್ಕಂಥ ಆದೇಶವನ್ನು ಹೇಗೇ ಬದಲಾಯಿಸಬೇಕು, ಆ ಆದೇಶವನ್ನು ಹೇಗೆ ಬದಲಾವಣೆ ಮಾಡಬೇಕು,....

ಶ್ರೀ ಎಸ್.ವ್ಹಿ.ಸಂಕನೂರು(ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಹೇಗೆ ...

(ಗೊಂದಲ)

**ಸಭಾಪತಿಯವರು**:- ಮಾನ್ಯ ಸಚಿವರು ಮಾತನಾಡಲಿ. ಮಾನ್ಯ ಸದಸ್ಯರೆ ಕುಳಿತುಕೊಳ್ಳಿ.

**ಶ್ರೀ ಎನ್.ಮಹೇಶ್**:- ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ನಿಮ್ಮೆಲ್ಲರ ಅಭಿಪ್ರಾಯವನ್ನು ಗೌರವಿಸುತ್ತೇನೆ. ಆ ಕಾರಣದಿಂದಾಗಿ ಮಾನ್ಯ ಸಭಾಪತಿಯವರು ಸಹ ಬಹಳ ವರ್ಷಗಳಿಂದ ಶಿಕ್ಷಣ ಸಚಿವರಾಗಿ ಈ ಸದನದಲ್ಲಿ ಕೆಲಸ ಮಾಡಿದ್ದಾರೆ. ನಿಮ್ಮೆಲ್ಲರ ಅಭಿಪ್ರಾಯವನ್ನು ತೆಗೆದುಕೊಂಡು, ಈ ನಿಯಮದ ಬಗ್ಗೆ ಏನು ಮಾಡಬಹುದೆಂದು ತೀರ್ಮಾನ ಮಾಡೋಣ.

**ಶ್ರೀ ಎಸ್.ವ್ಹಿ.ಸಂಕನೂರು**:- ಮಾನ್ಯ ಸಭಾಪತಿಯವರೇ, ಆ ರೀತಿ ಆಗುವುದಿಲ್ಲ.

**ಸಭಾಪತಿಯವರು**:- ಮಾನ್ಯ ಸದಸ್ಯರೆ, ಏಕೆ ಆಗುವುದಿಲ್ಲಾ? ಕುಳಿತುಕೊಳ್ಳಿ.

**ಶ್ರೀ ಎನ್.ಮಹೇಶ್**:- ಮಾನ್ಯ ಸಭಾಪತಿಯವರೇ, ನನಗೆ ಸ್ವಲ್ಪ ಅವಕಾಶ ಕೊಡಿ. ಸದನದಲ್ಲಿಯೇ ತೀರ್ಮಾನ ಮಾಡುವುದು ಬೇಡ. ಒಂದು ಸಲ ಸರಿಯಾಗಿ ನೋಡಿ ತೀರ್ಮಾನ ಮಾಡೋಣ ಎಂದು ಹೇಳುತ್ತೇನೆ. ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿಯ ಷರತ್ತು ಏಕೆ ಎಂದು ಮಾನ್ಯ ಸದಸ್ಯರು ಅಭಿಪ್ರಾಯವನ್ನು ಮಂಡನೆ ಮಾಡಿದ್ದಾರೆ, ಆ ರೀತಿ ಏನು ಮಾಡುತ್ತಿಲ್ಲ. ಉಡುಪಿ ಜಿಲ್ಲೆಯಲ್ಲಿ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳು 90% ಫಲಿತಾಂಶ ಗಳಿಸಿದರೆ, ಯಾರು ಉಡುಪಿ ಜಿಲ್ಲೆ ಮತ್ತು ಮಂಗಳೂರು ಜಿಲ್ಲೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಯನ್ನು ನಡೆಸುತ್ತಾರೆಯೋ, ಅವರಿಗೆ ಮಾತ್ರ ಸೀಮಿತವಾಗುತ್ತದೆ ಹೊರತು, ಬೀದರ್ ಜಿಲ್ಲೆ, ಯಾದಗಿರಿ ಜಿಲ್ಲೆ, ಚಾಮರಾಜನಗರ ಜಿಲ್ಲೆಗೆ ಅನ್ವಯಿಸುವುದಿಲ್ಲ.

(ಗೊಂದಲ)

**ಸಭಾಪತಿಯವರು**:- ಒಂದು ನಿಮಿಷ. ಉಡುಪಿ ಜಿಲ್ಲೆಯವರು ಯಾದಗಿರಿ ಜಿಲ್ಲೆಗೆ ಬಂದು ಅರ್ಜಿ ಹಾಕಿ ನೌಕರಿಯನ್ನು ಪಡೆದುಕೊಳ್ಳುತ್ತಾರೆ. ಆದ್ದರಿಂದ ಮಾನ್ಯ ಸಚಿವರೇ ಇದು ಸರಿಯಾದಂತಹ ಕ್ರಮವಲ್ಲ. ಇದು ಅವೈಜ್ಞಾನಿಕತೆಯಿಂದ ಕೂಡಿದೇ ಎಂಬುದನ್ನು ಎಲ್ಲರೂ ಸೇರಿ ಒಪ್ಪಿಕೊಳ್ಳುತ್ತೇನೆ. ದಯಮಾಡಿ ನಾವು-ನೀವು ಎಲ್ಲರೂ ಸೇರಿ ಚರ್ಚೆ ಮಾಡೋಣ. ಈ ರೀತಿಯ ಕಾನೂನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತರುವುದರಿಂದ ಯಾವುದೇ ಕನ್ನಡ ಮಾಧ್ಯಮ ಶಾಲೆಗಳು ಉದ್ಧಾರವಾಗುವುದಿಲ್ಲ. ದಯವಿಟ್ಟು ಈ ನಿಯಮವನ್ನು ಮರುಪರಿಶೀಲನೆ ಮಾಡಿ, ಹಿಂತೆಗೆಯುವಂತಹ ಒಂದು ಮಟ್ಟಕ್ಕೆ ತರಬೇಕೆಂದು ನಾನೂ ಸಹ ಸಲಹೆ ಕೊಡುವುದಕ್ಕೆ ಬಯಸುತ್ತೇನೆ.

**ಶ್ರೀ ಎನ್.ಮಹೇಶ್**:- ಮಾನ್ಯ ಸಭಾಪತಿಯವರೇ, ನಿಮ್ಮ ಜೊತೆ ಹಾಗೂ ಮಾನ್ಯ ಸದಸ್ಯರಗಳ ಜೊತೆ ಕುಳಿತುಕೊಂಡು ಮಾತನಾಡಿ ಒಂದು ತೀರ್ಮಾನಕ್ಕೆ ಬರೋಣ.

(ಗೊಂದಲ)

ಸಭಾಪತಿಯವರು:- ಈಗ ಸದನವನ್ನು ಮುಂದೂಡಿ ದಿನಾಂಕ 09ನೇ ಜುಲೈ 2018ರ ಸೋಮವಾರ ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳುವುದು.

**(ಸದನವು ಮಧ್ಯಾಹ್ನ 2 ಗಂಟೆ 58 ನಿಮಿಷಕ್ಕೆ ಮುಕ್ತಾಯಗೊಂಡಿತು. ಮತ್ತೆ ದಿನಾಂಕ 09ನೇ ಜುಲೈ ಮಾಹೇ 2018ರ ಸೋಮವಾರ ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"